# ಕನ್ನಡ ಭಾಷಾ (ರಾಷ್ಟ್ರೀಯ ಶಿಕ್ಷಣ ನೀತಿ) ಪಠ್ಯ

# ನಿರ್ವಹಣಾ ಸೌರಭ – 4

## ಬಿ.ಬಿ.ಎ. ನಾಲ್ಕನೇ ಸೆಮಿಸ್ಟರ್


ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಂಪಾದಕರು

**ಡಾ. ಭಾಗ್ಯಲಕ್ಷ್ಮಿ ಎಸ್.**

**ಪ್ರೊ. ಆರ್. ವಸಂತಕುಮಾರ್**

**ಡಾ. ಪೂರ್ಣಿಮಾ ಎಸ್.**



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

**Kannada Bhasha Pathya Nirvahana Sourabha**
A prescribed NEP text book for B.B.A. Degree Course (Fourth Semester)

Chief Editor :

**Dr. Prashanth G. Nayak**
(Professor of Kannada & Director,
Kannada Bharathi, Kuvempu University,
Shankaraghatta, B.R. Project, Shimoga Dist.)

Edited by **:**

**Dr. Bhagyalakshmi S.**

**Prof. Vasanthkumar R.**
**Dr. Poornima S.**

Published by

**Bengaluru City University**, Bengaluru

Pages : 123

© : Bengaluru City University

First Print : 2022

ಪ್ರಧಾನ ಸಂಪಾದಕರು :

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ :

**ಡಾ. ಕೆ. ವೈ. ನಾರಾಯಣಸ್ವಾಮಿ**

**ಡಾ. ಎಂ. ಎಸ್. ಆಶಾದೇವಿ**

ಸಂಯೋಜಕರು :

**ಡಾ. ಬೆಳಕೆರೆ ಲಿಂಗರಾಯ್ಯ**

ಪ್ರಕಾಶಕರು :

**ಬೆಂಗಳೂರು ನಗರ ವಿಶ್ವವಿದ್ಯಾಲಯ**

# ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ

ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಲಿಂಗರಾಜಗಾಂಧಿ**
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಆತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ

ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ. ಪ್ರಶಾಂತ ಜಿ. ನಾಯಕ**
ಪ್ರಾಧ್ಯಾಪಕರು

# ಪರಿವಿಡಿ

## ಘಟಕ 1. ಯುದ್ಧ


ಆಶಯ : ಹುಡುಗಿಗೆ ಬಿದ್ದ ಕೊನೆಯ ಕನಸು – ಎಚ್ಚೆಸ್ವಿ 9

1. ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳ್ – ರನ್ನ 10
2. ಒಳಸಂಚುಗಳು – ಗಳಗನಾಥ 14
3. ಉಕ್ರೇನ್–ರಷ್ಯಾ ಯುದ್ಧದ ಆರ್ಥಿಕ ಪರಿಣಾಮಗಳು – ಪ್ರೊ॥ ಟಿ. ಎಸ್. ವೇಣುಗೋಪಾಲ್ 25
4. ಯೋಧ ಮತ್ತು ಹೆಂಗಸು – ಸು. ರಂ. ಎಕ್ಕುಂಡಿ (ಓದುಪಠ್ಯ) 35


## ಘಟಕ 2. ರಾಷ್ಟ್ರೀಯತೆ


ಆಶಯ : ಒಂದುಗೂಡಿ ಹಾಡುವಾ – ಸೋಮಶೇಖರ ಇಮ್ರಾಪುರ 37

1. ಐಕ್ಯಗಾನ – ಜಿ. ಎಸ್. ಶಿವರುದ್ರಪ್ಪ 38
2. ಲೋಕನಾಯಕರ ಮಧ್ಯದಲ್ಲಿ – ಎಂ. ವಿ. ಇನಾಂದಾರ್ 39
3. ನಿರಾಶ್ರಿತೆ – ಎಚ್. ವಿ. ಸಾವಿತ್ರಮ್ಮ 43
4. ಭಗತ್ ಸಿಂಗ್ – ಡಾ. ಜಿ. ರಾಮಕೃಷ್ಣ (ಓದುಪಠ್ಯ) 55


## ಘಟಕ 3. ಶಾಂತಿ


ಆಶಯ : ಮಹಾತ್ಮ – ಗಂಗಾಧರ ಚಿತ್ತಾಲ 62

1. ನಲ್ಲಿಯಲ್ಲಿ ನೀರು ಬಂದಿತು!!! – ಸದಾಶಿವ 63
2. ಚಂದ್ರಹಾಸನಭ್ಯುದಯ – ಲಕ್ಷ್ಮೀಶ 74
3. 'ಕ್ಷಮಿಸಿವರನೆಲೆ ತಂದೆ! ತಾವೇನನೆಸಗಿದಪೆ ವೆಂದರಿಯರಿವರು.' – ಗೋವಿಂದ ಪೈ 78
4. ದಯವೆ ದೇಹ ಧರಿಸಿದಂತಿದ್ದ ದಸರಯ್ಯ – ವೀರಮ್ಮರು – ಡಾ. ಸಿದ್ಧಯ್ಯ ಪುರಾಣಿಕ (ಓದುಪಠ್ಯ) 82

## ಘಟಕ 4. ಸಂಕೀರ್ಣ


1. ಕ್ಲೈಮಾಕ್ಸ್ – ಅನುಪಮಾ ನಿರಂಜನ 89
2. ಚಿಪ್ಕೋ ಚಳುವಳಿ – ಸುಂದರಲಾಲ್ ಬಹುಗುಣ 93
3. ಗರುಡಗಂಬದ ದಾಸಯ್ಯ – ಗೊರೂರು ರಾಮಸ್ವಾಮಿ ಐಯಂಗಾರ್ 104
4. ಜೀವನದಿ – ಡಾ. ಪದ್ಮಿನಿ ನಾಗರಾಜು (ಓದುಪಠ್ಯ) 108

# ಯುದ್ಧ

## ಆಶಯ :

## 1. ಹುಡುಗಿಗೆ ಬಿದ್ದ ಕೊನೆಯ ಕನಸು

– ಎಚ್ಚೆಸ್ವಿ

ಇದು ಹಿರೋಷಿಮಾದಲ್ಲಿ ಆದದ್ದು : ಯುದ್ಧ ಮುಗಿ
ದಿತ್ತು. ಯುದ್ಧದಕ್ರೂರ ಪರಿಣಾಮದಿಂದ ಕಾ–
ಯಿಲೆ ಬಿದ್ದ ಹೆಣ್ಣುಮಗು ಹಳೆಯ ನಂಬಿಕೆಯಂತೆ
ಒಂದು ಸಾವಿರ ಹಾಳೆಹಕ್ಕಿಗಳ ಮಾಡಿದರೆ
ಗುಣವಾಗುವುದು ರೋಗ. ನಂಬಿ ಈ ಮುದ್ದುಮಗು
ಮಾಡುವುದು ಕಾಗದದ ಹಕ್ಕಿಗಳ, ಹಾಸಿಗೆಯ
ಮೇಲೆ ಕೂತಂತೆಯೇ. ಬೆಳಗಾದರದೆ ಕೆಲಸ.
ಕಾಗದವ ಕತ್ತರಿಸಿ, ಮಡಿಸಿ, ರೆಕ್ಕೆಗಳನ್ನು
ಬಿಡಿಸಿ, ಕೊಕ್ಕನ್ನು ತಿದ್ದಿ, ಕೊಕ್ಕರೆಯ ತಯ್ಯಾರಿ.
ರಾತ್ರಿ ಮಲಗುವ ಮುನ್ನ ಎಣಿಸುವಳು ಡೈರಿಯಲಿ
ಚುಕ್ಕಿಗಳನ್ನಿಟ್ಟು. ಮಲಗಿದ್ದಾಳೆ ಒಂದು ದಿನ
ಎಣಿಸುತ್ತ ಕನಸಿನಲ್ಲೇ ಹಕ್ಕಿಲೆಕ್ಕವನು :
'ನಾನು ಮಾಡಿದ್ದಂತು ಸಾವಿರದ ಮುನ್ನೂರು
ಹಾಗಾದರಿನ್ನೊಂದ ಮುಗಿಸಿ ಹೋದವರ್‍ಯಾರು?'

■

## 2. ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳ್

**(ರನ್ನನ ಗದಾಯುದ್ಧದ ಆಯ್ದಭಾಗ)** – ರನ್ನ

ಕನತ್ಕನಕಚಾಮರಂ ಧವಳಚಾಮರಂ ಕಯ್ಗಳೊಳ್ ।
ಮನಂ ಚಲಿಸೆ ಮಾಸಿ ತಾಱಿದ ಕುರುಳ್ಗಳುಂ ತನ್ನ ಬಿ ॥
ನ್ನನಿರ್ದ ಮೊಗದಿಂ ತಪಿಲ್ದಿರೆ ವಿಲಾಸಮುಂ ಮುಂದೆ ಕಂ ।
ಡನಲ್ಲಿ ಕಮಳಾಕ್ಷಿಯಂ ವೃಷಭಲಕ್ಷಣಂ ಲಕ್ಷ್ಮಿಯಂ॥ ೧ ॥

ಅಂತು ಕುಂಭಸಂಭವಸಂಭವಂ ಕಮಲನಾಭನ ಹೃದಯಭವನಾಮೃತಾಬ್ಧಿ ಸಂಭವೆಯಂ ಕಂಡು–ನೀನಾರ್ಗೆ ಎತ್ತಣಿಂದಂ ಬಂದೆ ಎಲ್ಲಿಗೆ ಪೋದಪೆ ಎಂದು ಬೆಸಗೊಳೆ –

ಅಮೃತಪಯೋಧಿಮಂಥನದೆ ಪುಟ್ಟಿದೆನಬ್ಜವನಾಂತರಾಳದೊಳ್ ।
ರಮಿಯಿಸಿ ಪದ್ಮನಾಭನುರದೊಳ್ ನೆಲಸಿರ್ಪ ಮಹಾನುಭಾವೆಯಾಂ ॥
ಕಮಲೆಯೆನಿನ್ನೆಗಂ ಕುರುಮಹೀಪತಿಯೊಳ್ ನೆಲಸಿರ್ದೆನೀಗಳು ।
ತ್ತಮಪುರುಷೋತ್ತಮಂ ಬೆಸಸೆ ಪಾಂಡವರೊಳ್ ನೆಲಸಲ್ಕೆ ಪೋದಪೆಂ ॥ ೨ ॥

ಎಂಬುದುಂ ದ್ರೋಣನಂದನಂ ನಾರಾಯಣಂ ಬೆಸಸೆ ಪೋದಪೆನೆಂದ ಲಕ್ಷ್ಮಿಯ ಮಾತನವಧಾರಿಸಿ ಮುಗುಳ್ನಗೆನಕ್ಕು –

ಚಳಮತಿಯಾದೆ ನೀಂ ಜಲಧಿಸಂಭವೆಯಪ್ಪುದಱಿಂ ಸರೋಜಸಂ ।
ಕುಳರಜದಿಂದೆ ನೀಂ ಪೊರೆದು ರಾಜಸದೊಳ್ ನೆಲಸಿರ್ಪೆ ಗೋವುಗಾ ॥
ದಳವಟೆದಿರ್ದ ಕೃಷ್ಣನೊಡನಿರ್ದುದಱಿಂದಮೆ ಗೋವಿಯಾದೆಯ ।
ಗ್ಗಳದ ವಿವೇಕಮಿಲ್ಲ ನಿನಗೆತ್ತಱಿವಾ ಪುರುಷಾಂತರಂಗಳಾ ॥ ೩ ॥

ಮಲಿನರನೆ ಪೊರ್ದುವಯ್ ನಿ ।
ರ್ಮಲರತ್ತಲ್ ಪೊರ್ದಲೊಲ್ಲೆ ನೀಂ ಕನ್ನಡಿಯೊಳ್ ॥
ಜಲಮಿರ್ಪ ದೆಸೆಯೊಳಿರ್ದಾ ।
ಕಿಲುಂಬುಗೊಂಡಿರ್ದ ದೆಸೆಯೊಳಿರ್ದುದೆ ಪೇೞ್ಗಂ ॥ ೪ ॥

ಕುರುರಾಜಂ ರಾಜರಾಜಂ ಸಕಲವಸುಮತೀಕಾಂತನಿರ್ದಂತೆ ಯುದ್ಧಾ ।
[ತುರನಿನ್ನೀ] ಸಾಹಸಾಂಕಂ ಕುರುಕುಳಪತಿಯಿರ್ದಂತೆ ಮೆಟ್ಟಿಟ್ಟು ದಾಮೋ ॥

ದರನೆಂದೀ ಕಜ್ಜದೊಳ್ ನೀಂ ತೊಡರ್ದು ಮರುಳೆ ಬೆಂಡಾಗದಿರ್ ಪೋಗು ನೀಂ ಚೆ ।
ಚ್ಚರಮತ್ತಿನ್ನೆತ್ತವೋಪೌ ಪರಿಭವಿಸಿದಪೆಂ ನಿನ್ನನಿಂ ಕಾವನಾವೊಂ ॥ ೫ ॥

ಎಂದಶ್ವತ್ಥಾಮನುದ್ದಾಮಕೋಪಾಟೋಪಬದ್ಧಭ್ರುಕುಟಿಯಂ ತರಳತಾಮ್ರಲೋಚನನುಮಾಗೆ

ಅತ್ತಲಸುರಾರಿ ಬೆಸಸಿದ ।
ನಿತ್ತಲ್ ರುದ್ರಾವತಾರನೆಟೆದೊಯ್ದಪನಿಂ ॥
[ತ] ತ್ತ ಪುಲಿಯಿತ್ತ ದರಿಯೆಂ ।
ದತ್ತಿತ್ತಡಿಯಿಡದೆ ಲಕ್ಷ್ಮಿ ತಳವೆಳಗಾದಳ್ ॥ ೬ ॥

ಅಂತು ತಳವೆಳಗಾದ ಲಕ್ಷ್ಮೀಕಾಂತೆಯ ಚಳದಳಿಕುಳವಿನೀಳಕುಟಿಲಕುಂತಲಂಗಳಂ ತಳಮಾಟಿ ತೆಗೆದು ಕುರುಕುಲಕುಟುಂಬನ ಘಟಚೇಟಿಯಂ ಕೊಂಡು ಪೋಪಂತೆ ಮಗುಟಿ ಕೊಂಡು ಪೋಗಿ ಭೀಮಸೇನನ ಗದಾಘಾತದೊಳೂರುಭಂಗಮುಂ ಪದಾಘಾತದೊಳ್ ಮಕುಟಭಂಗಮುಮಾಗೆ ಸುರಳ್ದ ತೆರಳ್ದು ಸುಯೋಧನನಿರೆ–

ಕುರುರಾಜಂ ತೊಡೆವೇನೆಗೆ ।
ನರಳನೆ ಕುಱುವಾದ ತೊಡೆದು ಬೇನೆಗೆ ಕಂಡರ್ ॥
ನರಳ್ವಂತೆ ನರಳದರಸಂ ।
ವಿರೋಧಿಯಿಂದಾದ ಮಾನಹಾನಿಗೆ ನೊಂದಂ ॥ ೭ ॥

ಅಂತೆನಿಸಿದ ಕುರುರಾಜನಂದನನಂ ಗುರುನಂದನಂ ನೋಡಿ –

ಕುಳಿಕನ ಪಲ್ಗಳಂ ಮುಱಿಯೆ ಮೋದಿದರಾರ್ ಕುಡುಪಿಂದೆ ಸಿಂಹಮಂ ।
ಮುಳಿಯಿಸಿ ದಾಡೆಯಂ ಪಿಡಿದು ಕಿಟ್ತಿವರಾರ್ ಮದಹಸ್ತಿಯಂ ಭಯಂ ॥
ಗೊಳೆ ನೆಲಕಿಕ್ಕಿ ಕೋಡೆರಡುಮಂ ಕುಸಿಯೊತ್ತಿದರಾರ್ ಸುರಾದ್ರಿನಿ ।
ಶ್ಚಳನಿಬಿಡೋರುಮಂಡಲಮನಾರುಡಿದರ್ ಫಣಿರಾಜಕೇತನಾ ॥ ೮ ॥

ಎಂದು ಗುರುನಂದನಂ ವಿಪ್ರಳಾಪಂಗೆಯ್ದು ತನ್ನ ಮೇಲುದಱ ಸೆಱಗಿಂದಾತನ ತಲೆಯ ಮೇಲೆ ಕೆದಱಿರ್ದ ಭೀಮಸೇನನ ಚರಣರಜಮಂ ತೊಡೆದು ಕಳೆದು –

ಎನ್ನಂ ವಂಚಿಸಿ ಬಂದುದ ।
ಱೆನ್ನಿನಗನಿತಾಯ್ತುವಸ್ಥೆ ಕುರು [ರಾಜಾ] ನೀ ॥
ನಿನ್ನುಂ ಪತಿಕಾರ್ಯಮನಱೆ ।

[ತೆನ್ನಂ] ನೋಡೆನ್ನ ಶಕ್ತಿಯಂ ಭಕ್ತಿಯುಮಂ ॥ ೯ ॥

ಎಂದು ನುಡಿದ ಭಾರದ್ವಾಜತನೂಜನನುಡಿಗೆ ರಾಜರಾಜನವಧಾರಿಸಿ –

ಅರಿಚರಣಪಾಂಸು ಪತ್ತಿರೆ ।
ಶರೀರಮಂ ತೊಡೆದು ಕಳೆದೆ ವಸ್ತ್ರಾಂಚಲದಿಂ ॥
ಗುರುನಂದನ ನೀನೆನ್ನೀ ।
ಪರಿಭವಪಾಂಸುವನದೆಂತು ಪೇೞ್ ಕಳೆದಪೆಯೋ ॥ ೧೦ ॥

ಎಂದು ನುಡಿದ ಸುಯೋಧನಂಗೆ –

ಇದುವಂ ನೋಡುವೆನಿನ್ನುಮೆನ್ನೊಡಲೊಳೆನ್ನೀ, ಪ್ರಾಣಮುಳ್ಳನ್ನಮೋ ।
ವದೆ ಕೌಂತೇಯರನಿಕ್ಕಿ ಪಂದಲೆಗಳೆಂ ತಂದೆನ್ನ ಮುಂದಿಕ್ಕು ಕೂ ॥
ರದ ದಾಯಾದರ ಮಿಕ್ಕ ಪಂದಲೆಗಳಂ ಕಣ್ಣಾಱೆ ಕಂಡೆನ್ನ ಚಿ ।
ತ್ತದೊಳೊಂದುಂ ತೊದಳಿಲ್ಲದೆನ್ನ ಸುಗುಣಕ್ಕುತ್ಕ್ರಾಂತಿಯಂ ಮಾಡುವೆಂ ॥ ೧೧ ॥

ಎಂಬುದುಮದಾವ ಗಹನಮಂತೆಗೆಯ್ವೆನೆಂದು ಪೂಣ್ದು ಮಹೀಕಾಂತೆಯುಮಂ ಶ್ರೀಕಾಂತೆಯುಮಂ ಕಣ್ಗೆಡೆ ಜಡಿಯೆ –

ಉರಗೇಂದ್ರಫಣಾಮಣಿ ನೂ ।
ಪುರಮಣಿ ಜಲರಾಶಿ ರತ್ನಮೇಖಲೆಯೆನಿಪಾ ॥
ಕುರುಧರೆ ನಿಜರೂಪದೆ ಬಂ ।
ದಿರದಾ ಗುರುಸೂನುಗಟ್ಕೆ ಬೆಸನೇನೆಂದಳ್ ॥ ೧೨ ॥

ಒರ್ವಳ್ ಕೊಡೆವಿಡಿವುದು ಮ ।
ತ್ತೊರ್ವಳ್ ಚಾಮರಮನಿಕ್ಕುತಿರ್ಪುದು ಕುರುವಂ ॥
ಶೋರ್ವೀಪತಿಗಾಂ ಬರ್ಪಿನ ।
ಮಿರ್ವರುಮಿಂತಿರ್ಪುದೆಂದನಶ್ವತ್ಥಾಮಂ ॥ ೧೩ ॥

ಅಂತಿರ್ವರುಂ ನಿಯೋಜಿಸಿ ನೇಸಱ್ ಪಡುವಿನಮಿರ್ದು ನಿಜಪತಿಯಂ ಬೀೞ್ಕೊಂಡು ಪಯಣಂಬೋಗಿ ಹಸ್ತಿನಾಪುರಮಂ ಪೊಕ್ಕು ಅಲ್ಲಿ –

ಪಾಂಡವರ ಶಂಕೆಯಿಂ ಶ್ರುತ ಸೋಮಕ ಪ್ರಭೃತಿಗಳಪ್ಪ ಪಂಚಪಾಂಡವರ ತಲೆಗಳಂ ಕೊಂಡು ತಟತಟನೆ ನೇಸಱ್ ಮೂಡುವಾಗಳ್ ಬಂದು – ಕೊಳ್

ನಿನ್ನ ನಚ್ಚಿನ ಪಾಂಡವರ ತಲೆಗಳಿವೆಯೆಂದು ದುರ್ಯೋಧನನ ಮುಂದಿಕ್ಕಿದೊಡಾ ಮಹಾನುಭಾವನಾ ತಲೆಗಳಂ ನೀಡುಂ ಭಾವಿಸಿ ನೋಡಿ–

ಪವನಜನಾಸ್ಯಮಲ್ತಿದವನಾನನಮಪ್ಪೊಡೆ ಮಟ್ಟಮಿರ್ದು ನೋ ।
ಡುವುದೆ ಮದೀಯವಕ್ತ್ರಮನೆ ಕೆಮ್ಮನೆ ಪೋಯ್ತಿಜೆವಿಲ್ಲದಾಯ್ತು ಪಾಂ ॥
ಡವರ ಶಿರಂಗಳಲ್ಲವಿವು ಪಾಂಡವಸೂನುಗಳಪ್ಪ ಪಂಚಪಾಂ ।
ಡವರ ಶಿರಂಗಳಂ ನೆಜೆ ವಿಚಾರಿಸದಕ್ಕಟ ಕೊಂಡು ಬರ್ಪುದೇ ॥ ೧೪ ॥

ಪರಮೇಶ್ವರಾವತಾರನೆ ।
ಪರಮಜ್ಞಾನಿಯೆ ವಿವೇಕವಿಕಳರವೊಲ್ ಬಾ ॥
ಲರ ತಲೆಯಂ ತಂದುದಱಿಂ ।
ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ ॥ ೧೫ ॥

ರೌದ್ರಪ್ರಾಯಶ್ಚಿತ್ತ ಪ್ರವರ್ತನಾರ್ಥಂ ಹಿಮವತ್ಪರ್ವತಕ್ಕೆ ಪೋಪುದುಂ [ಸುಯೋಧನಂ] ಚಿತ್ತಸಮಾಧಾನಂಗೆಯ್ದು ಅಜಿತನಂ ಸ್ಮರಿಯಿಸಿ ಪರಲೋಕಮಂ ಸಾಧಿಸುವೆನೆಂದು [ಕೃತವರ್ಮಾದಿಗಳಂ ಪರಿಜನಂಗಳುಮಂ] ವಿಸರ್ಜಿಸಿ ತದ್ದಿವಸಾವಸಾನಸಮಯದೊಳ್ ಪ್ರಾಣವಿಸರ್ಜನೋನ್ಮುಖ ನಾದನಿಂತು –

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ ।
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತಮಿರ್ದು ಚ ॥
ಕ್ರಾಂಕಮಗಲ್ವಿನಂ ಕ್ರಮದಿನಂಬರಂ ಬಿಸುಟುರ್ವಿಗಂಧಕಾ ।
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ॥ ೧೬ ॥

ಮೊದಲೊಳ್ ಶಂತನುಸೂನು ಪತ್ತುದಿವಸಂ ಚಾಪಾಗಮಾಚಾರ್ಯನ ।
ಯ್ದುದಿನಂ ಭಾಸ್ಕರನಂದನಂ ದಿನಯುಗಂ ಶಲ್ಯಂ ಭರಂಗೆಯ್ದು ಕಾ ।
ದಿ [ದೊಡಾದರ್ಧದಿನಂ ದಿನಾರ್ಧದ] ಗದಾಯುದ್ಧಂ ಪರಿಚ್ಛಿನ್ನಮಿಂ ।
ತು ದಿನಂಗಳ್ ಪದಿನೆಂಟಱಿಂ ಸಮೆದುದಾ ರೌದ್ರಾವಹಂ ಭಾರತಂ ॥ ೧೭ ॥

■

# ೩. ಒಳಸಂಚುಗಳು

**– ಗಳಗನಾಥ**

ತನ್ನನ್ನು ಸೆರೆಮನೆಯಲ್ಲಿಟ್ಟದ್ದಕ್ಕಾಗಿ ಕೃಷ್ಣದೇವರಾಯನ ಮೇಲೆ ಅಚ್ಯುತರಾಯನ ಸಿಟ್ಟು ವಿಶೇಷವಾಗಿದ್ದರಿಂದ, ಅಚ್ಯುತರಾಯನು ತಾನು ಸಿಂಹಾಸನವೇರಿದ ಕೂಡಲೆ ಕೃಷ್ಣದೇವರಾಯನ ಪಕ್ಷದ ರಾಮರಾಜನೇ ಮೊದಲಾದವರನ್ನು ಅಧಿಕಾರದಿಂದ ದೂರ ಮಾಡಿದನು. ಅಚ್ಯುತರಾಯನು ಪುಕ್ಕಲು ಸ್ವಭಾವದವನು. ರಾಜ್ಯಕಾರಭಾರಕ್ಕೆ ಎಷ್ಟು ಮಾತ್ರವೂ ಯೋಗ್ಯನಾದವನಲ್ಲ. ಆತನು ಎರಡನೆಯವರ ಬೊಗಸೆಯಿಂದ ನೀರು ಕುಡಿಯುವ ಯೋಗ್ಯತೆಯ ಮನುಷ್ಯನಾದದ್ದರಿಂದ, ಯಾವತ್ತು ರಾಜ್ಯಕಾರಭಾರವು ಆತನ ಹೊಸ ಮಂತ್ರಿಯಾದ ಹೋಜೆ ತಿರುಮಲರಾಯನ ಕೈಸೇರಲು, ಅವನೇ ನಿಜವಾದ ರಾಜನಾದನು. ತಿರುಮಲನಲ್ಲಿ ಕರ್ತೃತ್ವ ಶಕ್ತಿಯು ಲೇಶವಾದರೂ ಇದ್ದಿಲ್ಲ; ಆದರೆ ಡೌಲು ಬಹಳ. ಬಾಯಿಂದ ದೊಡ್ಡ ದೊಡ್ಡ ಮಾತುಗಳಾಡುವುದು ಹೆಚ್ಚು. ಬರುಬರುತ್ತ ಆತನ ಸೊಕ್ಕಿನ ನಡೆತೆಗೆ ಅವನ ಪಕ್ಷದ ಜನರು ಸಹ ಬೇಸತ್ತರು. ಯಾವಾಗ ಯಾರ ಅಪಮಾನವಾದೀತೆಂಬುದರ ನಿಯಮ ಉಳಿಯಲಿಲ್ಲ. ತಿರುಮಲನ ಪ್ರೀತಿಯ ಸೇವಕನಾದ ಮಣಿಮಲ್ಲನೆಂಬವನ ಪ್ರಸ್ಥವು ಹೆಚ್ಚಾಯಿತು; ಮಣಿಮಲ್ಲನ ಒಪ್ಪಿಗೆಯ ಹೊರತು ರಾಜ್ಯಕಾರಭಾರದ ಒಂದು ಕಡ್ಡಿ ಕೂಡ ಕದಲದಾಯಿತು. ರಾಜದರ್ಬಾರದೊಳಗಿನ ದೊಡ್ಡ ದೊಡ್ಡ ಜನರು ಕೂಡ ಮಣಿಮಲ್ಲನ ಮರ್ಜಿಯನ್ನು ಹಿಡಿಯಬೇಕಾಯಿತು. ಇದು ಬಹು ಜನರಿಗೆ ಸಹನವಾಗಲಿಲ್ಲ. ಕೆಲವರು ಈ ಸ್ಥಿತಿಯು ಹಿತಕರವಾದದ್ದಲ್ಲವೆಂದು ತಿರುಮಲನಿಗೆ ಹೇಳಲು, ಅದರಿಂದ ಪ್ರಯೋಜನವಾಗುವದೊತ್ತಟ್ಟಿಗೆ ಉಳಿದು. ತಿರುಮಲನು ಆ ಎಲ್ಲ ಸಂಗತಿಯನ್ನು ಮಣಿಮಲ್ಲನಿಗೆ ತಿಳಿಸಿದ್ದರಿಂದ, ಆ ಜನರ ಮೇಲೆ ಮಣಿಮಲ್ಲನ ಡಂಕು ಮಾತ್ರ ಕುಳಿತಿತು! ದರ್ಬಾರದ ಈ ಸ್ಥಿತಿಯು, ಹೊಂಚುಹಾಕಿಕೊಂಡು ಕುಳಿತಿದ್ದ ರಾಮರಾಜನ ಕಾರ್ಯಸಾಧನಕ್ಕೆ ಬಹಳ ಅನುಕೂಲವಾಯಿತು. ಆತನು ಮೊದಲು ಅಚ್ಯತರಾಯನ ಪಕ್ಷಕಟ್ಟಿದ ಹಾಗೆ ತೋರಿಸಿ, ತಿರುಮಲನ ನಿಂದೆಯನ್ನು ಜನರ ಮುಂದೆ ಮಾಡಹತ್ತಿದನು. ಮುಂದೆ ಬರುಬರುತ್ತ ತಿರುಮಲನನ್ನು ಶ್ಲಾಘಿಸಹತ್ತಿ, ಮಣಿಮಲ್ಲನನ್ನು ನಿರಾಕರಿಸಹತ್ತಿದನು. ಮೊದಮೊದಲಿಗೆ ಇದರಿಂದ ಏನೂ ಪ್ರಯೋಜನವಾಗದಿದ್ದರೂ ಬರಬರುತ್ತ

ಜನರು ರಾಮರಾಜನ ಮಾತಿಗೆ ಒಪ್ಪಿಕೊಳ್ಳಹತ್ತಿದರು. "ಅಚ್ಯುತರಾಯನೂ ಅಲ್ಲ. ತಿರುಮಲನೂ ಅಲ್ಲ. ಮಣಿಮಲ್ಲನಂಥ ಕ್ಷುದ್ರಮನುಷ್ಯನು ರಾಜ್ಯದ ಸೂತ್ರಗಳನ್ನಲ್ಲಾಡಿಸಿ ದೊಡ್ಡ ದೊಡ್ಡ ಮರ್ಯಾದಸ್ಥರ ಹಾಗೂ ಶೂರರ ಅಪಮಾನ ಮಾಡುವುದು ಯೋಗ್ಯವಾಗಬಹುದೋ," ಎಂದು ರಾಮರಾಜನು ಜನರನ್ನು ಕೇಳಹತ್ತಿದನು. ರಾಮರಾಜನ ಮಾತು ಬಹುಜನರಿಗೆ ಒಪ್ಪಿಗೆಯಾಗಿ, ಬರಬರುತ್ತ ರಾಮರಾಜನ ಪಕ್ಷವು ಸಮರ್ಥವಾಗ ಹತ್ತಿತ್ತು, ಹೀಗೆ ತನ್ನ ಮನಸ್ಸಿನಂತೆ ಎಲ್ಲ ಅನುಕೂಲತೆಯಾದದ್ದನ್ನು ನೋಡಿ, ರಾಮರಾಜನು ಒಂದು ದಿನ ಬಂಡಾಯವನ್ನು ಹೂಡಿ ತಿರುಮಲರಾಯನನ್ನು ಸೆರೆಹಿಡಿದು, ಆತನನ್ನು ಕಾರಾಗೃಹದಲ್ಲಿಡಬೇಕೆಂದು ಮಾಡಿದನು; ಆದರೆ ಈ ಸಂಗತಿಯು ಗುಪ್ತವಾಗಿ ಉಳಿಯಲಿಲ್ಲ. ತಿರುಮಲನ ಕಿವಿಗೆ ಮುಟ್ಟಿತು. ಆಗ ಆತನು ಗಾಬರಿಯಾಗಿ ಮುಂದೆಗಾಣದೆ ಆಲೋಚಿಸಹತ್ತಿದನು.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ, ವಿಜಯನಗರದ ರಾಯರ ಸೇಡು ತೀರಿಸಿಕೊಳ್ಳಲಿಕ್ಕೆ ಹೊಂಚುಹಾಕಿದ್ದ ವಿಜಾಪುರದ ಇಬ್ರಾಹಿಮ ಆದಿಲ ಶಹನು, ಈಗ ತುಂಗಭದ್ರೆಯ ಆಚೆಯಲ್ಲಿದ್ದ ದರ್ಗೆಯಲ್ಲಿ ತನ್ನ ಸೈನ್ಯದ ತಳ ಊರಿದ್ದನು. ಆತನು ಹೊತ್ತು ನೋಡಿ ವಿಜಯನಗರವನ್ನು ಕೈವಶ ಮಾಡಿಕೊಳ್ಳತಕ್ಕವನಿದ್ದನು. ವಿಜಯನಗರದೊಳಗಿನ ಈ ಅಂತಃಕಲಹದ ಸುದ್ದಿಗಳು ಕ್ಷಣಶಃ ಮುಟ್ಟುವಂತೆ ಆತನು ಗುಪ್ತಾಚಾರರನ್ನಿಟ್ಟಿದ್ದನು. ಇತ್ತ ಮೊದಲೇ ಗಾಬರಿಯಾಗಿದ್ದ ತಿರುಮಲನಿಗೆ ಹೆಚ್ಚು ಹೆಚ್ಚು ಭಯಂಕರವಾದ ಒಳಸಂಚಿನ ಸುದ್ದಿಗಳೂ ಮುಟ್ಟಹತ್ತಿದವು. ತನ್ನ ಮೇಲೆ ಎಲ್ಲರೂ ತಿರುಗಿಬಿದ್ದು ತನ್ನನ್ನೂ, ಅಚ್ಯುತರಾಯನನ್ನೂ ಇನ್ನೂ ನಾಲ್ಕೆಂಟು ದಿನಗಳಲ್ಲಿ ಹಿಡಿದು ಕೊಲ್ಲುವರೆಂಬ ವರ್ತಮಾನವನ್ನು ಸಹ ಆತನು ಕೇಳಿದನು. ತನ್ನ ಪ್ರಾಣರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಬೇಕಾದದ್ದನ್ನು ಮಾಡಿಕೊಳ್ಳಲಿಕ್ಕೆ ಆತನು ಸಿದ್ಧನಾದನು. ಆಗ ಮಣಿಮಲ್ಲನು ತಿರುಮಲನಿಗೆ ನೀವು ಆದಿಲಶಹನನ್ನು ವಿಜಯನಗರಕ್ಕೆ ಕರೆಸಿಕೊಂಡು, ಆತನ ಸ್ನೇಹವನ್ನು ಸಂಪಾದಿಸಿರಿ; ಅಂದರೆ ಎಲ್ಲ ಅರಿಷ್ಟವು ಹಿಂಗುವುದು, ಎಂದು ಹೇಳಿದನು. ವಿವೇಕಭ್ರಷ್ಟನಾದ ತಿರುಮಲನಿಗೆ ಕ್ಷುದ್ರ ಮಣಿಮಲ್ಲನ ಈ ಅದೂರದರ್ಶಿತನದಲ್ಲಿ ದೋಷಗಳು ತೋರಲಿಲ್ಲ. ಹೀಗೆ ಮಾಡಿದರೆ, ಮುಂದೆ ಸುಲ್ತಾನನನ್ನು ತಿರುಗಿ ಕಳಿಸಲಿಕ್ಕೆ ಎಷ್ಟು ಕಠಿಣವಾದೀತೆಂಬುದರ ಎಚ್ಚರವು ಆ ತಿಳಿಗೇಡಿ ಮಂತ್ರಿಗೆ ಹುಟ್ಟಲಿಲ್ಲ. ಕೂಡಲೆ ಆತನು ಸುಲ್ತಾನನ ಕಡೆಗೆ ವಕೀಲನನ್ನು ಕಳಿಸಿದನು. ಆದಿಲಶಹನ ವಕೀಲನ

ಮಾತುಗಳನ್ನು ಕೇಳಿ ಪರಮಾನಂದಪಟ್ಟನು. "ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದು ಹಾಲು ಅನ್ನ" ಎಂಬಂತೆ ಆತನಿಗೆ ಬಹಳ ಸಂತೋಷವಾಯಿತು. ಸುಲ್ತಾನನು ತಿರುಮಲನ ಮಾತಿಗೆ ಸಂತೋಷದಿಂದ ಒಪ್ಪಿಕೊಂಡ ಬಳಿಕ, ವಿಜಯನಗರವನ್ನು ಪ್ರವೇಶಿಸುವ ದಿನವನ್ನು ಅವರಿಬ್ಬರೂ ಗುಪ್ತ ರೀತಿಯಿಂದ ಗೊತ್ತುಮಾಡಿಕೊಂಡರು. ಇತ್ತ ರಾಮರಾಜನೂ ತಿರುಮಲನನ್ನು ಸೆರೆ ಹಿಡಿಯುವ ದಿನವನ್ನು ಗುಪ್ತರೀತಿಯಿಂದ ಗೊತ್ತುಮಾಡಿದ್ದನು. ತಿರುಮಲನು ಬಾದಶಾಹನೊಡನೆ ನಡೆಸಿದ ಕಾರಸ್ಥಾನದ ಗಂಧವು ಸಹ ರಾಮರಾಜನಿಗೆ ಬಿಡಿದಿದ್ದಲ್ಲ. ರಾಮರಾಜನು ತಿರುಮಲನನ್ನು, ಗೊತ್ತುಮಾಡಿದ ದಿವಸ ಸೆರೆಹಿಡಿಯಬೇಕೆಂದು ಸಂಚುಗಾರರೊಡನೆ ಯೋಚಿಸುತ್ತಿರುವುದರೊಳಗೆ ರಾಮರಾಜನ ಪಕ್ಷದವನೊಬ್ಬನು ತಿರುಮಲನ ಕಡೆಗೆ ಒಡೆದು. ರಾಮರಾಜನ ಒಳಸಂಚಿನ ದಿವಸವನ್ನು ತಿರುಮಲನಿಗೆ ತಿಳಿಸಿದನು. ಕೂಡಲೆ ತಿರುಮಲನು ಬಾದಶಾಹನನ್ನು ವಿಜಯನಗರಕ್ಕೆ ಕರೆಯಕಳುಹಿಸಿದನು. ಅತ್ತ, ಹಾದಿಯನ್ನೇ ನೋಡುತ್ತ ಕುಳಿತಿದ್ದ ಬಾದಶಾಹನು ತಡಮಾಡದೆ ಸೈನ್ಯದೊಡನೆ ಹೊರಟು ತುಂಗಭದ್ರೆಯನ್ನು ದಾಟಿ ವಿಜಯನಗರವನ್ನು ಪ್ರವೇಶಿಸಿದನು. ತಿರುಮಲನೂ, ಅಚ್ಯುತರಾಯನೂ ಆತನನ್ನು ಎದುರುಗೊಂಡು ಕರೆತಂದು ವಿಜಯನಗರದ ಸಿಂಹಾಸನದ ಮೇಲೆ ಕೂರಿಸಿ, ವಿಲಕ್ಷಣ ರೀತಿಯಿಂದ ಸತ್ಕಾರವನ್ನು ಮಾಡಿದರು, ಈವರೆಗೆ ಬಾದಶಾಹನು ವಿಜಯನಗರದ ಅರಸರ ಘನವಾದ ಐಶ್ವರ್ಯವನ್ನು ಜನರ ಮುಖದಿಂದ ಕೇಳುತ್ತ ಬಂದಿದ್ದನು; ಆತನಿಗೆ ಅದರ ಅನುಭವವಾಗಿದ್ದಿಲ್ಲ. ಈಗ ಆತನು ರಾಯರ ಐಶ್ವರ್ಯವನ್ನು ಕಣ್ಣುಮುಟ್ಟ ನೋಡಿ ಬೆರಗಾದನು. ಈ ಪ್ರಸಂಗದಲ್ಲಿ ತಿರುಮಲನು ಒಳ್ಳೇ ಸಂಕಟದಲ್ಲಿ ಸಿಕ್ಕಿರುವುದರಿಂದ ಆತನು ಹೇಳಿದ ಹಾಗೆ ಕೇಳುವೆನೆಂದು ತಿಳಿದು ಸುಲ್ತಾನನು ತಿರುಮಲನಿಗೆ ಬಹು ದೊಡ್ಡ ರಕಮಿನ ಕಪ್ಪವನ್ನು ಕೇಳಿದನು; ಮತ್ತು ಇಂದಿನಿಂದ ವಿಜಯನಗರದ ಅರಸರು ವಿಜಾಪುರದ ಬಾದಶಹರ ಮಾಂಡಲೀಕತ್ವವನ್ನು ಒಪ್ಪಿಕೊಳ್ಳಬೇಕೆಂದು ಹೇಳಿದನು. ಅದಕ್ಕೆಲ್ಲ ತಿರುಮಲನು ಒಪ್ಪಿಕೊಂಡನು.

ವಿಜಾಪುರದ ಬಾದಶಹನು ಅಕಸ್ಮತ್ತಾಗಿ ರಾಜಧಾನಿಯನ್ನು ಪ್ರವೇಶಿಸಿದ್ದನ್ನೂ ತಿರುಮಲನು ಬಾದಶಹನ ಬೇಡಿಕೆಗಳನ್ನೆಲ್ಲ ಪೂರ್ಣ ಮಾಡಿದ್ದನ್ನೂ ಕೇಳಿ ವಿಜಯನಗರದ ಜನರಿಗೆ ವ್ಯಸನವಾಯಿತು; ಆದರೆ ಅವರ ಸೈನ್ಯದ ಸಿದ್ಧತೆ ಇದ್ದಿಲ್ಲ. ಮೇಲೆ ಬಾದಶಹನು ತಮ್ಮ ಮನೆಯಲ್ಲಿ

ಬಂದು ಕುಳಿತುಕೊಂಡಿದ್ದನು. ಆತನನ್ನು ಹೊರಗೆ ಹಾಕದ ಹೊರತು ಯಾವ ಕೆಲಸ ಮಾಡಲಿಕ್ಕೂ ಬರುವಹಾಗಿದ್ದಿಲ್ಲ. ವಿಜಯನಗರದ ಪವಿತ್ರ ಸಿಂಹಾಸನದ ಮೇಲೆ ಕೇವಲ ಸ್ವಾರ್ಥಾಭಿಲಾಷೆಯಿಂದ ತಿರುಮಲನು ಸುಲ್ತಾನನ್ನು, ಕೂಡ್ರಿಸಿದ್ದಕ್ಕಾಗಿ ಜನರು ಸಂತಾಪಗೊಂಡರು. ಘನವಾದ ಯೋಗ್ಯತೆಯ ರಾಯರ ಚರಣಗಳ ಮೇಲೆ ಬಹುಜನ ಮಾಂಡಲಿಕರಾಜರು ಶಿರಸ್ಸುಗಳನ್ನಿಡುತ್ತಿರಲು, ಅಂಥ ರಾಯನು ಈಗ ಮುಸಲ್ಮಾನ ಬಾದಶಾಹನ ಮುಂದೆ ತಲೆಬಾಗಿಸುವ ಪ್ರಸಂಗ ತಂದದ್ದಕ್ಕಾಗಿ ಪ್ರತಿ ಒಬ್ಬರು ತಿರುಮಲನ ಮೇಲೆ ಹಲ್ಲು ಕಡಿಯಹತ್ತಿದ್ದರು. ಆದರೆ ಮಾಡುತ್ತಾರೇನು? ಬಾದಶಹನನ್ನು ವಿಜಯನಗರದಿಂದ ಹೊರಗೆ ಹಾಕದ ಹೊರತು ಏನು ಮಾಡಲಿಕ್ಕೂ ಬರುವ ಹಾಗಿದ್ದಿಲ್ಲ. ತನ್ನ ಒಳಸಂಚು ಸಫಲವಾಗುವದೊತ್ತಟ್ಟಿಗೆ ಉಳಿದು. ಮುಸಲ್ಮಾನ ಬಾದಶಾಹನು ರಾಜಧಾನಿಯಲ್ಲಿ ಬಂದು ಕುಳಿತಿದ್ದಕ್ಕಾಗಿ ರಾಮರಾಜನಿಗೆ ಬಹಳ ಸಂತಾಪವಾಯಿತು. ಆದರೆ ಆತನು ಅದನ್ನೆಲ್ಲ ನುಂಗಿಕೊಂಡನು. ತಿರುಮಲನನ್ನು ಮೋಸಗೊಳಿಸಿ, ಅವನ ಮುಖಾಂತರ ಬಾದಶಾಹನನ್ನು ರಾಜಧಾನಿಯ ಹೊರಗೆ ಕಳಿಸಬೇಕೆಂದು ಆತನು ಯೋಚಿಸಿದನು. ಆಗ ರಾಮರಾಜನು ಪ್ರಮುಖರೊಡನೆ ತಿರುಮಲನ ಬಳಿಗೆ ಹೋಗಿ ವಿನಯದಿಂದ ಆತನನ್ನು ಕುರಿತು – "ನೀವು ನಮಗೆ ಸರ್ವಥಾ ವಂದ್ಯರು. ನಿಮ್ಮ ವಿಷಯವಾಗಿ ನಮ್ಮ ಮನಸ್ಸಿನಲ್ಲಿ ಸ್ವಲ್ಪವಾದರೂ ಸಂಶಯವಿಲ್ಲ; ಆದರೆ ಈಗಿನ ಪ್ರಸಂಗದಲ್ಲಿ ನೀವು ವಿಜಯನಗರದ ಮೇಲೆ ಬಹು ದೊಡ್ಡ ಸಂಕಟವನ್ನು ತಂದಿರುವಿರಿ. ಬಾದಶಹನನ್ನು ಕರೆತಂದು ಸತ್ಕರಿಸಿದ್ದೆಲ್ಲ ಸರಿಯೆ; ಆದರೆ ಇದರ ಪರಿಣಾಮವು ನೆಟ್ಟಗಾದೀತೆಂದು ತೋರುವುದಿಲ್ಲ. ವೈರಿಯನ್ನು ಮನೆಯೊಳಗೆ ಕರಕೊಳ್ಳುವದು ಸುಲಭವು; ಆದರೆ ಆತನನ್ನು ಹೊರಗೆ ಹಾಕುವುದು ಕಠಿಣವಷ್ಟೇ ಅಲ್ಲ, ಅಶಕ್ಯವೆಂತಲೂ ಹೇಳಬಹುದು. ನಮ್ಮ ಹಿಂದೂಗಳ ರಾಜ್ಯವನ್ನು ನುಂಗಬೇಕೆಂದು ಜಪ್ಪು ಹಾಕಿಕೊಂಡು ಮುಸಲ್ಮಾನರ ಬಾದಶಾಹರು ಬಹುದಿವಸದಿಂದ ಕುಳಿತಿರುವರೆಂಬುದು ನಿಮಗೆ ಗೊತ್ತಿಲ್ಲವೆ? ಹೀಗಿದ್ದು ನೀವು ಈಗ ಅನಾಯಾಸವಾಗಿ ಅವರ ಕಾರ್ಯಕ್ಕೆ ಅನುಕೂಲ ಮಾಡಿಕೊಟ್ಟಿರುವಿರಲ್ಲ? ಅದಕ್ಕೆ ಏನೆನ್ನಬೇಕು? ನೀವು ಸ್ವಾಭಾವಿಕವಾಗಿ ಈ ಕಾರ್ಯ ಮಾಡಿದಿರಿ; ಆದರೆ ಪರಿಣಾಮವು ಬಹು ಭಯಂಕರವಾಗುವ ಹಾಗೆ ತೋರುತ್ತದೆ. ನೀವು ಬಾ, ಅಂದಕೂಡಲೆ ಬಾದಶಾಹನು ಬಂದಂತೆ. ನೀವು ಹೋಗೆಂದ ಕೂಡಲೆ ಆತನು ಈಗ ಹೋಗಲಾರನು. ನೀವು ಹ್ಯಾಗದಾರೂ ಮಾಡಿ ಆತನನ್ನು ತಿರುಗಿ ಕಳಿಸಿಕೊಡಿರಿ. ನಾವೆಲ್ಲರೂ ಬೇಕಾದ ಆಣೆ

ಮಾಡಿ ಹೇಳೆಂದರೂ ಹೇಳುತ್ತೇವೆ. ನಿಮ್ಮ ಮಾತನ್ನು ನಾವು ಸರ್ವಥಾಮೀರುವುದಿಲ್ಲ. ನೀವು ಹೇಳಿದ ಹಾಗೆ ಕೇಳುತ್ತೇವೆ. ಆದರೆ ವಿಜಯನಗರದ ಮೇಲೆ ಬಂದಿರುವ ಈ ಕಠಿಣ ಪ್ರಸಂಗವನ್ನು ದೂರಮಾಡಿರಿ" ಎಂದು ಹೇಳಿಕೊಂಡು ತಿರುಮಲನಿಗೆ ಮಿತಿಮೀರಿ ದೊಡ್ಡಸ್ತನವನ್ನು ಕೊಟ್ಟನು. ಮೂರ್ಖನಾದ, ತಿರುಮಲನು ಜನರ ಈ ದೊಡ್ಡಸ್ತಿಕೆಗೆ ಮರುಳಾದನು. ತಾನು ಹೋಗೆಂದರೆ ಬಾದಶಹನು ಹೋಗುವುದಿಲ್ಲೆಂದು ರಾಮರಾಜನು ಆಡಿದ್ದಕ್ಕಾಗಿ ತಿರುಮಲನಿಗೆ ಬಹಳ ಸಿಟ್ಟು ಬಂದಿತು. ಅಚ್ಯುತರಾಯನು ತನ್ನ ಕೈಯೊಳಗಿರುವಂತೆ, ಆದಿಲಶಹನೂ, ತನ್ನ ಕೈಯೊಳಗಿರುವನೆಂದು ಆ ತಿಳಿಗೇಡಿ ತಿರುಮಲನು ತಿಳಕೊಂಡಿದ್ದನು. ಜನರು ಸುಮ್ಮನಾದ ಮೇಲೆ ಆತನು ಅವರನ್ನು ಕುರಿತು ಆದ್ಯತೆಯಿಂದ – "ನಿಮಗೆ ರಾಜಕಾರಣದ ಸಂಗತಿಗಳೂ ಏನೂ ತಿಳಿಯುವುದಿಲ್ಲ. ನೀವು ನನ್ನ ವಿರುದ್ಧವಾಗಿ ಒಳಸಂಚು ನಡಿಸಿದ್ದಕ್ಕಾಗಿ ಈಗ ನಾನು ಬಾದಶಾಹನನ್ನು ಕರೆಸಿರುವದಿಲ್ಲ. ನಾಲ್ಕೈದು ಜನ ಮುಸಲ್ಮಾನ ಬಾದಶಹರು ನಮ್ಮ ರಾಜ್ಯವನ್ನು ನುಂಗಲಿಕ್ಕೆ ಹೊಂಚುಹಾಕಿ ಕುಳಿತು ಕೊಂಡಿರುವುದರಿಂದ ಅದರೊಳಗಿನ ಒಬ್ಬ ದೊಡ್ಡ ಬಾದಶಹನನ್ನು ನಮ್ಮ ಕಡೆಗೆ ಮಾಡಿ ಇಟ್ಟುಕೊಂಡಿರುವುದು ನೆಟ್ಟಗೆಂದು ತಿಳಿದು, ಬಾದಶಹನನ್ನು ಕರೆಸಿದ್ದೇನೆ. ನಿಮ್ಮ ಒಳಸಂಚನ್ನು ಮುರಿಯುವ ಸಾಮರ್ಥ್ಯವು ನನ್ನಲ್ಲಿಲ್ಲೆಂದು ತಿಳಿಯಬೇಡಿರಿ. ನಿಮ್ಮನ್ನು ಸಾಲಗಿಡಕ್ಕೆ ತೂಗುಹಾಕಿ ಕೊಲ್ಲಿಸುತ್ತಿದ್ದೆನು. ಇಲ್ಲವೆ ನೆಲದಲ್ಲಿ ಹುಗಿಸುತ್ತಿದ್ದೆನು. ವಿಜಯನಗರದ ಅಭಿಮಾನವು ನಿಮಗೇ ಇರುವುದಿಲ್ಲ. ಆ ರಾಜ್ಯದ ವಿಷಯವಾಗಿ ನಿಮಗಿಂತ ಹೆಚ್ಚು ಅಭಿಮಾನವು ನಮಗಿರುತ್ತದೆ. ನಿಮ್ಮ ಸಂಚಿನ ಸಂಗತಿಗಳೆಲ್ಲ ನಮಗೆ ಗೊತ್ತಾಗಿರುವುವು; ಆದರೆ ಮನೆಹೊಲಸು ತೆಗೆಯಲಿಕ್ಕೆ ಇದು ಸಮಯವಲ್ಲ. ಮೊದಲು ಹೊರಗಿನ ವೈರಿಗಳ ಸಮಾಚಾರವನ್ನು ತಕ್ಕೊಳ್ಳಬೇಕಾಗಿದೆ. ಈ ಮಾತು ನಿಮಗೆ ಹ್ಯಾಗೆ ತಿಳಿಯಬೇಕು. ಹೋಗಿರಿ, ನಿಮ್ಮ ಮೇಲೆ ನನ್ನ ಸಿಟ್ಟೂ ಇಲ್ಲ, ಲೋಭವೂ ಇಲ್ಲ. ನೀವು ನನ್ನ ಕಾಲು ಬೀಳಲಿಕ್ಕೆ ಬಂದದ್ದೇ ಸಾಕಾಯಿತು. ಇನ್ನು ನಾನು ನಿಮಗೆ ಹೆಚ್ಚಿಗೆ ಹೇಳುವುದಿಲ್ಲ. ಸುಮ್ಮನೆ ಇಲ್ಲದ ಚಿಂತೆಯಿಂದ ಕೊರಗಬೇಡಿರಿ. ನೋಡಿರಿ, ಇನ್ನು ಬಾದಶಹನನ್ನು ಹಾ ಹಾ ಅನ್ನುವದರೊಳಗೆ ಹ್ಯಾಗೆ ಹೊರಗೆ ಹಾಕುತ್ತೇನೆಂಬುದನ್ನು!"

ತಿರುಮಲನ ಈ ಮಾತುಗಳನ್ನು ಕೇಳಿ ಜನರು ಚಕಿತರಾದರು. ರಾಮರಾಜನಿಗೆ ಇನ್ನು ಏನು ಮಾತಾಡಬೇಕೆಂದು ತಿಳಿಯದೆ ಹೋಯಿತು. ಆತನು ತಿರುಗಿ ಬಹಳ ಮಾತಾಡಲಿಲ್ಲ; ಆದರೆ ಆತನಿಗೆ ತಿರುಮಲನ ಒಂದು

ಮಾತೂ ನಿಜವೆಂದು ತೋರಲಿಲ್ಲ. ತನ್ನ ಸ್ನೇಹಿತರು ತಿರುಮಲನ ಮಾತಿನಿಂದ ಮೋಸ ಹೋಗಿದ್ದರೆ, ಅವರನ್ನು ಎಚ್ಚರಗೊಳಿಸಬೇಕೆಂದು ಆತನು ನಿಶ್ಚಯಿಸಿದನು. ಆತನು ತಿರುಮಲನ ಮಾತಿಗೆ ಹೆದರಿ ಅಥವಾ ಮರುಳಾಗಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ತಿರುಮಲನ ಕಿವಿಗೆ, ಆತನ ಎದೆಯೊಡೆದು ನೀರಾಗುವಂಥ ಸುದ್ದಿಗಳು ಮುಟ್ಟುವಂತೆ ಏನು ವ್ಯವಸ್ಥೆ ಮಾಡಬೇಕೆಂದು ಆತನು ಯೋಚಿಸುತ್ತಲಿದ್ದನು. ಮುಂದೆ ಬಾದಶಹನ ಒಳಸಂಚಿನ ಭಯಂಕರವಾದ ಸುದ್ದಿಗಳು ತಿರುಮಲನ ಕಿವಿಗೆ ಮುಟ್ಟುವಂತೆ ರಾಮರಾಜನು ಮಾಡಿದನು. ಒಂದು ದಿನ, ಬಾದಶಾಹನು ವಿಜಯನಗರದಲ್ಲಿಯೇ ಕಾಲು ಊರಿ ನಿಲ್ಲುವ ಹವಣಿಕೆಯಲ್ಲಿರುತ್ತಾನೆಂಬ ಸುದ್ದಿಯು ತಿರುಮಲನಿಗೆ ಹತ್ತಿತು, ಅದನ್ನು ಕೇಳಿ ತಿರುಮಲನು–ಇನ್ನು ಮೇಲೆ ಬಾದಶಹನು ಪಟ್ಟಣ ಬಿಟ್ಟು ಹೋಗದಿದ್ದರೆ ಪರಿಣಾಮವಾಗಲಿಕ್ಕಿಲ್ಲ. ತಾನು ಒಪ್ಪಿಕೊಂಡಂತೆ ರಾಯರು ಬಾದಶಹನ ಮಾಂಡಲಿಕರಾಗುವದೊತ್ತಟ್ಟಿಗುಳಿದು, ನಮ್ಮ ಇಡಿಯ ರಾಜ್ಯವೇ ನಷ್ಟವಾದೀತೆಂಬ ಭಯವು ಆತನನ್ನು ಬಾಧಿಸಹತ್ತಿತು. ಅಷ್ಟರಲ್ಲಿ ಬಾದಶಹನು ತಿರುಮಲರಾಯನನ್ನು ಸೆರೆಹಿಡಿದು ತೋಫಿನಬಾಯಿಗೆ ಕೊಡಬೇಕೆಂದು ಮಾಡಿರುತ್ತಾನೆಂಬ ಸುದ್ದಿಯು ಹತ್ತಿತು. ಮತ್ತೊಂದು ದಿನ, ಬಾದಶಹನು ವಿಜಾಪುರದಿಂದ ಹೊಸ ದಂಡು ತರಿಸಿ ವಿಜಯನಗರವನ್ನು ಒಮ್ಮೆಲೆ ಸುಲಿದು ಸುಟ್ಟು ಸೂರೆ ಮಾಡಿ. ಹೆಂಗಸರನ್ನು ಸೆರೆ ಹಿಡಕೊಂಡು ಹೋಗಬೇಕೆಂತಲೂ, ದೇವಾಲಯಗಳನ್ನು ನಾಶಮಾಡ ಬೇಕೆಂತಲೂ, ಮಾಡಿರುತ್ತಾನೆಂಬ ಸುದ್ದಿಯನ್ನು ತಿರುಮಲನು ಕೇಳಿದನು. ಈ ಸುದ್ದಿಗಳೆಲ್ಲ ಹುಟ್ಟಲಿಕ್ಕೆ ರಾಮರಾಜನೇ ಕಾರಣನೆಂದು ವಾಚಕರು ಅರಿತಿರಬಹುದು. ಒಂದರ ಹಿಂದೊಂದರಂತೆ ಇಂಥ ಸುದ್ದಿಗಳನ್ನು ಕೇಳಿದ ತಿರುಮಲನ ಎದೆಯೊಡೆದು ನೀರಾಯಿತು. ಹಾ ಹಾ ಅನ್ನುವದರೊಳಗೆ ಬಾದಶಹನನ್ನು ಕಳಿಸುವೆನೆಂದು ಡೌಲು ಬಡೆದಿದ್ದ ಆತನಿಗೆ, ತಿರುಗಿ ಹೋಗೆಂದು ಬಾದಶಹನಿಗೆ ಹ್ಯಾಗೆ ಹೇಳಬೇಕೆಂಬುದೇ ಈಗ ತಿಳಿಯದಾಯಿತು.

ಇತ್ತ ಆದಿಲಶಹನು ವಿಜಯನಗರದ ಐಶ್ವರ್ಯವನ್ನೂ, ರಾಯರಿಂದ ತನಗಾದ ಸತ್ಕಾರವನ್ನೂ ನೋಡಿ, ಆಸೆಬುರುಕತನದಿಂದ ವಿಜಯನಗರವನ್ನು ಬಿಟ್ಟು ಹೋಗದಾದನು. ತಾನು ಹೇಳಿದಂತೆ ತಿರುಮಲರಾಯನು ಕೇಳಿದ್ದನ್ನು ನೋಡಿ, ಬಾದಶಹನ ಬಾಯಲ್ಲಿ ನಿಜವಾದ ನೀರು ಒಡೆದವು. ಕೆಲವು ದಿನ ಗಳವರೆಗಾದರೂ ವಿಜಯನಗರದಲ್ಲಿ ಇರಬೇಕೆಂದು ಆತನು ನಿಶ್ಚಯಿಸಿದನು;

ಆದರೆ ಅತ್ತ ಧೂರ್ತನಾದ ರಾಮರಾಜನು ಬಾದಶಹನಿಗೂ ಉಚ್ಚಾಟನೆಯನ್ನು ಕೊಡದೆ ಇರಲಿಲ್ಲ. ತಿರುಮಲನು ತನ್ನನ್ನು ಕರೆ ತಂದಿರುವುದು ತನ್ನನ್ನು ನಾಶಗೊಳಿಸುವುದಕ್ಕಾಗಿಯೇ ಎಂಬ ಸಂಶಯವು ಬಾದಶಹನಿಗೆ ಉತ್ಪನ್ನವಾಗುವಂತೆ ರಾಮರಾಜನು ಯುಕ್ತಿಯನ್ನು ಮಾಡಿದನು. ತಿರುಮಲನು ದಕ್ಷಿಣದ ನಿಟ್ಟಿನ ತನ್ನ ಸೈನ್ಯವನ್ನು ಮೆಲ್ಲಮೆಲ್ಲನೆ ಬರಮಾಡಿಕೊಳ್ಳುತ್ತಿದ್ದು, ಅದು ಬಂದಕೂಡಲೆ ತುಂಗಭದ್ರೆಯತ್ತಣ ಹಾದಿಯನ್ನು ಕಟ್ಟಿ, ತನ್ನ ನಾಶಮಾಡುವೆನೆಂಬ ಸಂಗತಿಯು ಬಾದಶಹನ ಕಿವಿಗೆ ಬಿದ್ದಿತು. ಈ ಮಾತಿನ ನಂಬಿಗೆಯು ಬಾದಶಹನಿಗೆ ಆಗಬೇಕೆಂದು ರಾಮರಾಜನು ಒಂದು ಯುಕ್ತಿಯನ್ನು ಮಾಡಿದನು. ಒಂದು ದಿವಸ ತಿರುಮಲನು ಬಾದಶಹನ ಭೆಟ್ಟಿಗೆ ಹೋದಾಗ, ತಿರುಮಲನ ನಂಬಿಗೆಯ ಸೇವಕನ ಮುಖಾಂತರ ಒಂದು ಪತ್ರವು ಬಾದಶಹನ ಸೇವಕರ ಕೈಗೆ ಸಿಗುವಂತೆ ರಾಮರಾಜನು ಕಪಟವನ್ನು ರಚಿಸಿದನು. ರಾಮರಾಜನ ಯುಕ್ತಿಯು ಸಫಲವಾಗಿ, ತಿರುಮಲನು ಹೋದಬಳಿಕ ಬಾದಶಹನ ಸೇವಕರು ಆ ಪತ್ರವನ್ನು ಬಾದಶಹನ ಕೈಯಲ್ಲಿ ಕೊಟ್ಟರು. ಪತ್ರವು ಕನ್ನಡದಲ್ಲಿ ಸಂಕ್ಷಿಪ್ತವಾಗಿ ಸಂದಿಗ್ಧ ರೀತಿಯಿಂದ ಬರೆಯಲ್ಪಟ್ಟಿತ್ತು. ದಕ್ಷಿಣದ ಒಬ್ಬ ದೊಡ್ಡ ಕಿಲ್ಲೇದಾರನು ಬರೆದಂತೆ ಅದು ಬರೆದಿದ್ದು, ಆ ಪತ್ರದಲ್ಲಿ "ನೀವು ಆಜ್ಞಾಪಿಸುವಂತೆ ಸೈನ್ಯವನ್ನು ಕಳಿಸಿಕೊಟ್ಟಿರುತ್ತೇನೆ. ಸಾಮಗ್ರಿಯು ಪರಿಪೂರ್ಣವಾಗಿರುತ್ತದೆ. ನಿಮ್ಮ ಇಚ್ಛೆಯೂ ಪೂರ್ಣವಾದರೆ ಹಾದಿಯೊಳಗಿನದೊಂದು ದೊಡ್ಡ ಮುಳ್ಳನ್ನು ಕಿತ್ತಿ ಚೆಲ್ಲಿದ ಹಾಗಾಗುತ್ತದೆ." ಎಂದು ಬರೆದಿತ್ತು. ಈ ಪತ್ರದ ಸಂಗತಿಯನ್ನು ಕೇಳಿದ ಕೂಡಲೆ ಬಾದಶಹನು ಸಂತೃಪ್ತನಾಗಿ ಈಗಲೇ ತಿರುಮಲನನ್ನು ಕರೆಸಿ ಈ ಪತ್ರದ ಅರ್ಥವೇನೆಂದು ಕೇಳಿ, ಅವನ ತಲೆ ಹಾರಿಸಬೇಕೆಂದು ಮಾಡಿದನು; ಆದರೆ ಆತನ ಮಂತ್ರಿಯಾದ ಆಸದಖಾನನು – "ಹೀಗೆ ಅವಸರ ಮಾಡುವುದು ಸರಿಯಲ್ಲ, ಸ್ವಲ್ಪ ಸಮಾಧಾನ ತಾಳಬೇಕು. ಇಲ್ಲದಿದ್ದರೆ ಸಂಕಟಕ್ಕೆ ಗುರಿಯಾಗಿ ಪೇಚಾಡಬೇಕಾದೀತು, ತಿರುಮಲನು ಈಗಲೇ ತುಂಗಭದ್ರೆಯ ಕಡೆಯ ಮಾರ್ಗವನ್ನು ಕಟ್ಟಿ ನಮ್ಮನ್ನು ನಾಶಮಾಡಿದರೆ ಏನು ಮಾಡಬೇಕು? ಆದ್ದರಿಂದ ಈಗ ದೊರೆತದ್ದರಲ್ಲಿ ಸಂತುಷ್ಟರಾಗಿ ನಾವು ಮೊದಲು ತುಂಗಭದ್ರೆಯನ್ನು ದಾಟಿಹೋಗೋಣ. ಒಂದು ಸೈನ್ಯದ ಭಾಗವು ಮಾತ್ರ ತುಂಗಭದ್ರೆಯ ಈಚೆಯ ಕಡೆಗೆ ಇರಲಿ" – ಎಂದು ಹೇಳಿದನು.

ಹೀಗೆ ಆಲೋಚನೆಗಳು ನಡೆದಿರುವಾಗ ಮತ್ತೊಂದು ಚಮತ್ಕಾರದ

ಸಂಗತಿಯು ಒದಗಿತು. ಬಾದಶಹನು ಒಂದು ದಿನ ಮುಂಜಾನೆ ಒಂದು ಸವಾರರ ಟೋಳಿಯನ್ನು ತುಂಗಭದ್ರೆಯ ಆಚೆಗೆ ಹೋಗಲಿಕ್ಕೆ ಕಳಿಸಿರಲು, ತುಂಗಭದ್ರೆಯ ಕಾವಲುಗಾರರು "ತಿರುಮಲರಾಯರು ಪ್ರತಿಬಂಧಿಸಲಿಕ್ಕೆ ಹೇಳಿದ್ದಾರೆಂದು" ಆ ಸವಾರನನ್ನು ಮುಂದಕ್ಕೆ ಹೋಗಗೊಡಲಿಲ್ಲ. ಈ ವರ್ತಮಾನವನ್ನು ಆ ಟೋಳಿಯ ಮುಖ್ಯಸ್ಥನು ಬಾದಶಹನ ಮುಂದೆ ಹೇಳಲು, ಆತನು ಗಾಬರಿಯಾದನು. ತಿರುಮಲನು ಮಹಾಕಪಟಿಯಿದ್ದು ನಮ್ಮ ನಾಶಮಾಡಲಿಕ್ಕೆ ಹಿಂದು ಮುಂದು ನೋಡುವವನಲ್ಲವಾದ್ದರಿಂದ, ನಾವು ಇನ್ನು ಬೇಗನೆ ವಿಜಯನಗರವನ್ನು ಬಿಡಬೇಕೆಂದು ಮಂತ್ರಿಯೊಡನೆ ಬಾದಶಹನು ಆಲೋಚಿಸಿದನು. ತಿರುಮಲನ ವಿಷಯವಾಗಿ ಸಂಶಯ ಬಂದಂತೆ ಈಗ ತಾನು ತೋರಿಸಿದರೆ, ಈಗಲೇ ಅನರ್ಥವಾದೀತೆಂದು ತಿಳಿದು, ಬಾದಶಹನು ತನ್ನ ಸಂಶಯವನ್ನು ಹೊರಗೆ ತೋರಗೊಡದೆ. ತಿರುಮಲನ ಸಮ್ಮತಿಯಿಂದ ತುಂಗಭದ್ರೆಯನ್ನು ದಾಟಲಿಕ್ಕೆ ಆತುರನಾದನು. ಹೀಗೆ ಚಾಣಾಕ್ಷನಾದ ರಾಮರಾಜನು ಬಾದಶಹನ ವಿಷಯವಾಗಿ ತಿರುಮಲನಲ್ಲಿಯೂ ತಿರುಮಲನ ವಿಷಯವಾಗಿ ಬಾದಶಹನಲ್ಲಿಯೂ ಸಂಶಯವೂ ಉತ್ಪನ್ನವಾಗುವಂತೆ ಮಾಡಿದನು. ಬಾದಶಹನು ಒಂದು ದಿನ ತಿರುಮಲನನ್ನು ಕರಿಸಿ, ನಾನು ಇನ್ನು ವಿಜಾಪುರಕ್ಕೆ ಹೋಗುವೆನೆಂದು ಹೇಳಲು, ತಿರುಮಲನು ಮನಸ್ಸಿನಲ್ಲಿ ಸಂತೋಷಪಟ್ಟರೂ ಲೋಕರೀತಿಯಂತೆ ಬಾದಶಹನಿಗೆ–"ಇಷ್ಟು ಅವರಸವೇಕೆ? ಇನ್ನು ನಾಲ್ಕು ದಿನ ಇದ್ದು ಹೋಗಬೇಕು." ಮನಸ್ಸಿನಲ್ಲಿ – ಈ ಠಕ್ಕನ ಸಿದ್ಧತೆಯು ಇನ್ನೂ ಪೂರ್ಣವಾದಂತೆ ತೋರುವುದಿಲ್ಲ! ಆದ್ದರಿಂದಲೇ ಇನ್ನು ನಾಲ್ಕು ದಿನ ಇರೆಂದು ನನಗೆ ಹೇಳುತ್ತಾನೆ; ಆದರೆ ಈತನಿಂದ ಕಪ್ಪ ಕಾಣಿಕೆಯ ರಕಮನ್ನು ಇಸಕೊಂಡು, ಮಾಂಡಲೀಕತ್ವವನ್ನು ಒಪ್ಪಿಕೊಂಡ ಪತ್ರದ ಮೇಲೆ ಈತನ ಸಹಿ ಮಾಡಿಸಿಕೊಂಡು ಬೇಗನೆ ವಿಜಯನಗರವನ್ನು ಬಿಡಬೇಕು, ಎಂದು ಯೋಚಿಸಿ ಕಪ್ಪದ ಹಣವನ್ನು ಬೇಗನೆ ಕೊಡಲಿಕ್ಕೂ, ಕರಾರ ಪತ್ರದ ಮೇಲೆ ಬೇಗನೆ ಸಹಿ ಮಾಡಲಿಕ್ಕೂ ತಿರುಮಲನಿಗೆ ಆಗ್ರಹ ಮಾಡಹತ್ತಿದನು. ಆಗ ತಿರುಮಲನು – "ನಾನು ಬೇಗನೆ ಕಪ್ಪದ ಹಣವನ್ನು ಕೊಡದಿದ್ರೆ, ಅದನ್ನೇ ನೆವಮಾಡಿ ಈತನು ಏನಾದರೂ ಅನರ್ಥ ಮಾಡಿಯಾನೆಂದು ತಿಳಿದು, ಕಪ್ಪದ ಎರಡು ಕೋಟಿ ರೂಪಾಯಿಗಳನ್ನೂ, ಬೇರೆ ನಜರಾಣಿಗಳನ್ನೂ ಕೊಟ್ಟು, ಕರಾರ ಪತ್ರಿಕೆಯ ಮೇಲೆ ಸಹಿ ಮಾಡಿದನು. ಆ ಪತ್ರದಲ್ಲಿ ವಿಜಯನಗರದ ಅರಸರು ವಿಜಾಪುರದ ಬಾದಶಹನ ಮಾಂಡಲೀಕರೆಂದು

ಸ್ಪಷ್ಟವಾಗಿ ಒಪ್ಪಿಕೊಂಡಿತ್ತು. ಬಾದಶಹನು ತನ್ನ ಕೆಲಸವಾದ ಮೇಲೆ ಮತ್ತೆ ತಿರುಮಲನಿಗೆ – "ನಮ್ಮ ದರ್ಗೆಯು ಇನ್ನು ನಮ್ಮ ಸ್ವಾಧೀನದಲ್ಲಿರಬೇಕು. ನಮ್ಮ ವಕೀಲನೊಬ್ಬನು ನಿಮ್ಮ ರಾಜಧಾನಿಯಲ್ಲಿರುವನು, ಅತನಿಗೆ ದರ್ಗೆಗೆ ಸಮೀಪವಾಗಿರುವ ಕುಂಜವನವನ್ನು ಇರಲಿಕ್ಕೆ ಕೊಡಬೇಕು" ಎಂದು ಹೇಳಿದನು. ಅದಕ್ಕೂ ತಿರುಮಲನು ಒಪ್ಪಿಕೊಂಡನು ಆತನಿಗೆ ಬಾದಶಹನು ಬೇಗನೆ ರಾಜಧಾನಿಯನ್ನು ಬಿಟ್ಟು ಹೋದರೆ ಸಾಕಾಗಿತ್ತು. ಈ ಮೇರೆಗೆ ತನ್ನ ಮನೋದಾಯಗಳೆಲ್ಲ ಪೂರ್ಣವಾದಂತೆಯಾದ್ದರಿಂದ ಬಾದಶಹನು ತಾನು ಇಂದೇ ತುಂಗಭದ್ರೆಯನ್ನು ದಾಟಿ ಹೋಗಿ ತಿರುಮಲನ ಕಪಟದ ಕೃತ್ಯಗಳಿಗಾಗಿ ಅವನ ಪ್ರಾಯಶ್ಚಿತ ಮಾಡಬೇಕೆಂದು ಯೋಚಿಸಿ ವಿಜಯನಗರವನ್ನು ಬಿಟ್ಟುಹೋದನು.

ಬಾದಶಹನು ರಾಜಧಾನಿಯನ್ನು ಬಿಟ್ಟು ಹೋದದ್ದರಿಂದ ತಿರುಮಲನಿಗೂ, ರಾಮರಾಜನಿಗೂ ಕೂಡಿಯೇ ಸಂತೋಷವಾಯಿತು. ಬಾದಶಹನು ಹೋದದ್ದರಿಂದ ರಾಮರಾಜನಿಗೆ ತನ್ನ ಒಳಸಂಚಿನ ಕಾರ್ಯವನ್ನು ನಡಿಸಲಿಕ್ಕೆ ಒಂದು ದಿವಸ ಅವಕಾಶವು ಸಹ ಬೇಕಾಗಿದ್ದಿಲ್ಲ. ಅದರಂತೆ ಅತನ ಸಿದ್ಧತೆಯೂ ಆಗಿತ್ತು. ಯಾವತ್ತೂ ಸೈನಿಕರನ್ನು, ಒಡಕೊಂಡಿದ್ದರಿಂದ ರಾಮರಾಜನು ಅಕಸ್ಮತ್ತಾಗಿ ತಿರುಮಲನ ಮನೆಯನ್ನು ಮುತ್ತಿದನು. ಮೊದಲೇ ಅಂಜುಬುರುಕನಾದ ತಿರುಮಲನಿಗೆ ಈ ಆಕಸ್ಮಿಕ ಪ್ರಸಂಗದಿಂದ ಹುಚ್ಚೇ ಹಿಡಿಯಿತೆಂದು ಹೇಳಬಹುದು. ರಾಮರಾಜನು ತಿರುಮಲನನ್ನು ಸೆರೆಹಿಡಿಯಬೇಕೆಂದು ಮಾತ್ರ ಮಾಡಿದ್ದನು. ಆದರೆ ತಿರುಮಲನು ಇನ್ನು ಮೇಲೆ ತನ್ನ ಜೀವವು ಉಳಿಯದೆಂದು ನಿಶ್ಚಯಿಸಿದನು. ತನ್ನ ಮಿತ್ರನಾದ ಆದಿಲಶಹನಿಗೆ ಸುದ್ದಿಯನ್ನು ಕಳಿಸಲಿಕ್ಕೂ ಆತನಿಗೆ ಮಾರ್ಗವಿಲ್ಲದೆ ಹೋಯಿತು. ತಾನು ಬಾದಶಹನನ್ನು ಕರೆಸಿ ಮಿತಿಮೀರಿ ಕಪ್ಪಕೊಟ್ಟದ್ದೂ, ಆತನ ಮಾಂಡಲಿಕತ್ವವನ್ನು ಒಪ್ಪಿಕೊಂಡದ್ದು ಅಪರಾಧವಾಯಿತೆಂದು ಆತನು ಈಗ ಪಶ್ಚಾತ್ತಾಪ ಪಡಹತ್ತಿದನು. ಇನ್ನು ಮೇಲೆ ತಾನು ಎಷ್ಟು ಪಶ್ಚಾತ್ತಾಪಪಟ್ಟು, ಎಷ್ಟು ಬೇಡಿಕೊಂಡರೂ ಜನರು ತನ್ನನ್ನು ದೇಶದ್ರೋಹಿ ಎಂದು ತಿರಸ್ಕರಿಸಿ ತನ್ನ ಪ್ರಾಣಹರಣ ಮಾಡುವರಲ್ಲದೆ, ತನ್ನನ್ನು ಕ್ಷಮಿಸರೆಂದು ಆತನು ತಿಳಿದುಕೊಂಡನು. ಈ ವಿಚಾರಗಳಿಂದ ಆತನಿಗೆ ಹುಚ್ಚೇ ಹಿಡಿದಂತಾಯಿತು. ಆತನು ಅರಮನೆಯ ಗಜಶಾಲೆಯೊಳಗಿನ ಆನೆಗಳನ್ನೆಲ್ಲ ತರಿಸಿ ಅವುಗಳ ಬಾಲವನ್ನು ಕತ್ತರಿಸಿ, ಕಣ್ಣುಗಳನ್ನು ಕಳೆದು ತನ್ನ ವೈರಿಗಳ ನಾಶಮಾಡುವುದಕ್ಕಾಗಿ

ಅವನ್ನು ಹೊರಗೆ ಬಿಟ್ಟನು. ತಾನು ಈಗ ಎರಡು ವರ್ಷಗಳಿಂದ ತನ್ನ ಮನೆಯಲ್ಲಿ ತುಂಬಿಕೊಂಡಿದ್ದ ಬಹು ಬೆಲೆಯುಳ್ಳ ಮುತ್ತು ರತ್ನಗಳ ಆಭರಣಗಳನ್ನು ತರಿಸಿ, ಅವುಗಳೊಳಗಿನ ಮುತ್ತು ರತ್ನಗಳನ್ನು ಒಡೆದು ಚೂರು ಚೂರು ಮಾಡಿದನು. ಈ ಶ್ರೇಷ್ಠವಾದ ಅಲಂಕಾರಗಳನ್ನು ವಿಜಯನಗರದ ಪರಾಕ್ರಮಶಾಲಿಗಳಾದ ಎಷ್ಟೋ ಅರಸರು ಹಲವು ರಾಜ್ಯಗಳನ್ನು ಮಣ್ಣುಗೂಡಿಸಿ ಸಂಪಾದಿಸಿದ್ದರು. ಅಂಥವನ್ನು ಈ ದುಷ್ಟ ತಿರುಮಲನು ಕೆಲವು ತಾಸುಗಳಲ್ಲಿ ನಾಶಮಾಡಿಬಿಟ್ಟನು! ಆಮೇಲೆ ಆತನು ಕಂಬಕ್ಕೆ ಕತ್ತಿಯನ್ನು ಕಟ್ಟಿ, ಅದರ ಮೇಲೆ ಕಸುವಿನಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡನು. ಪ್ರಿಯವಾಚಕರೇ, ಕನ್ನಡಿಗರ ಅಭಿಮಾನಾಸ್ಪದವಾದವಾದ ಈ ಪ್ರಬಲ ರಾಜ್ಯದ ಐಶ್ವರ್ಯನಾಶವನ್ನು ತಿರುಮಲನು ಈ ಮೇರೆಗೆ ಹಲವು ಬಗೆಯಿಂದ ಮಾಡಿದ್ದನ್ನು ನೋಡಿ. ನಿಮಗೆ ಬಹು ವ್ಯಸನವಾಗಿರಬಹುದಲ್ಲವೆ? ಆದರೆ ಉಪಾಯವಿಲ್ಲ. ಈ ಜಗತ್ತಿನ ರೂಪಾಂತರದ ಕಡೆಗೆ ಲಕ್ಷ್ಯಕೊಟ್ಟು, ಈ ಜಗತ್ತಿನಲ್ಲಿ ಯಾವದೂ ಸ್ಥಿರವಲ್ಲವೆಂಬುದನ್ನು ಲಕ್ಷಿಸಿ, ಸಮಾಧಾನ ಮಾಡಿಕೊಂಡು ಮುಂದಿನ ಸಂಗತಿಯನ್ನು ನೀವು ಓದಬೇಕು.

ಈ ಮೇರೆಗೆ ತಿರುಮಲನ ಅಂತ್ಯವಾದ ಬಳಿಕ ರಾಜ್ಯದ ಸೂತ್ರಗಳು ಮತ್ತೆ ರಾಮರಾಜನ ಕೈಯಲ್ಲಿ ಬಂದವು. ಆತನು ಮೊದಲು ಬಾದಶಹನ ಸಮಾಚಾರವನ್ನು ತೆಗೆದುಕೊಂಡು, ಸಾಧಿಸಿದರೆ, ತಾವು ಕೊಟ್ಟಿದ್ದ ಕಪ್ಪದ ದೊಡ್ಡ ರಕಮ್ ಅನ್ನು ಕಸಕೊಳ್ಳಬೇಕೆಂದು ಒಮ್ಮೆ ಯೋಚಿಸಿದನು; ಆದರೆ ಈ ಕೆಲಸವು ಸುಲಭವಲ್ಲ ಎಂಬ ಮಾತು ಲಕ್ಷಕ್ಕೆ ಬಂದದ್ದರಿಂದ, ಆತನು ಮೊದಲು ತನ್ನ ಮನೆಯ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಂಡ ಬಳಿಕ ಹಿಂದುಗಡೆ ಬಾದಶಹನ ಸಮಾಚಾರ ತಕ್ಕೊಳ್ಳೋಣವೆಂದು ನಿಶ್ಚಯಿಸಿ ಮೊದಲು ತಿರುಮಲನ ಪಕ್ಷದ ಜನರ ಮೊದಲಿನ ಅಧಿಕಾರಗಳನ್ನು ಅವರ ಕಡೆಗೆ ಬಿಟ್ಟು – “ನಾನು ತಿರುಮಲನಿಗೆ ಕೇಡು ಬಗೆಯುತ್ತಿದ್ದಿಲ್ಲ; ಆತನು ಜೀವದಿಂದಿದ್ದರೆ ಆತನಿಗೇ ಮಂತ್ರಿ ಪದವಿಯನ್ನು ಕೊಟ್ಟು, ಆತನ ಕೈಕೆಳಗೆ ನಾನು ಇರುತ್ತಿದ್ದೆನು ರಾಜ್ಯದ ಗೌರವವನ್ನು ನಷ್ಟಪಡಿಸಿದ್ದರಿಂದ ನಾನು ತಿರುಮಲನ ಗೊಡವಿಗೆ ಹೋಗಬೇಕಾಯಿತು ಎಂದು ಹೇಳಿದನು. ಇದರಿಂದ ತಿರುಮಲನ ಪಕ್ಷದವರಿಗೆ ಸಮಾಧಾನವಾಯಿತು. ಮುಸಲ್ಮಾನರ ಕೈಯು ತಮ್ಮ ರಾಜ್ಯದಲ್ಲಿ ಸೇರಿದ್ದಕ್ಕಾಗಿ ರಾಮರಾಜನಿಗೆ ಬಹಳ ಅಸಮಾಧಾನವಾಗಿತ್ತು. ಮೊದಲು ಆತನು ಮುಸಲ್ಮಾನರದೊಂದು ಮಸೀದೆಯು (ದರ್ಗೆಯು) ತನ್ನ

ರಾಜ್ಯದಲ್ಲಿದ್ದದ್ದಕ್ಕಾಗಿ ಅಸಮಾಧಾನಪಡುತ್ತಿರಲು, ಈಗ ಆ ದರ್ಗೆಯು ಮುಸಲ್ಮಾನರ ಕೈಸೇರಿದ್ದಲ್ಲದೆ, ತನ್ನ ಕುಂಜವನವು ಸಹ ಬಾದಶಹನ ವಕೀಲನು ವಾಸಸ್ಥಳವಾಯಿತೆಂದು ಆತನು ಬಹಳ ಅಸಮಾಧಾನ ಪಟ್ಟನು. ಆತನು ಬಾದಶಹನಿಗೆ – "ಕುಂಜವನದ ಬದಲು ಬೇರೆ ಸ್ಥಳವನ್ನು ನಿಮ್ಮ ವಕೀಲನಿಗೆ ಇರಲಿಕ್ಕೆ ಕೊಡುತ್ತೇವೆ" ಎಂದು ತಿಳಿಸಲು, ಅದಕ್ಕೆ ಬಾದಶಹನು – "ನಮ್ಮ ವಕೀಲನಿಗೆ ಅದೇ ಸ್ಥಳವು ಯೋಗ್ಯವಾದದ್ದು ಎರಡನೆಯ ಸ್ಥಳವು ನಮಗೆ ಬೇಕಾಗಿಲ್ಲ. ಕುಂಜವನವನ್ನು ನೀವು ಕೊಡದಿದ್ದರೆ. ನಮ್ಮ ವಕೀಲನು ನಿಮ್ಮಲ್ಲಿರುವುದಕ್ಕೆ ನಿಮ್ಮ ಒಪ್ಪಿಗೆಯಿರುವುದಿಲ್ಲವೆಂದು ತಿಳಿದು, ನಾವು ಯೋಗ್ಯವ್ಯವಸ್ಥೆ ಮಾಡುವೆವು" ಎಂದು ಸ್ವಲ್ಪ ಕಠೋರತನದಿಂದ ಉತ್ತರವನ್ನು ಬರೆದು ಕಳಿಸಿದನು. ಅದನ್ನು ಓದಿ ರಾಮರಾಜನು ಸಿಟ್ಟು ಬೆಂಕಿಯಾದನು. "ನೀವು ಮಾಡತಕ್ಕದ್ದನ್ನು ಅವಶ್ಯವಾಗಿ ಮಾಡಿರಿ. ನಾನಂತು ಕುಂಜವನವನ್ನು ನಿಮಗೆ ಕೊಡುವುದಿಲ್ಲ" ಎಂದು ಸ್ಪಷ್ಟವಾಗಿ ಬರೆಯಬೇಕೆಂದು ಆತನು ಯೋಚಿಸಿದನು; ಆದರೆ ಮತ್ತೆ ವಿಚಾರ ಮಾಡಿ, ಇದು ಹೀಗೆ ಏರಿಹೋಗಲಿಕ್ಕೆ ಸಮಯವಲ್ಲ, ಈಗ ಸಮಾಧಾನ ಮಾಡಿಕೊಳ್ಳುವುದೇ ಯೋಗ್ಯವು, ಎಂದು ತಿಳಿದು, ಬಾದಶಹನ ವಕೀಲನಿಗೆ ಕುಂಜವನವನ್ನು ತೆರವು ಮಾಡಿಕೊಟ್ಟನು. ಇತ್ತ ಬಾದಶಹನು ರಾಮರಾಜನಿಗೆ – "ನಿಮ್ಮ ರಾಜ್ಯದಲ್ಲಿ ಸ್ವಸ್ಥತೆಯಾದ ಬಳಿಕ ನೀವು ಸೇರಿಸುವ ಮೊದಲನೆಯ ದರ್ಬಾರಕ್ಕೆ ನಮ್ಮ ವಕೀಲನು ಬರುವನು; ಆದ್ದರಿಂದ ದರ್ಬಾರು ನೆರವೇರಿಸಲಿಕ್ಕೆ ಎಂಟು ದಿವಸಗಳಿರುತ್ತಲೆ ನಮಗೆ ದರ್ಬಾರದ ದಿವಸವನ್ನು ತಿಳಿಸಬೇಕು;" ಎಂದು ಪತ್ರವನ್ನು ಬರೆದನು. ಆ ಪತ್ರವನ್ನು ವಿಶೇಷವಾಗಿ ಆ ಪತ್ರದೊಳಗಿನ ಔದ್ಧತ್ಯದ ಬರಹವನ್ನು ನೋಡಿ ರಾಮರಾಜನ ಸರ್ವಾಂಗವು ತಪ್ತವಾಯಿತು; ಆದರೆ ಇದು ತಡಕೊಂಡು ಹೋಗತಕ್ಕ ಕಾಲವು; ಮುಂದುವರಿದು ಹೋಗತಕ್ಕ ಕಾಲವಲ್ಲೆಂಬ ಮಾತು ಲಕ್ಷ್ಯದಲ್ಲಿ ಬಂದದ್ದರಿಂದ, ಆತನಿಗೆ ಬಹಳ ವ್ಯಸನವಾಯಿತು. ಆತನು ಹೆಚ್ಚಿನ ಉಸಾಬರಿಗೆ ಹೋಗದೆ, ದರ್ಬಾರದ ದಿನವನ್ನು ಗೊತ್ತು ಮಾಡಿ ಅದನ್ನು ಮುಂಗಡವಾಗಿ ಬಾದಶಹನಿಗೆ ಆತನ ಇಚ್ಛೆಯಂತೆ ತಿಳಿಸಿದನು.

# 4. ಉಕ್ರೇನ್–ರಷ್ಯಾ ಯುದ್ಧದ ಆರ್ಥಿಕ ಪರಿಣಾಮಗಳು

– ಪ್ರೊ॥ ಟಿ. ಎಸ್. ವೇಣುಗೋಪಾಲ್

ಉಕ್ರೇನ್–ರಷ್ಯಾ ಯುದ್ಧದಲ್ಲಿ ಗೆಲ್ಲುವವರು ಯಾರು? ಗೊತ್ತಿಲ್ಲ. ಆದರೆ ಸೋತವರು ಯಾರು ಅನ್ನುವುದನ್ನು ಮಾತ್ರ ಖಾತ್ರಿಯಾಗಿ ಹೇಳಬಹುದು. ದಾಳಿಗೆ ಸಿಕ್ಕಿ ಬವಣೆಪಡುತ್ತಿರುವ ಉಕ್ರೇನ್ ಜನ ಆರ್ಥಿಕ ನಿರ್ಬಂಧಗಳಿಂದ ನರಳುತ್ತಿರುವ ರಷ್ಯಾದ ಜನತೆ, ಇವುಗಳ ಪರಿಣಾಮವಾಗಿ ತತ್ತರಿಸಿ ಹೋಗಿರುವ ಬಡರಾಷ್ಟಗಳು ಹಾಗೂ ಜಗತ್ತಿನ ಬಡಜನತೆ. ಇವರ್‍ಯಾರೂ ಯುದ್ಧ ಬಯಸಿದವರಲ್ಲ.

ಪುಟಿನ್ ತನ್ನದೇ ಆದ ರಾಜಕೀಯ ಲೆಕ್ಕಾಚಾರದಿಂದ ಉಕ್ರೇನ್ ಮೇಲೆ ದಾಳಿ ಮಾಡಿದರು. ಅಮೇರಿಕಾಕ್ಕೂ ತನ್ನದೇ ಆದ ರಾಜಕೀಯ ಲೆಕ್ಕಾಚಾರವಿತ್ತು, ಉಕ್ರೇನ್ ಯುದ್ಧಭೂಮಿಯಾಯಿತು. ಅಮೇರಿಕ ಉಕ್ರೇನಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸತೊಡಗಿತು. ಹಲವು ಐರೋಪ್ಯ ದೇಶಗಳು ಕೈ ಜೋಡಿಸತೊಡಗಿದವು. ರಷ್ಯಾಕ್ಕೆ ಬುದ್ಧಿ ಕಲಿಸುವುದಕ್ಕೆ ಅದರ ಮೇಲೆ ಆರ್ಥಿಕ ನಿರ್ಬಂಧನೆಗಳನ್ನು ಹೇರಲಾಯಿತು. ಇದನ್ನು ಒಪ್ಪಿಕೊಳ್ಳಲು ಉಳಿದ ದೇಶಗಳ ಮೇಲೂ ಒತ್ತಾಯ ತರಲಾಯಿತು. ಈ ಆರ್ಥಿಕ ನಿರ್ಬಂಧಗಳು ಇತ್ತೀಚಿನ ದಿನಗಳಲ್ಲಿ ಸಾಮ್ರಾಜ್ಯಶಾಹಿಗಳಿಗೆ ಒಂದು ಅಸ್ತ್ರವಾಗಿದೆ. ತನ್ನ ಅಧಿಪತ್ಯವನ್ನು ಒಪ್ಪದ ದೇಶಗಳ ಮೇಲೆ ಅಮೇರಿಕ ಇಂತಹ ಆರ್ಥಿಕ ನಿರ್ಬಂಧಗಳನ್ನು ಹೇರುವುದು ಈ ಹಿಂದೆಯೂ ನೋಡಿದ್ದೇವೆ. ಕೆಲವು ವರ್ಷಗಳ ಹಿಂದೆ ಇರಾನ್ ಹಾಗೂ ವೆನಿಜೂಲ ದೇಶಗಳ ಮೇಲೆ ನಿರ್ಬಂಧವನ್ನು ಹೇರಿದ್ದನ್ನು ಕಂಡಿದ್ದೇವೆ.

ಪ್ರಭಾತ್ ಪಟ್ನಾಯಕ್ ಗುರುತಿಸುವಂತೆ “ಈ ರೀತಿಯ ನಿರ್ಬಂಧಗಳನ್ನು ಹೇರುವುದು ಕೆಲವು ವರ್ಷಗಳ ಹಿಂದೆ ಸಾಧ್ಯವಿರಲಿಲ್ಲ. ನಿರ್ಬಂಧಗಳು ಫಲಕಾರಿ ಆಗಬೇಕಾದರೆ ಅದು ಜಾರಿಯಾಗುವುದಕ್ಕೆ ಅನುಕೂಲವಾದ ಒಂದು ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಇರಬೇಕು. ಅಂತಹ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಕೆಲವು ದಶಕಗಳ ಹಿಂದೆ ಇರಲಿಲ್ಲ. ಎರಡನೆಯ ಜಾಗತಿಕ ಯುದ್ಧದ ನಂತರ ವಸಾಹತುಶಾಹಿ ಆಳ್ವಿಕೆಯಲ್ಲಿದ್ದ ತೃತೀಯ ಜಗತ್ತಿನ ರಾಷ್ಟ್ರಗಳು ಬಿಡುಗಡೆಗೊಂಡು ಸ್ವತಂತ್ರವಾದವು. ತಮಗೆ ಬೇಕಾದ ವಸ್ತುಗಳನ್ನು ಉತ್ಪಾದಿಸಿಕೊಂಡು ಸ್ವತಂತ್ರ ಆರ್ಥಿಕತೆಯನ್ನು ರೂಪಿಸಿಕೊಂಡವು. ಹಾಗಾಗಿ

ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ಅವುಗಳ ಮೇಲೆ ಯಾವ ನಿಯಂತ್ರಣವೂ ಇರಲಿಲ್ಲ."

ಆದರೆ ಕಾಲಕ್ರಮೇಣ ಹಲವು ಬದಲಾವಣೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದು ಅಂತರರಾಷ್ಟ್ರೀಯ ಬಂಡವಾಳದ ಆಳ್ವಿಕೆ ಜಾರಿ ಬಂತು. ನವ ಉದಾರವಾದಿ ಆರ್ಥಿಕ ವ್ಯವಸ್ಥೆಯಲ್ಲಿ ದೇಶಗಳ ನಡುವೆ ಸರಕು, ಸೇವೆ, ಬಂಡವಾಳ ಹಾಗೂ ಹಣಕಾಸಿನ ಚಲನೆ ಸಾಧ್ಯವಾಯಿತು. ತಮ್ಮಲ್ಲೇ ಉತ್ಪಾದನೆ ಮಾಡಿಕೊಳ್ಳಬೇಕೆನ್ನುವ ನೀತಿಗೆ ಬದಲಾಗಿ ತಮಗೆ ಬೇಕಾದ ವಸ್ತುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲು ಪ್ರಾರಂಭಿಸಿದವು. ಆಮದಿನ ಮೇಲಿನ ಅವಲಂಬನೆ ಹೆಚ್ಚಾಯಿತು. ತೃತೀಯ ಜಗತ್ತಿನ ರಾಷ್ಟ್ರಗಳು ನೇರ ವಿದೇಶಿ ಬಂಡವಾಳದ ಹೂಡಿಕೆಯನ್ನು ಅವಲಂಬಿಸತೊಡಗಿದವು. ವಿದೇಶಿ ವ್ಯಾಪಾರ ಹೆಚ್ಚಾದಂತೆ ಪಾವತಿ ಶಿಲ್ಕಿನ ಪಾವತಿಗೆ ವಿದೇಶಿ ಹಣ ಅನಿವಾರ್ಯವಾಗತೊಡಗಿತು. ಜಾಗತಿಕ ಆರ್ಥಿಕತೆಯನ್ನು ನಿರ್ವಹಿಸುವ, ನಿಯಂತ್ರಿಸುವ ಒಂದು ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಆರ್ಥಿಕ ನಿರ್ಬಂಧಗಳು ಪರಿಣಾಮಕಾರಿಯಾಗುವುದಕ್ಕೆ ಇಂತಹ ಒಂದು ವ್ಯವಸ್ಥೆ ಅತಿ ಅವಶ್ಯಕ.

ಪಟ್ನಾಯಕ್ ಗುರುತಿಸುವಂತೆ "ನವಉದಾರೀಕರಣ ನೀತಿಯೇ ಒಂದರ್ಥದಲ್ಲಿ ಸಾಮ್ರಾಜ್ಯಶಾಹಿ ಆಳ್ವಿಕೆಯ ಒಂದು ಅಸ್ತ್ರ. ಯಾಕೆಂದರೆ ಕಚ್ಚಾ ಪದಾರ್ಥಗಳ, ಕೃಷಿ ಉತ್ಪನ್ನಗಳ ಬೆಲೆಗಳು ಏರಲು ಪ್ರಾರಂಭವಾದ ತಕ್ಷಣ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಒತ್ತಡ ಪ್ರಾರಂಭವಾಗುತ್ತದೆ. ಕಠಿಣ ಆರ್ಥಿಕ ನೀತಿಯನ್ನು ಅನುಸರಿಸಬೇಕೆನ್ನುವ, ವಿತ್ತೀಯ ಕೊರತೆಯನ್ನು ಕಡಿಮೆ ಮಾಡಬೇಕೆನ್ನುವ ಒತ್ತಡ ಬರುತ್ತದೆ. ಸಾಮಾನ್ಯವಾಗಿ ಈ ಪದಾರ್ಥಗಳನ್ನು ತೃತೀಯ ಜಗತ್ತಿನ ದೇಶಗಳೇ ಉತ್ಪಾದಿಸುವುದು. ಸ್ವಾಭಾವಿಕವಾಗಿಯೇ ಇಂತಹ ಕ್ರಮಗಳಿಂದ ಅಲ್ಲಿಯ ಶ್ರಮಿಕ ವರ್ಗದ ವರಮಾನ ಕಮ್ಮಿಯಾಗುತ್ತದೆ. ಆ ಸರಕುಗಳ ಬೇಡಿಕೆಯೂ ಕಡಿಮೆಯಾಗುತ್ತದೆ. ಆ ಮೂಲಕ ಅವುಗಳ ಬೆಲೆ ಕಮ್ಮಿಯಾಗುತ್ತದೆ. ನವಉದಾರೀಕರಣ ನೀತಿಯ ಹಿಂದಿನ ಉದ್ದೇಶವೇ ಮೂಲ ಸರಕುಗಳ ಬೆಲೆ ಕಡಿಮೆ ಇರುವಂತೆ ನೋಡಿಕೊಳ್ಳುವುದು."

"ಆದರೆ ಸಾಮಾನ್ಯವಾಗಿ ನವಉದಾರವಾದೀ ನೀತಿಯನ್ನು ತೃತೀಯ

ಜಗತ್ತಿನಲ್ಲಿ ಜಾರಿಗೆ ತರಲು ಒತ್ತಾಯಿಸುವಾಗ 'ಇವನ್ನು ನಿಮ್ಮ ಒಳಿತಿಗಾಗಿ ಹೇಳುತ್ತಿದ್ದೇವೆ. ಇದರಿಂದ ನಿಮ್ಮ ದೇಶದ ಆರ್ಥಿಕ ಬೆಳವಣಿಗೆ ಹೆಚ್ಚುತ್ತದೆ, ಬಡತನ ಕಡಿಮೆಯಾಗುತ್ತದೆ, ಇತ್ಯಾದಿ, ಇತ್ಯಾದಿ. ಹಾಗಾಗಿ ಇವನ್ನು ಅನುಷ್ಠಾನಕ್ಕೆ ತನ್ನಿ' ಎನ್ನುತ್ತಾರೆ. ಅಲ್ಲಿ ಅಂತರರಾಷ್ಟ್ರೀಯ ವ್ಯವಸ್ಥೆಯ ಉಲ್ಲಂಘನೆ ಕಾಣುವುದಿಲ್ಲ. ಆದರೆ ಆರ್ಥಿಕ ದಿಗ್ಬಂಧನ ಹಾಗಲ್ಲ. ಅದು ನವಉದಾರವಾದೀ ನೀತಿಗೆ ವ್ಯತಿರಿಕ್ತ ಮಾತ್ರವಲ್ಲ. ಈ ಆಳ್ವಿಕೆ ಹೇಳುವ ಕಾನೂನನ್ನೇ ಇದು ಉಲ್ಲಂಘಿಸುತ್ತದೆ. ಇರಾನ್ ಉದಾಹರಣೆಯನ್ನು ತೆಗೆದುಕೊಳ್ಳಿ. ಅಮೇರಿಕಾ ಹಾಗೂ ಪಾಶ್ಚಾತ್ಯ ದೇಶಗಳು ಇರಾನಿನ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದವು. ಅದು, ಎಲ್ಲಾ ಅಂತರರಾಷ್ಟ್ರೀಯ ಕಾನೂನುಗಳ ಸಾರಾಸಗಟಾದ ಉಲ್ಲಂಘನೆ. ಯಾಕೆಂದರೆ ಅವರು ತಮ್ಮ ಹಣವನ್ನು ಅಮೇರಿಕೆಯ ಬ್ಯಾಂಕುಗಳಲ್ಲಿ ಠೇವಣಿಯಾಗಿ ಇಟ್ಟಿದ್ದರು. ಹಾಗೆ ಅವರು ಠೇವಣಿ ಇಟ್ಟ ಹಣವನ್ನು ಆ ದೇಶದ ಸರ್ಕಾರದ ಆಣತಿಯ ಮೇರೆಗೆ ಅಮೇರಿಕೆಯ ಬ್ಯಾಂಕುಗಳು ಮುಟ್ಟುಗೋಲು ಹಾಕಿಕೊಂಡವು. ತಮ್ಮ ಹಣವನ್ನು ಹಿಂತೆಗೆದುಕೊಳ್ಳುವುದಕ್ಕೆ ಠೇವಣಿದಾರರಿಗೆ ಅವಕಾಶವೇ ಇರಲಿಲ್ಲ. ಯವುದೇ ಕಾನೂನು ಕೂಡ ಇದನ್ನು ಸರಿ ಅನ್ನುವುದಿಲ್ಲ." ಈಗ ಅವರು ರಷ್ಯಾದ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಕೆಲವು ಅರ್ಥಶಾಸ್ತ್ರಜ್ಞರು ಗುರುತಿಸುವಂತೆ "ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆ ನಂಬಿಕೆಯನ್ನು ಆಧರಿಸಿ ನಡೆಯುತ್ತಿದೆ. ಎಲ್ಲಾ ದೇಶಗಳು ಒಪ್ಪಿಕೊಂಡ ನಿಯಮಕ್ಕೆ ಬದ್ಧರಾಗಿರುತ್ತೇವೆ ಅಂತ ಭಾವಿಸಲಾಗಿದೆ. ಏನೇ ಕಾರಣವಿರಲಿ ಒಂದು ದೇಶದ ವಿದೇಶಿ ವಿನಿಮಯ ಮೀಸಲನ್ನು ಮುಟ್ಟುಗೋಲು ಹಾಕಿಕೊಳ್ಳುವುದು ನಂಬಿಕೆಯ ದ್ರೋಹ. ಇಂದು ಜಾಗತಿಕ ನಾಣ್ಯವಾದ ಡಾಲರನ್ನು ಬಿಡುಗಡೆ ಮಾಡುತ್ತಿರುವ ಅಮೇರಿಕ ತಕ್ಷಣದ ಉದ್ದೇಶಕ್ಕಾಗಿ ಹಣಕಾಸಿನ ವ್ಯವಸ್ಥೆಯ ಮೇಲಿನ ನಂಬಿಕೆಯನ್ನೇ ನಾಶಮಾಡುವುದು ದೊಡ್ಡ ತಪ್ಪು."

ಹಾಗೆಯೇ ಡಾಲರನ್ನು ಕೂಡಿಡುವುದರ ಅಪಾಯವೂ ಬೇರೆ ದೇಶಗಳಿಗೆ ಕಾಣಿಸತೊಡಗಿದೆ. ರಷ್ಯಾದ ಕೇಂದ್ರ ಬ್ಯಾಂಕಿನ ಬಹುತೇಕ ಆಸ್ತಿಯನ್ನು ಅಮೇರಿಕ ಮುಟ್ಟುಗೋಲು ಹಾಕಿರುವುದು ಜಗತ್ತಿನಾದ್ಯಂತ ಎಚ್ಚರಿಕೆಯ ಗಂಟೆಯನ್ನು ಬಾರಿಸಿದೆ. ಹೀಗೆ ವೆನಿಜೂಲ ಹಾಗೂ ಅಫ್ಘಾನಿಸ್ತಾನದ ವಿಷಯದಲ್ಲೂ ಮಾಡಿತ್ತು. ಚೀನಾ 3.2 ಟ್ರಿಲಿಯನ್ ಡಾಲರ್ ಹಣವನ್ನು

ಅಮೇರಿಕೆಯ ಬ್ಯಾಂಕಿನಲ್ಲಿಟ್ಟಿದೆ. ಚೀನಾದ ಪ್ರಧಾನಿ 2009ರಲ್ಲೆ "ನಮ್ಮ ಹಣದ ಭದ್ರೆತಯ ಬಗ್ಗೆ ನಮಗೆ ಆತಂಕವಿದೆ, ಚೀನಾದ ಆಸ್ತಿಗೆ ರಕ್ಷಣೆಯ ಖಾತ್ರಿ ಕೊಡಿ" ಎಂದು ಅಮೇರಿಕದ ಸರ್ಕಾರವನ್ನು ಬಹಿರಂಗವಾಗಿಯೇ ಕೇಳಿದ್ದರು. ಇದೇ ಪ್ರಕ್ರಿಯೆ ಮುಂದುವರಿದರೆ ಡಾಲರ್ ಮೇಲೆ ಅನುಮಾನ ಹೆಚ್ಚಿ ಅದರ ಆಧಿಪತ್ಯಕ್ಕೂ ತೊಂದರೆಯಾಗಬಹುದು.

ರಷ್ಯಾ ಮೇಲಿನ ಆರ್ಥಿಕ ದಿಗ್ಬಂಧನದಿಂದ ಸಹಜವಾಗಿಯೇ ಅಮೇರಿಕೆಗೂ ತೊಂದರೆಯಾಗುತ್ತದೆ. ಅಲ್ಲೂ ಪೆಟ್ರೋಲ್ ಬೆಲೆ ಏರುತ್ತಿದೆ. ಹಣದುಬ್ಬರದ ದರ ವಿಪರೀತವಾಗಿದೆ. ವೆನಿಜೂಲದಿಂದ ಪೆಟ್ರೋಲ್ ಆಮದು ಮಾಡಿಕೊಳ್ಳಲು ಮಾತುಕತೆ ನಡೆಸಿದೆ. ವಿಪರ್ಯಾಸ ಅಂದರೆ ಕೆಲ ವರ್ಷಗಳ ಹಿಂದೆ ವೆನಿಜೂಲದ ಮೇಲೆ ಅಮೇರಿಕ ಆರ್ಥಿಕ ನಿರ್ಬಂಧಗಳನ್ನು ಹೇರಿತ್ತು. ಇಂದು ಪರಸ್ಪರ ಅವಲಂಬನೆ ಹೆಚ್ಚಿರುವ ಸಂದರ್ಭದಲ್ಲಿ ರಷ್ಯಾದಂತಹ ಬೃಹತ್ ಆರ್ಥಿಕತೆಯನ್ನು ಹೊರಗಿಡುವುದರಿಂದ ಎಲ್ಲಾ ದೇಶಗಳ ಆರ್ಥಿಕತೆಗಳು ಸಂಕಷ್ಟಕ್ಕೆ ಗುರಿಯಾಗುವುದು ಸಹಜ. ಕೆಲವರು ಹೇಳುವಂತೆ ಇದು ಕೇವಲ ರಷ್ಯಾ ಮೇಲೆ ನಿರ್ಬಂಧವಲ್ಲ, ಇಡೀ ಜಗತ್ತಿನ ಮೇಲೆ ನಿರ್ಬಂಧ. ತಾಳಿಕೊಳ್ಳುವುದು ಕಷ್ಟವಾಗಬಹುದು. ಹಾಗಾಗಿಯೇ ಭಾರತದಂತಹ ದೇಶಗಳು ರಷ್ಯಾದಿಂದ ಪೆಟ್ರೋಲನ್ನು ಆಮದು ಮಾಡಿಕೊಳ್ಳುತ್ತಲೇ ಇವೆ. ಹಿಂದುಳಿದ ದೇಶಗಳು ರಷ್ಯಾವನ್ನು ಬಹುವಾಗಿ ಅವಲಂಬಿಸಿರುವುದರಿಂದ ಅವು ಸುಮ್ಮನೆ ಅಮೇರಿಕೆ ಹೇಳಿದ್ದನ್ನು ಕೇಳುತ್ತಾ ಕೂರುವುದಿಲ್ಲ. ತಮ್ಮದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಯುದ್ಧ ಮುಗಿದ ಮೇಲೂ ಅಮೇರಿಕ ಆರ್ಥಿಕ ದಿಗ್ಬಂಧನವನ್ನು ಮುಂದುವರಿಸಿದರೆ ಬಹುಶಃ ತೃತೀಯ ಜಗತ್ತಿನ ರಾಷ್ಟ್ರಗಳು ಅದನ್ನು ವಿರೋಧಿಸುತ್ತವೆ ಅಂತ ತೋರುತ್ತದೆ. ಹಾಗಾಗಿ ಈ ರೀತಿಯ ದಿಗ್ಬಂಧನದಿಂದ ಅಂತಿಮವಾಗಿ ಸಾಮ್ರಾಜ್ಯಶಾಹಿ ಅಧಿಪತ್ಯಕ್ಕೆ ತೊಂದರೆಯಾಗಬಹುದಾದ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಚೀನಾ, ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ಅಭಿವೃದ್ಧಿಶೀಲ ರಾಷ್ಟ್ರಗಳು, ಇಸ್ರೇಲಿನಂತಹ ರಾಷ್ಟ್ರಗಳು ಕೂಡ ರಷ್ಯಾ ಮೇಲೆ ನಿರ್ಬಂಧಗಳನ್ನು ವಿಧಿಸುತ್ತಿಲ್ಲ. ರಷ್ಯಾ ಮೇಲೆ ಈಗ ನಿರ್ಬಂಧಗಳನ್ನು ವಿಧಿಸಿರುವ ದೇಶಗಳ ಪಟ್ಟಿ ಸುಮಾರಾಗಿ ಲಿಬಿಯಾದ ನಾಶದಲ್ಲಿ ಪಾಲ್ಗೊಂಡ ರಾಷ್ಟ್ರಗಳ ಪಟ್ಟಿಯನ್ನೇ ಹೋಲುತ್ತದೆ. (ಪ್ರಭಾತ್ ಪಟ್ನಾಯಕ್).

ಕೆಲವರು ಊಹಿಸಿರುವಂತೆ ಅಮೇರಿಕೆಯ ಅಧಿಪತ್ಯ ದುರ್ಬಲವಾದರೆ ನವವಸಾಹತುಶಾಹಿ ವ್ಯವಸ್ಥೆ ಶಿಥಿಲಗೊಳ್ಳುತ್ತದೆ. ಹಾಗೆಯೇ ಡಾಲರಿನ ಅಧಿಪತ್ಯಕ್ಕೂ ತೊಂದರೆಯಾಗಬಹುದು. ಮೊದಲು ಸೋವಿಯತ್ ಒಕ್ಕೂಟ ಅಸ್ತಿತ್ವದಲ್ಲಿದ್ದಾಗ ವ್ಯವಹಾರ ರೂಪಾಯಿ ಅಥವಾ ರೂಬಲ್ ಮೂಲಕ ನಡೆಯುತ್ತಿತ್ತು. ಅಂದರೆ ಆಗಿನ ದ್ವಿಪಕ್ಷೀಯ ಒಪ್ಪಂದದಲ್ಲಿ ಇಂಡಿಯಾ ಹಾಗೂ ಸೋವಿಯತ್ ಯೂನಿಯನ್ ನಡುವಿನ ಎಲ್ಲಾ ವ್ಯವಹಾರಗಳು ರೂಪಾಯಿ ಅಥವಾ ರೂಬಲ್‌ನಲ್ಲಿ ನಡೆಯುತ್ತಿತ್ತು. ಡಾಲರ್ ಬಳಕೆಯಾಗುತ್ತಿರಲಿಲ್ಲ. ವ್ಯಾಪಾರದ ಪಾವತಿ ಶಿಲ್ಕವನ್ನು ಕೂಡ ಡಾಲರಿನಲ್ಲಿ ಲೆಕ್ಕ ಮಾಡುತ್ತಿರಲಿಲ್ಲ. ಆಯಾದೇಶಗಳ ನಾಣ್ಯಗಳಲ್ಲಿ ಶಿಲ್ಕವನ್ನು ನಂತರದ ದಿನಗಳಲ್ಲಿ ಇತ್ಯರ್ಥ ಮಾಡಿಕೊಳ್ಳುತ್ತಿದ್ದರು. ಅಂದರೆ ಲೆಕ್ಕಹಾಕುವುದಕ್ಕಾಗಲಿ ಅಥವಾ ವಿನಿಮಯದ ಮಾಧ್ಯಮವಾಗಿಯಾಗಲಿ ಡಾಲರನ್ನು ಬಳಸುತ್ತಿರಲಿಲ್ಲ. ಅದು ಸರಿ ಕೂಡ, ಒಂದು ದೇಶ ಇನ್ನೊಂದು ದೇಶದಿಂದ ತನಗೆ ಬೇಕಾದ ವಸ್ತುವನ್ನು ಕೊಳ್ಳುವುದಕ್ಕೆ ಮೂರನೇ ದೇಶದ ನಾಣ್ಯವನ್ನು ಸಂಗ್ರಹಿಸಿಟ್ಟುಕೊಳ್ಳಬೇಕು ಅನ್ನುವ ಅಂತರರಾಷ್ಟ್ರೀಯ ವ್ಯವಸ್ಥೆಯೇ ಅಸ್ತಂಗತ. ಹಾಗಾಗಿ ಈ ವ್ಯವಸ್ಥೆಯನ್ನು ಮೀರಿಕೊಂಡು ರೂಪಾಯಿಯಲ್ಲಿ ವ್ಯವಹಾರ ನಡೆಸೋಣ ಅನ್ನುವುದು ನ್ಯಾಯಯುತವಾದ ವ್ಯವಸ್ಥೆಯೇ. ಈಗ ಭಾರತಕ್ಕೆ ರಷ್ಯಾದಿಂದ ಪೆಟ್ರೋಲ್ ಅಥವಾ ರಾಸಾಯನಿಕ ಗೊಬ್ಬರವನ್ನು ಆಮದು ಮಾಡಿಕೊಳ್ಳುವುದು ಹೆಚ್ಚು ಅಗ್ಗ. ಹಾಗಾಗಿ ರೂಪಾಯಿಯ ಮೂಲಕ ಹಣವನ್ನು ಪಾವತಿಸುವ ಕ್ರಮ ಅನುಕೂಲ. ಪರಿಸ್ಥಿತಿ ಹೀಗಿರುವಾಗ ಅಮೇರಿಕ ಹೆಚ್ಚೆಚ್ಚು ದಿಗ್ಬಂಧನ ಹೇರುತ್ತಾ ಹೋದರೆ ಅಂತರರಾಷ್ಟ್ರೀಯ ಆಳ್ವಿಕೆ ಶಿಥಿಲಗೊಳ್ಳುವ ಸಾಧ್ಯತೆ ಹೆಚ್ಚು. ಐರೋಪ್ಯ ದೇಶಗಳಲ್ಲೂ ಅಮೇರಿಕೆಯನ್ನು ಹಿಂಬಾಲಿಸುವ ನೀತಿಗೆ ಸಾಕಷ್ಟು ವಿರೋಧ ಬರುತ್ತಿದೆ (ಪ್ರಭಾತ್ ಪಟ್ನಾಯಕ್).

**ಆರ್ಥಿಕ ನಿರ್ಬಂಧಗಳಿಂದ ಆಗಿರುವುದು ಏನು?**

ಚಾರಿತ್ರಿಕವಾಗಿ ನಿರ್ಬಂಧಗಳ ಉದ್ದೇಶ ಯುದ್ಧವನ್ನು ತಡೆಯುವುದು, ದಾಳಿಕೋರ ಸರ್ಕಾರವನ್ನು ಸಂಕಷ್ಟಕ್ಕೆ ಸಿಲುಕಿಸುವುದು, ಅಲ್ಲಿಯ ಆಡಳಿತದಲ್ಲಿ ಬದಲಾವಣೆ ತರುವುದು. ಆ ದೃಷ್ಟಿಯಿಂದ ನೋಡಿದರೆ ನಿರ್ಬಂಧಗಳು ಯಶಸ್ವಿಯಾಗಿವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಸಾಮಾನ್ಯವಾಗಿ ಇಂತಹ ನಿರ್ಬಂಧಗಳು ಯಶಸ್ವಿಯಾಗಿರುವುದು ಕಡಿಮೆ ಅಥವಾ ಯಶಸ್ವಿಯೇ ಆಗಿಲ್ಲ ಅನ್ನುವಷ್ಟು ವಿರಳ. ಆದರೆ ನೇರ ಯುದ್ಧ ಹಾಗೂ ಈ ಆರ್ಥಿಕ ನಿರ್ಬಂಧಗಳ

ಯುದ್ಧದ ಪರಿಣಾಮ ಮಾತ್ರ ಘೋರ. ಉಕ್ರೇನ್–ರಷ್ಯಾದ ಸಂದರ್ಭದಲ್ಲಂತೂ ಅವುಗಳ ಪರಿಣಾಮ ನಾವೆಲ್ಲಾ ಭಾವಿಸಿದ್ದಕ್ಕಿಂತ ಕಠೋರವಾಗಿದೆ, ವ್ಯಾಪಕವಾಗಿದೆ. ಅದು ಕೇವಲ ಯುದ್ಧನಿರತ ದೇಶಗಳನ್ನು ಮಾತ್ರವಲ್ಲ. ಇಡೀ ಜಗತ್ತನ್ನೇ ಸಂಕಷ್ಟದಲ್ಲಿ ಕೆಡವಿದೆ. ಇಂದು ಜಾಗತಿಕ ಮಟ್ಟದಲ್ಲಿ ಅವಲಂಬನೆ ಎಷ್ಟು ಆಳವಾಗಿದೆ ಎಂದರೆ ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಆಗುವ ಘಟನೆ ಇಡೀ ಜಗತ್ತನ್ನು ಪ್ರಭಾವಿಸುತ್ತದೆ. ನಿರ್ಬಂಧಗಳು ಆಳರಸರನ್ನು ದುರ್ಬಲಗೊಳಿಸುತ್ತದೆ. ನಿಜ, ಆದರೆ ಸಮಾಜವನ್ನು ಇನ್ನೂ ಹೆಚ್ಚು ದುರ್ಬಲಗೊಳಿಸುತ್ತದೆ.

ನಿಜ, ಜಾಗತಿಕ ಸರಕು ವ್ಯಾಪಾರದಲ್ಲಿ ಉಕ್ರೇನ್ ಹಾಗೂ ರಷ್ಯಾದ ಪಾಲು ಶೇಕಡ 2.2ರಷ್ಟಿದೆ ಅಂದರೆ ಅದು ತುಂಬಾ ಕಮ್ಮಿಯಾಗಿ ತೋರಬಹುದು. ಆದರೆ ಅದರ ಮಹತ್ವ ಅರಿಯಬೇಕಾದರೆ ವಿವರಗಳನ್ನು ಗಮನಿಸಬೇಕು. ಇಡೀ ಜಗತ್ತಿನ ಇಂಧನ ಹಾಗೂ ಕಾಳುಗಳ ಮಾರುಕಟ್ಟೆಯಲ್ಲಿ ಆ ಎರಡು ರಾಷ್ಟ್ರಗಳದ್ದೇ ಸಿಂಹಪಾಲು, ಜಗತ್ತಿಗೆ ರಸಗೊಬ್ಬರ, ಖನಿಜಗಳು ಹಾಗೂ ಇತರ ಅವಶ್ಯಕ ಪದಾರ್ಥಗಳ ಬಹುಮುಖ್ಯ ಸರಬರಾಜುದಾರರು. ಉದಾಹರಣೆಗೆ 2020ರಲ್ಲಿ ಈ ಎರಡು ದೇಶಗಳು ಜಗತ್ತಿನ ಗೋಧಿಯ ಶೇಕಡ 24ರಷ್ಟನ್ನು ಹಾಗೂ ಸೂರ್ಯಕಾಂತಿ ಎಣ್ಣೆಯ ಶೇಕಡ 73ರಷ್ಟನ್ನು ಒದಗಿಸಿದ್ದವು. ಇಂದು ಅವುಗಳಿಲ್ಲದೆ ಪರದಾಡುತ್ತಿರುವ ದೇಶಗಳ ಸ್ಥಿತಿಯನ್ನು ನೋಡಿದರೆ ಆ ಎರಡು ದೇಶಗಳ ಮಹತ್ವ ತಿಳಿಯುತ್ತದೆ.

ಈ ವಸ್ತುಗಳನ್ನು ಉತ್ಪಾದಿಸಲಾಗದ, ಬೆಳೆಯಲಾಗದ ದೇಶಗಳಿಗೆ ಅವುಗಳ ಆಮದು ಅನಿವಾರ್ಯ. ಮಂಗೋಲಿಯಾ, ಶ್ರೀಲಂಕಾ, ಲೆಬನಾನ್, ಈಜಿಪ್ಟ್, ಮಾಲವಿ, ನಮೀಬಿಯಾ ಹಾಗೂ ಟಾಂಜಾನಿಯಾ ಸೇರಿದಂತೆ ಹಲವು ದೇಶಗಳಿಗೆ ಕಳೆದ 30 ವರ್ಷಗಳಿಂದ ಉಕ್ರೇನ್ ಹಾಗೂ ರಷ್ಯಾ ಆಹಾರ ಪದಾರ್ಥಗಳನ್ನು ಒದಗಿಸುತ್ತಿದೆ. ಹಿಂದುಳಿದ ಹಲವು ರಾಷ್ಟ್ರಗಳು ಇವುಗಳನ್ನು ಅವಲಂಬಿಸಿವೆ. ಉದಾಹರಣೆಗೆ ಎರಿಟ್ರಿಯಾ ಸಂಪೂರ್ಣವಾಗಿ ತನಗೆ ಬೇಕಾದ ಗೋಧಿಯನ್ನು ಈ ಎರಡು ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿದೆ. ಅಷ್ಟೇ ಏಕೆ, ಸಂಯುಕ್ತ ರಾಷ್ಟ್ರಗಳ ಏಜೆನ್ಸಿಯಾದ ಜಾಗತಿಕ ಆಹಾರ ಕಾರ್ಯಕ್ರಮಗಳಿಗೂ ಉಕ್ರೇನ್‌ನಿಂದಲೇ ಗೋಧಿ ಸರಬರಾಜು ಆಗುತ್ತಿರುವುದು. ಒಂದು ಯುದ್ಧ ಹಾಗೂ ದುರಂತಗಳಿಂದ ಪೀಡಿತರಾದ 50ಕ್ಕೂ ಹೆಚ್ಚು ದೇಶಗಳ ಜನರಿಗೆ ಆಹಾರದ ನೆರವನ್ನು ಕೊಡುವ ಸಂಘಟನೆ.

ಯುದ್ಧದಿಂದಾಗಿ ಉಕ್ರೇನಿನ ಬಂದರುಗಳು ಬಂದಾಗಿವೆ. ನಿರ್ಬಂಧಗಳಿಂದ ರಷ್ಯಾ ಹೊರ ದೇಶಗಳಿಗೆ ರಫ್ತು ಮಾಡುವಂತಿಲ್ಲ. ಹಾಗಾಗಿ ಈಗ ಬೆಳೆದಿರುವ ಗೋಧಿಯನ್ನು ಬೇರೆ ದೇಶಗಳಿಗೆ ಸರಬರಾಜು ಮಾಡಲಾಗುತ್ತಿಲ್ಲ. ಅಷ್ಟೇ ಅಲ್ಲದೇ ಈ ವರ್ಷ ಅಲ್ಲಿ ಗೋಧಿಯನ್ನು ಬೆಳೆಯುವುದಕ್ಕೂ ಆಗದೆ ಹೋಗಬಹುದು ಅನ್ನುವ ಆತಂಕ ಕೂಡ ಕಾಡುತ್ತಿದೆ. ಹಾಗಾಗಿ ಅವಶ್ಯಕ ಪದಾರ್ಥಗಳ ಪೂರೈಕೆಯ ಸಮಯ ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆಯೇ ಹೆಚ್ಚು. ಇದರ ಪರಿಣಾಮವನ್ನು ಫ್ಯೂಚರ್ ಮಾರುಕಟ್ಟೆಯಲ್ಲಿ ನೋಡಬಹುದು. ಫ್ಯೂಚರ್ ವ್ಯಾಪಾರ ಅನ್ನುವುದು ಮುಂದಿನ ನಿರ್ದಿಷ್ಟ ದಿನಾಂಕದಲ್ಲಿ ಮೊದಲೇ ಗೊತ್ತು ಮಾಡಿದ ಬೆಲೆ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಹಾಗೂ ಕೊಳ್ಳುವುದಕ್ಕೆ ಮಾಡಿಕೊಂಡ ಒಪ್ಪಂದ. ಗೋಧಿಯ ಫ್ಯೂಚರ್ ವ್ಯಾಪಾರದ ಬೆಲೆಯಲ್ಲಿ ಶೇಕಡ 40ರಷ್ಟು ಬೆಲೆ ಏರಿದೆ. ಅದು ದಾಖಲೆ ಏರಿಕೆ. ಆಹಾರ ಪದಾರ್ಥಗಳ ಕೊರತೆ ಹಾಗೂ ಬೆಲೆ ಏರಿಕೆಯಿಂದ ಸಂಕಟಕ್ಕೆ ಬಿಕ್ಕಟ್ಟು, ಹಸಿವಿನಿಂದ ನರಳುತ್ತಿರುವ ಆ ದೇಶಗಳ ಇನ್ನೊಂದಿಷ್ಟು ಲಕ್ಷ ಜನ ಹಸಿವಿನಿಂದ ನರಳುವಂತಾಗುವುದು ದುರಂತ.

ಯುದ್ಧದಿಂದ ತಕ್ಷಣದ ಪರಿಣಾಮ ಅಂದರೆ ಪೆಟ್ರೋಲ್ ಪೂರೈಕೆಯ ಏರುಪೇರು ಪೆಟ್ರೋಲ್ ಉತ್ಪನ್ನಗಳ ವಿಪರೀತ ಬೆಲೆ ಏರಿಕೆ. ಬೆಂಚ್ ಮಾರ್ಕ್ ಬ್ರೆಂಟ್ ಕಚ್ಚಾ ತೈಲ ಶೇಕಡ 20ರಷ್ಟು ಏರಿತು. ರಷ್ಯಾದಿಂದ ಪೆಟ್ರೋಲಿನ ಆಮದನ್ನು ನಿಷೇಧಿಸುವುದನ್ನು ಕುರಿತಂತೆ ಚರ್ಚೆ ನಡೆಯುತ್ತಿದೆ ಅನ್ನುವ ಸುದ್ದಿಯೇ ಬೆಲೆ ಏರಿಕೆಗೆ ಸಾಕಾಯ್ತು. ಮಾರ್ಚ್ 8ರಂದು ಅಮೇರಿಕಾ ರಷ್ಯಾದಿಂದ ಇಂಧನ ಉತ್ಪನ್ನಗಳ ಆಮದನ್ನು ನಿಷೇಧಿಸಿತು. ಇಂಗ್ಲೆಂಡ್ ಕ್ರಮೇಣ ಕಡಿಮೆ ಮಾಡುತ್ತಾ 2022ರ ಕೊನೆಯ ವೇಳೆಗೆ ಸಂಪೂರ್ಣವಾಗಿ ನಿಲ್ಲಿಸುವುದಾಗಿ ತಿಳಿಸಿತು. ಆದರೆ ಒಟ್ಟಾರೆಯಾಗಿ ಪೆಟ್ರೋಲ್ ಆಮದಿನ ಮೇಲೆ ನಿರ್ಬಂಧ ಇದ್ದು ಹಾಗಾಗಿ ಭಾರತ ಹಾಗೂ ಹಲವು ಐರೋಪ್ಯ ರಾಷ್ಟ್ರಗಳೂ ಸೇರಿದಂತೆ ಹೆಚ್ಚು ರಾಷ್ಟ್ರಗಳು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿವೆ. ಆದರೆ ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಪೆಟ್ರೋಲ್ ಬೆಲೆ ಇದಕ್ಕೆ ಮುಂಚೆಯೇ ಏರಲು ಪ್ರಾರಂಭವಾಗಿತ್ತು. ಯುದ್ಧದಿಂದಾಗಿ ಬೆಲೆ ಏರಿಕೆ ಹೆಚ್ಚು ತೀವ್ರವಾಯಿತು.

ನಿಜ ಯುರೋಪ್ ರಷ್ಯಾದ ನೈಸರ್ಗಿಕ ಅನಿಲವನ್ನು ತುಂಬಾ ನೆಚ್ಚಿಕೊಂಡಿದೆ. ಅಲ್ಲಿಂದ ನಿರಂತರವಾಗಿ ಆಮದು ಮಾಡಿಕೊಳ್ಳುತ್ತಿದೆ. ಆದರೆ

ತುಂಬಾ ತೊಂದರೆಗೆ ಒಳಗಾಗುವವರು ಬಡ ರಾಷ್ಟ್ರಗಳು. ಜಗತ್ತಿನ ಬಹುತೇಕ ಇಂಧನವನ್ನು ಆಮದು ಮಾಡಿಕೊಳ್ಳುತ್ತಿರುವುದೇ ಬಡರಾಷ್ಟ್ರಗಳು. ಅವುಗಳ ಆರ್ಥಿಕತೆ ನಿರಂತರ ಒತ್ತಡದಲ್ಲಿದೆ. ಕೊರೋನ ಸಮಯದಲ್ಲೂ ಅವು ಸಂಕಷ್ಟಕ್ಕೆ ಒಳಗಾಗಿದ್ದವು. ಕೊರೋನ ಪರಿಹಾರಕ್ಕೆ ಅಮೇರಿಕಾ ಸರ್ಕಾರ ಇತ್ತೀಚೆಗೂ 1.5 ಟ್ರಿಲಿಯನ್ ಡಾಲರ್ ಖರ್ಚು ಮಾಡಿದೆ. ಮುಂದುವರಿದ ರಾಷ್ಟ್ರಗಳ ಸರ್ಕಾರಗಳು ಕೊರೋನ ಪರಿಹಾರಕ್ಕೆ ನೀಡಿದ ಆರ್ಥಿಕ ಪರಿಹಾರವನ್ನು ಹಿಂದುಳಿದ ರಾಷ್ಟ್ರಗಳಿಗೆ ನೀಡುವುದಕ್ಕೆ ಸಾಧ್ಯವಾಗಿರಲಿಲ್ಲ. ಅಲ್ಲಿಯ ಆರ್ಥಿಕತೆ ಚೇತರಿಕೆಯನ್ನು ಕಂಡಿರಲಿಲ್ಲ. ಉತ್ಪಾದನೆಯಾಗಲಿ, ಉದ್ಯೋಗವಾಗಲಿ ಸುಧಾರಿಸಿರಲಿಲ್ಲ. ಸಾಲದ ಹೊರೆಯು ವಿಪರೀತವಾಗಿತ್ತು. ಅವರು ತೈಲದ ಬೆಲೆಯ ಏರಿಕೆಯನ್ನು ತಡೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಈಗಾಗಲೇ ತೀವ್ರವಾಗಿರುವ ಪಾವತಿ ಶುಲ್ಕ ಇನ್ನಷ್ಟು ತೀವ್ರವಾಗುತ್ತದೆ. ಸದ್ಯದ ಅನಿಶ್ಚಿತತೆಯ ಸನ್ನಿವೇಶದಲ್ಲಿ ದೇಶದೊಳಗಿನ ಹಣದುಬ್ಬರದ ಒತ್ತಡವನ್ನು ನಿಭಾಯಿಸುವುದು ಕಷ್ಟವಾಗುತ್ತದೆ.

ತೈಲದ ಬೆಲೆ ಏರಿಕೆಯಿಂದ ಉತ್ಪಾದನಾ ವೆಚ್ಚ ಹೆಚ್ಚುತ್ತದೆ. ಆ ಮೂಲಕ ಹಣದುಬ್ಬರ ಹೆಚ್ಚುತ್ತದೆ. ಜಗತ್ತಿನಾದ್ಯಂತ ಈಗ ಹಣದುಬ್ಬರ ಮೊದಲ ವೈರಿಯಾಗಿದೆ. ಬಹುತೇಕ ಕೇಂದ್ರ ಬ್ಯಾಂಕುಗಳು ಮಿಲ್ಟನ್ ಫ್ರೀಡ್‌ಮನ್ ಪರಿಹಾರವನ್ನೇ ನೆಚ್ಚಿಕೊಂಡಿದ್ದಾರೆ. “ಹಣದುಬ್ಬರ ಅನ್ನುವುದು ಉತ್ಪನ್ನಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಣ ಇರುವ ಸ್ಥಿತಿಯನ್ನು ಸೂಚಿಸುತ್ತದೆ. ಇದು ಯಾವಾಗಲೂ ಎಲ್ಲಾ ಕಡೆಯೂ ನಿಜ” ಎಂದು ಆತ ವಾದಿಸಿದ್ದ. ಅಂದರೆ ಆರ್ಥಿಕತೆಯಲ್ಲಿ ಅವಶ್ಯಕತೆಗಿಂತ ಹೆಚ್ಚು ಹಣ ಚಾಲ್ತಿಯಲ್ಲಿದ್ದಾಗ ಹಣದುಬ್ಬರ ಉಂಟಾಗುತ್ತದೆ ಎಂದು ವಾದಿಸಿದ್ದ. ಹಾಗಾಗಿ ಪರಿಹಾರ ಅಂದರೆ ಹಣದ ಪ್ರಮಾಣವನ್ನು (ದ್ರವ್ಯವನ್ನು) ಕಡಿಮೆ ಮಾಡುವುದು. ಅದಕ್ಕಾಗಿ ಕೇಂದ್ರ ಬ್ಯಾಂಕುಗಳು ಬಡ್ಡಿಯನ್ನು ಹೆಚ್ಚು ಮಾಡುವ ಮೂಲಕ ಹಣವನ್ನು ದುಬಾರಿ ಮಾಡುತ್ತವೆ. ಆಗ ಜನ ಸಾಲ ಮಾಡಿ ಬಂಡವಾಳ ಹೂಡುವುದಕ್ಕೆ ಹಿಂದೇಟು ಹಾಕುತ್ತಾರೆ. ಆರ್ಥಿಕತೆಯಲ್ಲಿರುವ ಹಣವನ್ನು ಕಡಿಮೆ ಮಾಡುವುದಕ್ಕೆ ಭಾರತದ ರಿಸರ್ವ್ ಬ್ಯಾಂಕ್ ನಗದು ಮೀಸಲು ಅನುಪಾತವನ್ನು ಹೆಚ್ಚಿಸಿದೆ. ಅದರಿಂದ ವಾಣಿಜ್ಯ ಬ್ಯಾಂಕುಗಳು ರಿಸರ್ವ್ ಬ್ಯಾಂಕಿನಲ್ಲಿ ಹೆಚ್ಚು ಹಣವನ್ನು ಮೀಸಲಿಡಬೇಕಾಗುತ್ತದೆ. ಆ ಮಟ್ಟಿಗೆ ಚಾಲ್ತಿಯಲ್ಲಿರುವ ಹಣ ಕಮ್ಮಿಯಾಗುತ್ತದೆ. ಇದನ್ನು ಸುಮಾರಾಗಿ ಜಗತ್ತಿನ ಎಲ್ಲಾ ಕೇಂದ್ರ ಬ್ಯಾಂಕುಗಳು ಅನುಸರಿಸುತ್ತವೆ. ಆದರೆ ಹಣದುಬ್ಬರಕ್ಕೆ ಕಾರಣಗಳೇ ಬೇರೆಯಾಗಿರುವಾಗ ಇದು ಪರಿಣಾಮ

ಮಾಡುವುದಿಲ್ಲ. ಉದಾಹರಣೆಗೆ ಪೂರೈಕೆಯ ಕೊರತೆಯಿಂದಾಗಿಯೋ, ಉತ್ಪಾದನೆಯ ವೆಚ್ಚದ ಹೆಚ್ಚಳದಿಂದಲೋ ಹಣದುಬ್ಬರ ಹೆಚ್ಚಿದಾಗ ಬೇರೆಯದೇ ಕ್ರಮ ಯೋಚಿಸಬೇಕು. ಇಲ್ಲದೇ ಹೋದರೆ ಆರ್ಥಿಕ ಬೆಳವಣಿಗೆ ಇನ್ನಷ್ಟು ಕುಸಿಯುವ ಸಾಧ್ಯತೆಯೇ ಹೆಚ್ಚು.

ಹಿಂದುಳಿದ ರಾಷ್ಟ್ರಗಳಲ್ಲಿ ಹಣದುಬ್ಬರವನ್ನು ನಿಯಂತ್ರಿಸುವುದು ತೀರಾ ಕಠಿಣವಾದ ಸವಾಲು. ಅಲ್ಲಿ ನೀತಿ ನಿರೂಪಿಸುವವರಿಗೆ ಇರುವ ಅವಕಾಶಗಳು ಕಡಿಮೆ. ಸಾಲದ ಹೊರೆ ವಿಪರೀತವಾಗಿದೆ. ಜೊತೆಗೆ ಐಎಂಎಫ್‌ನ ಷರತ್ತುಗಳ ಭಾರ ಬೇರೆ. ಈಗಾಗಲೇ ತೀವ್ರ ಪಾವತಿ ಕೊರತೆಯನ್ನು ಎದುರಿಸುತ್ತಿರುವ ಆ ದೇಶಗಳು ಬಹುಪಾಲು ಆಮದನ್ನೇ ನೆಚ್ಚಿಕೊಂಡಿವೆ. ಆಹಾರ ಪದಾರ್ಥಗಳ ಕೊರತೆಯಿಂದ ಆಹಾರದ ಬಿಕ್ಕಟ್ಟು ತೀವ್ರವಾಗಲಿದೆ. ಹಿಂದುಳಿದ ರಾಷ್ಟ್ರಗಳಲ್ಲಿ ಗೊಬ್ಬರದ ಕೊರತೆಯಿಂದ ಕೃಷಿ ಉತ್ಪನ್ನವೂ ಕಡಿಮೆಯಾಗಬಹುದು. ಜಗತ್ತಿನ ಅತಿದೊಡ್ಡ ಗೋಧಿಯ ರಫ್ತು ಮಾಡುವ ರಷ್ಯಾ ಅತಿ ಹೆಚ್ಚು ಗೊಬ್ಬರ ಉತ್ಪಾದಿಸುವ ರಾಷ್ಟ್ರ ಕೂಡ. ರಫ್ತಿಗೆ ಈಗ ಅಡ್ಡಿಯಾಗುವುದರಿಂದ ಜಾಗತಿಕ ಆಹಾರದ ಬೆಲೆ ಇನ್ನೂ ಹೆಚ್ಚಾಗುತ್ತದೆ.

ಈಗ ಇನ್ನೊಂದು ಹೆಚ್ಚಿನ ಅಪಾಯವೂ ಸೇರಿಕೊಂಡಿದೆ. ಷೇರು ಇತ್ಯಾದಿಗಳ ಮೇಲೆ ಹಣತೊಡಗಿಸುತ್ತಿದ್ದ ಸಟ್ಟಾ ಹಣಕಾಸು ಹೂಡಿಕೆದಾರರಿಗೆ ಆಹಾರದ ಫ್ಯೂಚರ್ ವ್ಯವಹಾರದಲ್ಲಿ ಹಣ ಹೂಡುವುದು ಹೆಚ್ಚು ಲಾಭದಾಯಕವಾಗಿ ತೋರುತ್ತಿದೆ. ಮಾರ್ಚ್‌ನ ಮೊದಲ ಐದು ದಿನಗಳಲ್ಲಿ ಗೋಧಿ ಫ್ಯೂಚರ್ ಬೆಲೆ ಶೇಕಡ 40ರಷ್ಟು ಏರಿತು. 1959ರಿಂದ ಈವರೆಗೆ ಈ ಪ್ರಮಾಣದಲ್ಲಿ ಬೆಲೆ ಏರಿಕೆಯಾಗಲಿಲ್ಲ. 2007–08ರಲ್ಲಿ ಆದ ಹಣಕಾಸು ಮಾರುಕಟ್ಟೆಯಲ್ಲಿ, ಆದ ಸಟ್ಟಾ ವ್ಯಾಪರದಿಂದ (ಸ್ಪೆಕ್ಯುಲೇಟಿವ್ ಟ್ರೇಡ್) ಆದ ಆಹಾರದ ಬಿಕ್ಕಟ್ಟಿನಿಂದ ಲಕ್ಷಾಂತರ ಜನರ ಬದುಕು ದುರ್ಭರವಾಗಿದ್ದನ್ನು ನೋಡಿದ್ದೇವೆ. ಹಸಿವಿನಿಂದ ನರಳಿದ್ದನ್ನು ಕಂಡಿದ್ದೇವೆ. ಆಗ ಯಾವುದೇ ಯುದ್ಧವೂ ಇರಲಿಲ್ಲ. ಆಹಾರದ ಪದಾರ್ಥಗಳ ಪೂರೈಕೆ ಬೇಡಿಕೆಯಲ್ಲಿ ಯಾವುದೇ ಬಿಕ್ಕಟ್ಟು ಆಗಿರಲಿಲ್ಲ. ಆದರೂ ಬಿಕ್ಕಟ್ಟು ಸಂಭವಿಸಿತ್ತು. ಆದರೆ ಈಗ ಜಾಗತಿಕ ಮಟ್ಟದಲ್ಲಿ ಆಹಾರದ ಪೂರೈಕೆ ಅಸ್ತವ್ಯಸ್ತವಾಗಿದೆ. ಹಾಗಾಗಿ ಬೆಲೆ ಏರಿಕೆ ಹೆಚ್ಚಿನ ಪ್ರಮಾಣದಲ್ಲಿ ಅಷ್ಟೇ ಅಲ್ಲ ದೀರ್ಘಕಾಲ ಕಾಡಬಹುದು, ಸಟ್ಟಾ ವ್ಯಾಪಾರದ ಒತ್ತಡವೂ ಸೇರಿಕೊಂಡರೆ ಈಗಾಗಲೇ ಶಿಥಿಲಗೊಂಡಿರುವ ಆರ್ಥಿಕತೆ ಇನ್ನಷ್ಟು ಹಾನಿಗೊಳಗಾಗುತ್ತದೆ.

ಇಂಧನ ಹಾಗೂ ಆಹಾರದ ಬೆಲೆಗಳ ಹೆಚ್ಚಳದ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿರುವ ಕ್ರಮಗಳು ಹಣದುಬ್ಬರವನ್ನು ಇನ್ನಷ್ಟು ಹೆಚ್ಚಿಸಬಹುದು. ಬಿಕ್ಕಟ್ಟಿನ ತೀವ್ರತೆಯನ್ನು ಹೆಚ್ಚಿಸಬಹುದು. ದೇಶದೊಳಗೆ ಪೂರೈಕೆಗೆ ತೊಂದರೆಯಾಗದಂತೆ ಹಾಗೂ ಬೆಲೆ ಏರದಂತೆ ಮಾಡಲು ರಫ್ತು ಮಾಡುವುದನ್ನು ಮಿತಿಮಾಡುವುದು ಅಥವಾ ನಿಷೇಧಿಸುವುದು ಒಂದು ಕ್ರಮ. ಉದಾಹರಣೆಗೆ ಇಂಡೋನೇಷ್ಯಾ ತನ್ನ ದೇಶದೊಳಗೆ ತಾಳೆ ಎಣ್ಣೆಯ ಬೆಲೆಯನ್ನು ನಿಯಂತ್ರಿಸಲು ರಫ್ತನ್ನು ನಿಷೇಧಿಸಿತು. ಅದರ ಪರಿಣಾಮದಿಂದ ಭಾರತದಂತಹ ದೇಶಗಳಲ್ಲಿ ಅಡುಗೆ ಎಣ್ಣೆಯ ಬೆಲೆ ಏರಿತು. ಈಗ ಭಾರತದಲ್ಲಿ ಗೋಧಿಯ ಬೆಲೆಯ ನಿಯಂತ್ರಣಕ್ಕಾಗಿ ಗೋಧಿಯ ರಫ್ತನ್ನು ನಿಷೇಧಿಸಲಾಗಿದೆ. ಇದರಿಂದ ನಮ್ಮಿಂದ ಗೋಧಿ ಆಮದು ಮಾಡಿಕೊಳ್ಳುತ್ತಿದ್ದ ದೇಶಗಳಿಗೆ ಸಮಸ್ಯೆಯಾಗುತ್ತದೆ. ಅಲ್ಲಿ ಬೆಲೆಗಳು ಏರಿವೆ. ಹೀಗೆ ಒಂದು ದೇಶ ತೆಗೆದುಕೊಳ್ಳುವ ಕ್ರಮಗಳು ಇನ್ನೊಂದು ದೇಶದ ಆರ್ಥಿಕತೆಯನ್ನು ಕಾಡುತ್ತವೆ. ಇದನ್ನು 2010–11ರ ಆಹಾರದ ಬೆಲೆ ಬಿಕ್ಕಟ್ಟಿನ ಸಂದರ್ಭದಲ್ಲೂ ಗಮನಿಸಿದ್ದೇವೆ. ಜಾಗತಿಕ ಬ್ಯಾಂಕಿನ ಅಂದಾಜಿನ ಪ್ರಕಾರ ಸರ್ಕಾರಗಳು ದೇಶೀ ಮಾರುಕಟ್ಟೆಯನ್ನು ರಕ್ಷಿಸುವ ಸಲುವಾಗಿ ತೆಗೆದುಕೊಂಡ ಕ್ರಮಗಳೇ ಗೋಧಿ ಬೆಲೆ ಶೇಕಡ 40ರಷ್ಟು ಏರುವುದಕ್ಕೆ ಕಾರಣವಾಗಿತ್ತು.

ಎಲ್ಲಾ ಯುದ್ಧಗಳು ಕಾಡುವುದು ಬಡವರನ್ನು, ಮಹಿಳೆಯರನ್ನು, ಮಕ್ಕಳನ್ನು, ಬಡರಾಷ್ಟ್ರಗಳ ಜನತೆಯನ್ನು ಹಾಗೂ ಒಟ್ಟಾರೆಯಾಗಿ ಈಗಾಗಲೇ ನೊಂದವರನ್ನು, ಯುದ್ಧಕ್ಕೆ ಮೊದಲೇ ಆಹಾರ ಹಾಗೂ ಇಂಧನದ ಕೊರತೆ ಮತ್ತು ಬೆಲೆ ಏರಿಕೆಯಿಂದ ಇವರೆಲ್ಲಾ ತತ್ತರಿಸಿ ಹೋಗಿದ್ದರು. ಅವರ ಆರ್ಥಿಕ ಸ್ಥಿತಿ ಈಗಾಗಲೇ ಕೋವಿಡ್ ಪಿಡುಗಿನಿಂದ ಮೂರಾಬಟ್ಟೆಯಾಗಿತ್ತು. ಈಗ ಈ ಯುದ್ಧದಿಂದ ಅವರೆಲ್ಲರ ಸ್ಥಿತಿ ಇನ್ನಷ್ಟು ಹದಗೆಟ್ಟಿದೆ.

ನಿಜ, ಜಗತ್ತು ಈ ಯುದ್ಧದಲ್ಲಿನ ಸಂತ್ರಸ್ತರನ್ನು ಗಮನಿಸಬೇಕು. ಹಾಗೆಯೇ ಈ ಯುದ್ಧ ಪ್ರದೇಶದಿಂದ ಬಹುದೂರ ಇರುವ ಸುದ್ದಿಯಲ್ಲೇ ಇಲ್ಲದ, ಜಗತ್ತಿನ ಅತ್ಯಂತ ಬಡವರು ಹಾಗೂ ತೊಂದರೆಗೀಡಾದವರ ನೋವನ್ನೂ ಗಮನಿಸಬೇಕು. (ಪ್ರಭಾತ್ ಪಟ್ನಾಯಕ್ ಮಂತ್ಲಿ ರಿವ್ಯೂ ಪತ್ರಿಕೆಗೆ ನೀಡಿದ ಸಂದರ್ಶನದ ಕೆಲವು ಭಾಗಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ).

■

# 5. ಯೋಧ ಮತ್ತು ಹೆಂಗಸು

– ಸು. ರಂ. ಎಕ್ಕುಂಡಿ

ಉರಿಬಿಸಿಲು ಕೆಂಪುಹುಡಿ. ಮೈತುಂಬ ಧೂಳಿಡಿಗಿ
ಕುದುರೆಯಿಳಿದನು ಯೋಧ ಜನರ ಕಂಡು
"ನೀರು ಹಣಿಸುವಿರ ತುಸು" ಅಂದಿರಲು ಹೆಂಗಸು
ಬೇಗ ಬಂದಳು ಮಡಕೆ ತುಂಬಿಕೊಂಡು ೧

"ಬಳಲಿದಿರಿ, ಪಾಪ. ಬನ್ನಿರಿ ಒಳಕೆ ವಿಶ್ರಮಿಸಿ."
ಚಾಪೆಯನು ಹಾಸಿದಳು ಕೂತುಕೊಳಲು
"ಇರಲಿ ಬಿಡಿ. ಈ ಮರದ ನೆರಳಲ್ಲೆ ಕೂಡುವೆನು
ತಂಪಾಗಿ ತಬ್ಬಿರುವವಿದರ ಹೆಳಲು" ೨

"ಬಟ್ಟಲಿನ ತುಂಬ ಇದೆ ಜೇನು. ಈ ಚೊಂಬಿನಲಿ
ತಣ್ಣಗಿನ ನೀರು ಇದೆ, ತೆಗೆದುಕೊಳ್ಳಿ
ಇಲ್ಲಿಹುದು ಬೀಸಣಿಕೆ, ಬಹಳ ಸೆಕೆ ಅಲ್ಲವೆ?
ಇದರಿಂದ ಗಾಳಿಯನು ಬೀಸಿಕೊಳ್ಳಿ" ೩

ಆಗ ಒಮ್ಮೆಲೆ ಬೀಸಿ ಬಂತು ತೆಂಕಣ ಗಾಳಿ
ದೂರದಲೆಲ್ಲೋ ಕೇಳಿಬಂತು ಹಾಡು
ಮಾವಿನೆಳಚಿಗುರಿನಲಿ ಚಿಮ್ಮಿ ಪಯಣಿಗನೆಂದ
"ಇದಕೆ ಜೋಳದ ಪಾಳಿಯಿಲ್ಲ ನೋಡು" ೪

ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ಥಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು ೫

"ಹೋಗಿ ಬರುವೆನು ತಾಯಿ" ಎಂದು ಕವಚವ ತೊಟ್ಟು
ಖಡ್ಗವನು ಬಿಗಿದಿಟ್ಟ ಟೊಂಕದಲ್ಲಿ
ಹೆಂಗಸಂದಳು, "ಆಯ್ತು ಹೋಗಿ ಬನ್ನಿರಿ ಮತ್ತೆ
ಬಂದಾಗ ಬರಬೇಕು ನೀವು ಇಲ್ಲಿ" ೬

"ಮರೆತುಬಿಟ್ಟೆನು ನಿಮ್ಮ ಹೆಸರು ಕೇಳಲು. ನೀವು
ನಡೆದ ದಾರಿಗೆ ಇರಲಿ ಶುಭದ ನೆರಳು
ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ
ತುಂಬಿಬಂದಿತ್ತೇಕೆ ಕಣ್ಣು, ಕೊರಳು?" ೭

ಯೋಧ ನುಡಿದನು "ತಾಯಿ ಮತ್ತೆ ನೆನಪಿಗೆ ಬಂತು
ನನ್ನೂರು ಬನವಾಸಿ ನನಗೆ ಇಂದು
ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ.
ನನ್ನನ್ನು ಕರೆಯುವರು ಪಂಪನೆಂದು" ೮

# ರಾಷ್ಟ್ರೀಯತೆ

## ಆಶಯ :

## 1. ಒಂದುಗೂಡಿ ಹಾಡುವಾ

– ಸೋಮಶೇಖರ ಇಮ್ರಾಪುರ

ಭಾರತೀಯರೆಲ್ಲಾ ನಾವು ಒಂದು ಗೂಡಿ ಹಾಡುವಾ
ಒಂದೇ ಭಾವ ಒಂದೇ ಜೀವವಾಗಿ ಬೇಧ ದೂಡುವಾ ॥1॥

ನಮ್ಮ ನೆಲಕೆ ನಮ್ಮ ಜಲಕೆ ನಮ್ಮ ಬಲವ ಮೆರೆಯುವಾ
ಭವ್ಯ ಶಿಖರದಿಂದ ಸೌಖ್ಯ ಶಾಂತತೆಯ ತೆರೆಯುವಾ ॥2॥

ನೀಲ ಮುಗಿಲಿನಲ್ಲಿ ಬೆಳ್ಳಿ ಮೋಡವಾಗಿ ತೇಲುವಾ
ನಗುವ ಚಿಕ್ಕ ಚೆಲುವಿನಲ್ಲಿ ಒಲವ ಹಾಸಿ ನಲಿಯುವಾ ॥3॥

ಸತ್ಯ ಸಮತೆ ಶಾಂತಿ ಹಕ್ಕಿಯಾಗಿ ಜಗದಿ ಹಾರುವಾ
ಕತ್ತಲೆಯೊಳಗೆ ಕಿರಣ ತೋರುವಂತೆ ನಾಡ ತೋರುವ ॥4॥

■

# 2. ಐಕ್ಯಗಾನ

– ಜಿ. ಎಸ್. ಶಿವರುದ್ರಪ್ಪ

ಒಂದೇ ಒಂದೇ, ನಾವೆಲ್ಲರು ಒಂದೇ
ಈ ದೇಶದೊಳೆಲ್ಲಿದ್ದರು
ಭಾರತ ನಮಗೊಂದೇ ॥

ಹಲವು ಕೊಂಬೆಗಳ ಚಾಚಿಕೊಂಡರೂ
ಮರಕ್ಕೆ ಬುಡ ಒಂದೇ
ಸಾವಿರ ನದಿಗಳು ಹೇಗೆ ಹರಿದರೂ
ಕೂಡುವ ಕಡಲೊಂದೇ.

ಇರುಳಿಗೆ ಸಾಸಿರ ಚಿಕ್ಕೆಗಳಿದ್ದರು
ಹಗಲಿಗೆ ರವಿ ಒಂದೇ
ಅಗಣಿತ ಗ್ರಹಮಂಡಲಗಳ ಚಲನೆಗೆ
ಆಕಾಶವು ಒಂದೇ

ನೂರು ಬಗೆಯ ಆರಾಧನೆಯಿದ್ದರು
ದೇವರು ಎಲ್ಲರಿಗೊಂದೇ
ಹಲವು ಬಣ್ಣಗಳ ಹಸುಗಳು ಕರೆಯುವ
ಹಾಲಿನ ಬಿಳುಪೊಂದೇ

ನಡೆ–ನುಡಿ ಭೇದಗಳೆಷ್ಟೇ ಇದ್ದರು
ಬದುಕುವ ಜನ ಒಂದೇ
ನೆಳಲು–ಬೆಳಕುಗಳ ರೆಕ್ಕೆಯ ಬಿಚ್ಚುತ
ಹಾರಾಡುವ ಧ್ವಜ ಒಂದೇ.

■

# 3. ಲೋಕನಾಯಕರ ಮಧ್ಯದಲ್ಲಿ

**– ಎಂ. ವಿ. ಇನಾಂದಾರ್**

ಸೈಮನ್ ಕಮೀಷನ್ ವರದಿಯನ್ವಯ ಭಾರತದ ಹೊಸ ರಾಜ್ಯಾಂಗ ಸ್ವರೂಪವನ್ನು ನಿರ್ಣಯಿಸುವುದಕ್ಕೆ ಭಾರತ ಹಾಗೂ ಬ್ರಿಟನ್ನಿನ ರಾಜಕೀಯ ಪಕ್ಷಗಳು ಮತ್ತು ಬ್ರಿಟಿಷ್ ಸರಕಾರ ಒಟ್ಟು ಸೇರಿ ಚರ್ಚಿಸುವಂತೆ ಲಂಡನ್ನಲ್ಲಿ ದುಂಡುಮೇಜಿನ ಪರಿಷತ್ತನ್ನು ಕರೆಯಲಾಯಿತು. ಭಾರತದ ರಾಜಕೀಯ ಪಕ್ಷಗಳ ನಾಯಕರನ್ನು ಮತ್ತು ಸಂಸ್ಥಾನಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು. ಅಂಬೇಡ್ಕರರು ದಲಿತರ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು. ಎರಡು ಸಾವಿರ ವರ್ಷಗಳಲ್ಲಿ ಮೊದಲ ಬಾರಿ ರಾಷ್ಟ್ರದ ರಾಜ್ಯಾಂಗರಚನೆಯ ಸ್ವರೂಪವನ್ನು ನಿರ್ಧರಿಸುವ ಸಭೆಯೊಂದರಲ್ಲಿ ದಲಿತವರ್ಗದ ಪ್ರತಿನಿಧಿಯೊಬ್ಬ ಪಾಲ್ಗೊಳ್ಳುವಂತಾದದ್ದು ಒಂದು ಚಾರಿತ್ರಿಕ ಘಟನೆಯೇ ಸರಿ. ಎಲ್ಲ ಪಕ್ಷಗಳೂ ಒಮ್ಮತದಿಂದ ರಾಜ್ಯಾಂಗದ ಸ್ವರೂಪವನ್ನು ನಿರ್ಧರಿಸಬೇಕೆಂದು ಗೊತ್ತಾಗಿತ್ತು. ಕಾಂಗ್ರೆಸ್ಸು ಮಾತ್ರ ಪರಿಷತ್ತನ್ನು ಬಹಿಷ್ಕರಿಸಿದ್ದರಿಂದ ಅವರ ಪ್ರತಿನಿಧಿಗಳು ಭಾಗವಹಿಸಿರಲಿಲ್ಲ.

ನವೆಂಬರ್ 12, 1930ರಂದು ಬ್ರಿಟನ್ನಿನ ದೊರೆಗಳು ಪರಿಷತ್ತನ್ನು ಉದ್ಘಾಟಿಸಿದರು. ಪ್ರಧಾನಿ ಮ್ಯಾಕ್‌ಡೋನಲ್ಡರ ಅಧ್ಯಕ್ಷತೆಯಲ್ಲಿ ಅಧಿವೇಶನ ಪ್ರಾರಂಭವಾಯಿತು. ಸಂಯುಕ್ತ ರಾಜ್ಯವ್ಯವಸ್ಥೆಯಲ್ಲಿ ದೇಶೀಯ ಸಂಸ್ಥಾನಗಳು ಅಂಗವಾಗಿ ಸೇರಿಕೊಳ್ಳುವುದಾಗಿ ಸಂಸ್ಥಾನಗಳ ಪರವಾಗಿ ಬಿಕಾನೇರ್ ಮಹಾರಾಜರು ತಿಳಿಸಿದರು. ಜಯಕರ್ ಅವರು ಡೊಮೀನಿಯನ್ ಸ್ಟೇಟಸ್ ವ್ಯವಸ್ಥೆಯನ್ನು ಪುರಸ್ಕರಿಸಿದರು. ಮುಸ್ಲಿಂ ಪ್ರತಿನಿಧಿಗಳು ಸಂಯುಕ್ತ ರಾಜ್ಯವ್ಯವಸ್ಥೆಯನ್ನು ಒಪ್ಪಿ ವಾಯುವ್ಯ ಸರಹದ್ದಿನ ಪ್ರದೇಶ ಹಾಗೂ ಸಿಂಧ ಭಾಗ ಬೇರೆ ಸ್ವತಂತ್ರ್ಯ ಪ್ರಾಂತಗಳಾಗಬೇಕೆಂದರು. ದಬ್ಬಾಳಿಕೆಯ ಕ್ರಮದಿಂದ ಬ್ರಿಟಿಷ್ ಆಡಳಿತ ಭಾರತದಲ್ಲಿ ಮುಂದುವರಿಯಲಾರದು ಎಂದರು. ಎನ್.ಎಂ. ಜೋಶಿಯವರು ಹೊಸ ರಾಜ್ಯವ್ಯವಸ್ಥೆಯಲ್ಲಿ ಕಾರ್ಮಿಕರಿಗೆ ಹೆಚ್ಚಿನ ಅಧಿಕಾರಾವಕಾಶಗಳಿರಬೇಕೆಂದರು. ಸಂಯುಕ್ತ ರಾಜ್ಯವ್ಯವಸ್ಥೆಯನ್ನು ಮಿರ್ಝಾ ಸ್ವಾಗತಿಸಿದರು.

ಬ್ರಿಟಿಷ್ ಇಂಡಿಯಾದ ಐದರಲ್ಲೊಂದು ಪಾಲು ಜನವರ್ಗದ ಪ್ರತಿನಿಧಿಯಾಗಿ ಮಾತನಾಡುತ್ತಿರುವುದಾಗಿ ಹೇಳಿ ಅಂಬೇಡ್ಕರರು ಗಂಭೀರವಾಗಿ ಭಾಷಣವನ್ನು ಆರಂಭಿಸಿದರು. ಈಗಿನ ಸರಕಾರದ ಬದಲು ಜನರಿಗಾಗಿ

ಜನರಿಂದಲೇ ನಡೆಯಬೇಕಾದ ಸರಕಾರ ಭಾರತಕ್ಕೆ ಬರುವುದನ್ನು ಅಸ್ಪೃಶ್ಯರು ಸ್ವಾಗತಿಸುತ್ತಾರೆಂದು ಹೇಳಿ ಎಲ್ಲರನ್ನೂ ಚಕಿತಗೊಳಿಸಿದರು. "ನೂರೈವತ್ತು ವರ್ಷಗಳ ಆಡಳಿತದಲ್ಲಿ ಅಸ್ಪೃಶ್ಯರಿಗಾಗಿ ಬ್ರಿಟಿಷರು ಏನೊಂದನ್ನು ಮಾಡಲಿಲ್ಲ. ಯೋಗ್ಯ ಕೂಲಿಯನ್ನು ಕೊಡದ ಬಂಡವಾಳಗಾರರನ್ನು, ಬಡವರನ್ನು ಶೋಷಿಸುವ ಭೂಮಾಲೀಕರನ್ನು, ಕೈಯಲ್ಲಿ ಅಧಿಕಾರವಿದ್ದರೂ ತಡೆಯಲಿಲ್ಲ. ದೇಶದ ಹಿತರಕ್ಷಣೆಯ ವಿಷಯದಲ್ಲಿ ಅಖಂಡ ನಿಷ್ಠೆಯುಳ್ಳವರ ಆಡಳಿತ ನಮಗೆ ಬೇಕಾಗಿದೆ. ಎಲ್ಲಿಗೆ ವಿಧೇಯತೆ ಮುಗಿದು ಪ್ರತಿಭಟನೆ ಪ್ರಾರಂಭವಾಗುತ್ತದೆ ಎನ್ನುವುದನ್ನು ತಿಳಿಯಬಲ್ಲವರು, ನ್ಯಾಯದ ಅಗತ್ಯಕ್ಕಾಗಿ ಸಾಮಾಜಿಕ ಹಾಗೂ ಆರ್ಥಿಕ ವಿಧಿನಿಯಮಗಳನ್ನು ತಿದ್ದಬಲ್ಲ ಧೈರ್ಯವುಳ್ಳವರು, ಅಧಿಕಾರಸ್ಥಾನದಲ್ಲಿರುವ ಸರಕಾರ ನಮಗೆ ಬೇಕಾಗಿದೆ. ಡೊಮೀನಿಯನ್ ಸ್ಟೇಟಸ್ ವ್ಯವಸ್ಥೆಯನ್ನು ತಾವು ಒಪ್ಪಿದರೂ ದಲಿತರ ಹಿತರಕ್ಷಣೆಗಾಗಿ ಅದರ ತಂತ್ರವಿಧಾನಗಳನ್ನು ಬೇರೆಯಾಗಿ ಅಳವಡಿಸಬೇಕಾಗುತ್ತದೆ. ನಮ್ಮ ಕಷ್ಟಗಳನ್ನು ಇನ್ನೊಬ್ಬರು ಪರಿಹರಿಸಲಾರರು. ನಾವೇ ಪರಿಹರಿಸಿಕೊಳ್ಳಬೇಕಾದರೆ ರಾಜ್ಯಾಧಿಕಾರ ನಮ್ಮ ಕೈಗೆ ಬರಬೇಕಾದದ್ದು, ಮೊದಲ ಅಗತ್ಯ. ಹೊಸ ಸಂವಿಧಾನ ಜನರ ಸಮ್ಮತಿಯನ್ನು ಆಧರಿಸಿದ್ದಾಗಿರಬೇಕಾಗಿದೆ. ಅದಾಗದೆ ಬೇರೆ ದಾರಿಯಿಲ್ಲ."

ಅಂಬೇಡ್ಕರರ ನಿರ್ಭೀತ ಅಸ್ಖಲಿತವಾದ ಭಾಷಣ, ಖಚಿತವಾದ ವಿಚಾರ, ತುಂಬಾ ಪರಿಣಾಮ ಬೀರಿದವು. ಸಭೆಯಲ್ಲಿದ್ದ ಬರೋಡಾದ ಮಹಾರಾಜರ ಕಣ್ಣು ಹನಿಗೂಡಿದ್ದವು. ಇವರು ಕ್ರಾಂತಿಕಾರ ಪಂಥದವರಿರಬಹುದೆ ಎಂದು ಹಿಂದೊಮ್ಮೆ ಬ್ರಿಟಿಷ್ ಗುಪ್ತಪೊಲೀಸಿನವರಿಗೆನಿಸಿದಂತೆ ಈಗ ಬ್ರಿಟಿಷ್ ರಾಜಕಾರಣಿಗಳೂ ಅಂದುಕೊಳ್ಳುವಂತಾಯಿತು. ಆದರೆ ಪತ್ರಿಕೆಗಳು ಅವರ ಧೋರಣೆಯನ್ನು ಪ್ರಶಂಸಿಸಿದವು. ಭಾರತದಲ್ಲಿನ ದಲಿತರ ಸ್ಥಿತಿಗತಿಗಳನ್ನು ಕುರಿತು, ಅವರು ತಳೆಯುವ ಧೋರಣೆಗಳನ್ನು ಕುರಿತು, ಬ್ರಿಟಿಷರು ಕಣ್ಣು ತೆರೆಯುವಂತಾಯಿತು.

ಸಕಲ ಸದಸ್ಯರ ಅಧಿವೇಶನದ ನಂತರ ಉಪಸಮಿತಿಗಳನ್ನು ನಿಯಮಿಸಲಾಯಿತು. ಅಂಬೇಡ್ಕರರು ಒಂದನ್ನುಳಿದು ಎಂಟು ಸಮಿತಿಗಳಲ್ಲಿದ್ದರು. ಅವರು ಮಾಡಿದ ಅತ್ಯಂತ ಮಹತ್ವದ ಕಾರ್ಯವೆಂದರೆ ಮೂಲಭೂತ ಹಕ್ಕುಗಳನ್ನು ಕುರಿತ ಘೋಷಣೆಯನ್ನು ತಯಾರಿಸಿದ್ದು. ಅದರ ನಕಲೊಂದನ್ನು ಭಾರತಕ್ಕೆ ಕಳುಹಿಸಿ ದೇಶದಾದ್ಯಂತದಿಂದಲೂ ದಲಿತರು ಅದನ್ನು ಪುರಸ್ಕರಿಸಿ

ತಂತಿಗಳನ್ನು ಕಳುಹಿಸುವಂತೆ ಮಾಡಿದ್ದು. ಅಲ್ಪಸಂಖ್ಯಾತರ ಉಪಸಮಿತಿ ತನ್ನ ವರದಿಯ ಕೊನೆಯಲ್ಲಿ ನಿಮ್ನವರ್ಗಗಳ ಹಾಗೂ ಅಲ್ಪಸಂಖ್ಯಾತರ ಬೇಡಿಕೆಗಳು ಈಡೇರುವಂತಾಗದಿದ್ದಲ್ಲಿ ಸ್ವಾಯತ್ತಾಧಿಕಾರದ ಯಾವ ರಾಜ್ಯಾಂಗವ್ಯವಸ್ಥೆಯನ್ನೂ ತಾವು ಒಪ್ಪುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿತು.

ಬೇರೆ ಬೇರೆ ಉಪಸಮಿತಿಗಳ ಕಾರ್ಯಕಲಾಪಗಳಲ್ಲಿ ತೊಡಗಿರುತ್ತಿದ್ದಂತೆಯೇ ಅಂಬೇಡ್ಕರರು, ಲೇಖನ, ಪತ್ರಿಕಾಗೋಷ್ಠಿಗಳು, ಬ್ರಿಟಿಷ್ ಧುರೀಣರೊಡನೆಯ ಸಂದರ್ಶನಗಳು ಎಂದು ಹಲವಾರು ವಿಧದಲ್ಲಿ ತಮ್ಮ ನಿಲುವಿಗೆ ಬೆಂಬಲವನ್ನು ಗಳಿಸಿದರು. ಅವರನ್ನು ಸಮರ್ಥಿಸುವುದಕ್ಕೆಂದು ಪಾರ್ಲಿಮೆಂಟ್ ಸದಸ್ಯರ ನಿಯೋಗವೊಂದು ಲಾರ್ಡ್ ಸ್ಯಾಂಹಿಯವರನ್ನು ಕಂಡಿತು. ವಿಷಯ ಪಾರ್ಲಿಮೆಂಟ್‌ನಲ್ಲಿ ಚರ್ಚೆಗೆ ಬಂದಾಗ ಐಸಾಕ್ ಫೂಟ್ ಅವರು ಇನ್ನು ಮುಂದೆ ನಿಮ್ನವರ್ಗದವರನ್ನು ಕಡೆಗಣಿಸುವಂತಿಲ್ಲ ಎಂದು ಎಚ್ಚರಿಸಿದರು. ವಿಧಾನಸಭೆಗಳಲ್ಲಿ ಬೇರೆ ಬೇರೆ ಜಾತಿಯವರಿಗೆ ಸಿಕ್ಕಬೇಕೆಂದ ಸ್ಥಾನಗಳ ವಿಷಯದಲ್ಲಿ ಮತ್ತು ಚುನಾವಣೆಯ ವಿಧಾನದ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಬಂದದ್ದರಿಂದ ಪರಿಷತ್ತನ್ನು ಮುಂದೂಡಲಾಯಿತು. ಕಾಂಗ್ರೆಸ್ ಪ್ರತಿನಿಧಿಗಳು ಭಾಗವಹಿಸಿರಲಿಲ್ಲ ಎನ್ನುವುದೂ ಒಂದು ಕಾರಣವಾಗಿತ್ತು. ಪರಿಷತ್ತಿನಲ್ಲಿ ಒಮ್ಮತದ ರಾಜ್ಯಾಂಗ ರಚನೆ ರೂಪುಗೊಳ್ಳದಿದ್ದರೂ ಸಮಗ್ರ ಭಾರತದ ಕಲ್ಪನೆ ಮೊದಲ ಬಾರಿಗೆ ಸ್ಪಷ್ಟವಾಗಿ ಮೂಡಿತು. ಅಲ್ಲದೆ ನಿಮ್ನವರ್ಗದವರಿಗೆ ರಾಜಕೀಯ ಕ್ಷೇತ್ರದಲ್ಲಿ ಖಚಿತವಾದ ಒಂದು ಸ್ಥಾನ ದೊರಕಿತು. ಅಂಬೇಡ್ಕರರಂಥ ಸಮರ್ಥ ಮುಖವಾಣಿ ದಲಿತರಿಗೆ ಬೇರೆಲ್ಲಿಯೂ ದೊರಕಿರಲಾರದು ಎನ್ನುವುದು ಪರಿಷತ್ತು ತೋರಿಸಿಕೊಟ್ಟಿತು. ಅಂಥ ಮಹತ್ತ್ವದ  ಕೆಲಸಗಳ ಮಧ್ಯದಲ್ಲಿಯೂ ಅಂಬೇಡ್ಕರರು ಬಿಡುವು ಮಾಡಿಕೊಂಡು ಮೂರು ಪೆಟ್ಟಿಗೆ ತುಂಬುವಷ್ಟು ಪುಸ್ತಕಗಳನ್ನು ಖರೀದಿಸಿ ಭಾರತಕ್ಕೆ ಕಳುಹಿಸಿದರು.

ಅವರು ಲಂಡನ್ ಬಿಡುವ ಮೊದಲು ಮೂರು ಸಂತೋಷದ ವರ್ತಮಾನಗಳು ಬಂದವು. ಮಹಾಡ ಕೆರೆಯ ಮೊಕದ್ದಮೆಯಲ್ಲಿ ನಿಮ್ನವರ್ಗದವರು ಜಯಶಾಲಿಗಳಾಗಿದ್ದರು. ಅಂಬೇಡ್ಕರರನ್ನು ಮುಂಬಯಿ ವಿಧಾನಪರಿಷತ್ತಿಗೆ ನಾಮಕರಣ ಮಾಡಲಾಗಿತ್ತು. ಹೊರಡುವಾಗ ಯೋಜಿಸಿದಂತೆ "ಜನತಾ" ಪಕ್ಷಪತ್ರಿಕೆ ಪ್ರಾರಂಭವಾಗಿತ್ತು.

ಫೆಬ್ರುವರಿ ತಿಂಗಳ ಕೊನೆಯಲ್ಲಿ ಅಂಬೇಡ್ಕರರು ಲಂಡನ್ನಿಂದ ಹಿಂದಿರುಗಿದಾಗ ಅವರಿಗಾಗಿ ಭವ್ಯವಾದ ಸ್ವಾಗತ ಕಾದಿತ್ತು. ಅಲ್ಪಸಂಖ್ಯಾತರ ಸಮಸ್ಯೆಯನ್ನು ಬಗೆಹರಿಸದೆ ಭಾರತದ ರಾಜಕೀಯ ಭವಿತವ್ಯ ಇತ್ಯರ್ಥವಾಗದು; ಅಗತ್ಯವಾದ ಹಿತರಕ್ಷಣೆ ಸಂವಿಧಾನದಲ್ಲಿಯೇ ಇರಬೇಕು, ಎಂದು ಮುಂದೆ ನಡೆದ ಸಭೆ ಸಮ್ಮೇಳನಗಳಲ್ಲಿ ಅವರು ತಮ್ಮ ನಿಲುವನ್ನು ವಿಶದಪಡಿಸಿದರು. ದುಂಡುಮೇಜಿನ ಪರಿಷತ್ತಿನಲ್ಲಿ ಅವರು ಮಾಡಿದ ಕಾರ್ಯದ ವರದಿಯನ್ನು ಒಂದು ಸಭೆಯಲ್ಲಿ ಹರ್ಷೋದ್ಗಾರಗಳ ಮಧ್ಯದಲ್ಲಿ ಅಂಗೀಕರಿಸಲಾಯಿತು. ಅದುವರೆಗೆ ತಡೆಹಿಡಿಯಲಾಗಿದ್ದ ನಾಸಿಕ ಸತ್ಯಾಗ್ರಹವನ್ನು ಮತ್ತೆ ಪ್ರಾರಂಭಿಸಬೇಕೆಂಬ ಬೇಡಿಕೆ ಬಲಗೊಂಡಿದ್ದರಿಂದ ಅಂಬೇಡ್ಕರರು ಕೂಡಲೆ ಅಲ್ಲಿಗೆ ಹೋಗಿ ಹೋರಾಟವನ್ನು ಶಾಂತಿಯುತವಾಗಿ, ಸುವ್ಯವಸ್ಥಿತವಾಗಿ, ಮುಂದುವರಿಸಬೇಕೆಂದು ಉತ್ತೇಜಿಸಿದರು. ಚಿರನೇರದ ಅರಣ್ಯಸತ್ಯಾಗ್ರಹದಲ್ಲಿ ಅಪಾದಿತರ ಪರವಾಗಿ ಕೋರ್ಟಿನಲ್ಲಿ ವಾದಿಸಬೇಕಾಗಿದ್ದರಿಂದ ಅವರು ಮುಂಬಯಿಗೆ ಹಿಂದಿರುಗಿದರು. ಸರಕಾರದಿಂದ ದುಂಡುಮೇಜಿನ ಪರಿಷತ್ತಿಗೆ ನಿಯೋಜಿತರಾಗಿ ಹೋಗಿಬಂದವರು ಸರಕಾರದ ವಿರುದ್ಧ ವಕಾಲತ್ತು ವಹಿಸುತ್ತಿದ್ದಾರೆಂಬ ಕುಹಕದ ನುಡಿಗೆ ಅವರು ದೇಶಾಭಿಮಾನವೇ ಅಪಾದಿತರ ಅಪರಾಧವಾಗಿರುವಾಗ ಅವರನ್ನು ರಕ್ಷಿಸದಿರುವುದೇ ದೇಶದ್ರೋಹವಾಗುತ್ತದೆ ಎಂದು ಠಾಣಾ ನ್ಯಾಯಾಲಯದಲ್ಲಿ ಹೇಳಿದರು. ಉದ್ದಕ್ಕೂ ಬೆಳೆದ ವಿಚಾರಣೆಯ ಕೊನೆಯಲ್ಲಿ ನಲವತ್ತಾರು ಆಪಾದಿತರಲ್ಲಿ ಹದಿನೇಳು ಜನರ ಬಿಡುಗಡೆಯಾಯಿತು. ಲಂಡನ್ ಪರಿಷತ್ತಿನಲ್ಲಿಯ ಅವರ ಕಾರ್ಯ ಅವರ ಮಾತಿಗೆ ಹೆಚ್ಚಿನ ಮನ್ನಣೆಯನ್ನು ತಂದಿತ್ತು. ಅವರ ಪ್ರಯತ್ನಗಳ ಫಲವಾಗಿ ನಿಮ್ನವರ್ಗದವರಿಗೆ ಪೊಲೀಸ್ ಇಲಾಖೆಯಲ್ಲಿ ಪ್ರವೇಶಾವಕಾಶವನ್ನು ಕೊಡಬಹುದು ಎಂದು ಸರಕಾರ ಒಪ್ಪಿಕೊಂಡಿತ್ತು.

ದೇಶದಲ್ಲಿಯ ರಾಜಕೀಯ ಸನ್ನಿವೇಶ ಕ್ಷಿಪ್ರಗತಿಯಿಂದ ಬದಲಾಗತೊಡಗಿತ್ತು. ಬ್ರಿಟಿಷ್ ಪ್ರಧಾನಿಯ ಸೂಚನೆಯ ಮೇರೆಗೆ 1931ರ ಜನವರಿ 26ರಂದು ಗಾಂಧೀಜಿಯವರನ್ನು ಬಿಡುಗಡೆ ಮಾಡಲಾಗಿತ್ತು. ಮಾರ್ಚ್‌ನಲ್ಲಿ ಅವರು ವೈಸರಾಯರಾಗಿದ್ದ ಐರ್ವಿನ್ ಅವರೊಡನೆ ನಡೆಸಿದ ಮಾತುಕತೆಗಳ ಪರಿಣಾಮವಾಗಿ ಸತ್ಯಾಗ್ರಹವನ್ನು ನಿಲ್ಲಿಸಿದ್ದರು. ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಒಪ್ಪಿದರು.

■

# 4. ನಿರಾಶ್ರಿತೆ

– ಎಚ್. ವಿ. ಸಾವಿತ್ರಮ್ಮ

ಚಂದ್ರನು ಮಾವನ ಮನೆಗೆ ಬಂದು ಎರಡು ವಾರಗಳಾಗಿದ್ದರೂ ಇನ್ನೂ ಚೇತರಿಸಿಕೊಂಡಿರಲಿಲ್ಲ. ಚೇತರಿಸಿಕೊಳ್ಳಬೇಕೆಂಬ ಉತ್ಸಾಹವೂ ಇರಲಿಲ್ಲ. ಪ್ರಚಂಡಮಾರುತಕ್ಕೆ ಸಿಕ್ಕಿ ಅವನ ಸಂಸಾರ ನೌಕೆಯು ಒಡೆದು ಪುಡಿಯಾಗಿತ್ತು. ರಾವಲ್ಪಿಂಡಿಯಿಂದ ಮನೆಮಠಗಳನ್ನು ಬಿಟ್ಟು ಓಡಿ ಬಂದುದು ಈಗಲೂ ಒಂದು ಭಯಾನಕ ಕನಸಿನಂತೆ ತೋರುತ್ತಿತ್ತು. ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡಿದ್ದ ಚಂದ್ರನಿಗೆ ಆ ದಿನಗಳ ಸ್ಮರಣೆಯನ್ನು ತಡೆಯುವ ಶಕ್ತಿ ಕೂಡ ಇರಲಿಲ್ಲ. ತುಳಸಿಯೊಬ್ಬಳು ಪಾರಾಗಿ ಬಂದಿದ್ದರೆ ಏನನ್ನಾದರೂ ಸಹಿಸಬಹುದಾಗಿತ್ತು; ಅಥವಾ ಕಣ್ಣೆದುರಿಗೆ ಸತ್ತಾದರೂ ಹೋಗಿದ್ದರೆ ಈ ದಾರುಣ ವ್ಯಥೆಯಿರಲಿಲ್ಲ. ಎಲ್ಲಿರುವಳೋ, ಏನಾದಳೋ ಎಂಬ ಚಿಂತಾಗ್ನಿ ಚಂದ್ರನನ್ನು ದಿನದ ಪ್ರತಿಗಳಿಗೆಯೂ ಸುಡುತ್ತಿತ್ತು.

ಚಂದ್ರನು ರಾವಲ್ಪಿಂಡಿಯಲ್ಲಿ ವೈದ್ಯನಾಗಿದ್ದನು. ವಿದೇಶಕ್ಕೆ ಹೋಗಿ ಹೆಸರಿನ ಮುಂದೆ ನಾಲ್ಕಕ್ಷರಗಳನ್ನು ಸೇರಿಸಿಕೊಳ್ಳದಿದ್ದರೂ ತನ್ನ ಜಾಗರೂಕತೆ ಸಹಾನುಭೂತಿಗಳಿಂದ ಜನರ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಮನೆಯನ್ನು ತುಳಸಿಯ ಪ್ರೇಮವು ಬೆಳಗಿಸಿತ್ತು. ರಾಧೆಯು ಅವರಿಬ್ಬರ ಪ್ರೇಮವನ್ನು ಪೂರ್ಣಗೊಳಿಸಿದ್ದಳು. ಚಂದ್ರನು ಇಹಲೋಕದಲ್ಲಿ ಬಯಸಬೇಕಾದುದಿನ್ನೇನೂ ಇರಲಿಲ್ಲ. ಹುಟ್ಟುತ್ತಲೇ ತಂದೆತಾಯಿಗಳನ್ನು ಕಳೆದುಕೊಂಡಿದ್ದರೂ, ಸೋದರಮಾವನು ಆ ನೋವು ತೋರದಂತೆ ಚಂದ್ರನನ್ನು ಬೆಳೆಸಿದ್ದರು. ಅರಿವುಂಟಾದಂದಿನಿಂದಲೂ ಅವರೇ ಆತನ ತಂದೆಯಂತಿದ್ದರು. ತುಳಸಿ ಅವರ ಒಬ್ಬಳೇ ಮಗಳು. ಮೊದಲಿನಿಂದಲೂ ಅವಳಿಗೂ ಚಂದ್ರನಿಗೂ ವಿವಾಹವೆಂಬುದು ನಿಷ್ಕರ್ಷೆಯಾದಂತೆಯೇ ಇತ್ತು. ವಿಧಿಯು ಎರಡು ಕೈಗಳಿಂದಲೂ ಚಂದ್ರನನ್ನು ಹರಸಿದಂತಿತ್ತು. ಮದುವೆಯಾದ ವರ್ಷವೇ ವೈದ್ಯಪರೀಕ್ಷೆಯಲ್ಲಿ ಉತ್ತೀರ್ಣನಾದನು. ಶ್ರೀನಿವಾಸರಾಯರಿಗೇನೋ ಅವನು ಅಲ್ಲಿಯೇ ಖಾಸಗಿ ವೈದ್ಯನಾಗಲೆಂಬ ಆಸೆ. ಚಂದ್ರನು ಯಾವ ನಿರ್ಧಾರಕ್ಕೂ ಬಂದಿರಲಿಲ್ಲ. ಅಷ್ಟರಲ್ಲಿ, ಅರೆ ಮನಸ್ಸಿನಿಂದ ಹಾಕಿದ್ದ ಅರ್ಜಿಗೆ ಮನ್ನಣೆ ದೊರೆತು ರಾವಲ್ಪಿಂಡಿಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಸಿಕ್ಕಿತೆಂದು ತಂತಿ ಬಂತು. ಶ್ರೀನಿವಾಸರಾಯರಿಗೆ ಅದು ಸ್ವಲ್ಪವೂ ಇಷ್ಟವಿರಲಿಲ್ಲ. "ನೀನೇಕೆ ಸರ್ಕಾರಿ ಕೆಲಸಕ್ಕೆ ಸೇರಬೇಕು? ಸ್ವಂತವಾಗಿ ವೃತ್ತಿಯನ್ನಾರಂಭಿಸಿದರೆ ಅವರು

ಕೊಡುವ ಐನೂರು ರೂಪಾಯಿಗಳನ್ನು ಧಾರಾಳವಾಗಿ ಇಲ್ಲೇ ಸಂಪಾದಿಸಬಹುದು" ಎಂದು ವಾದಿಸಿದರು. ಸರಸ್ವತಮ್ಮನೂ ಹೇಳಿ ನೋಡಿದರು. "ನೀನೂ ತುಳಸಿ ಹೊರಟು ಹೋದರೆ ನಮ್ಮನ್ನು ಕೇಳುವವರು ಯಾರು?" ಎಂದು ಕಣ್ಣೀರು ಕರೆದರು. ತುಳಸಿಗೂ ತಾಯಿತಂದೆಗಳನ್ನು ಬಿಟ್ಟು ಅಷ್ಟು ದೂರ ಹೋಗುವುದು ಇಷ್ಟವಿರಲಿಲ್ಲ. ಆದರೆ ಯೌವನದ ಹುಚ್ಚು ಹಠದಿಂದ ಹೋಗಿಯೇ ತೀರಬೇಕೆಂದು ಚಂದ್ರನು ಪಟ್ಟುಹಿಡಿದನು. ಸರಸ್ವತಮ್ಮನು "ಮನೆ ಅಳಿಯನಾದರೇನು, ಯಾರಾದರೇನು? ಅಳಿಯಂದಿರ ಪಾಡೆಲ್ಲಾ ಒಂದೇ?" ಎಂದು ನಿಷ್ಠುರವಾಗಿ ನುಡಿದರು.

ಶ್ರೀನಿವಾಸರಾಯರು ಆಕೆಯನ್ನು ಸಮಾಧಾನಪಡಿಸುತ್ತಾ "ಸುಮ್ಮನಿರು. ಹಾಗೆಲ್ಲಾ ಮಾತಾಡಬಾರದು. ಚಂದ್ರು ಒಳ್ಳೆಯ ಹುಡುಗ. ನಾಲ್ಕ ದಿನ ಹೋಗಿಬರಲಿ, ಎಲ್ಲಾದರೂ ತಣ್ಣಗಿದ್ದರೆ ಸರಿ" ಎಂದು ತಮ್ಮ ಮನಸ್ಸಿಗಾಗುತ್ತಿದ್ದ ನೋವನ್ನು ಮರೆಸಲು ಪ್ರಯತ್ನಿಸಿದರು. ಕಡೆಗೊಂದು ದಿನ, ಸಾಮಾನು ಕಟ್ಟಿ, ತುಳಸಿ ಚಂದ್ರ ಹೊರಟೇಹೋದರು. ಕಣ್ಣೀರು ಕರೆಯುತ್ತಾ ಕುಳಿತಿದ್ದ ಸರಸ್ವತಮ್ಮನನ್ನು ಶ್ರೀನಿವಾಸರಾಯರು ಎಬ್ಬಿಸಿ "ಎಂದಾದರೂ ನನಗೆ ನೀನು, ನಿನಗೆ ನಾನು; ಬಾ, ಸ್ವಲ್ಪ ಹೊತ್ತು ಸುತ್ತಾಡಿಕೊಂಡು ಬರೋಣ" ಎಂದರು. ಆ ನೋವನ್ನು ಮರೆಯಲು ಸರಸ್ವತಮ್ಮನಿಗೆ ಬಹುಕಾಲ ಹಿಡಿಯಿತು. ಹಬ್ಬವಾದರೆ ತುಳಸಿಯಿಲ್ಲ. ಸಿಹಿ ತಿಂಡಿ ಮಾಡಿದರೆ ತುಳಸಿಯಿಲ್ಲ. ಮನೆಯಲ್ಲಿ ಇರುವುದೇ ಕಷ್ಟವಾಗಿ ತೋರುತ್ತಿತ್ತು.

ತುಳಸಿಗಾದರೋ ಇನ್ನೂ ಬಾಳಿನ ಪ್ರಾತಃಕಾಲ. ತಾಯಿ–ತಂದೆಗಳ ಅಗಲಿಕೆ ಕೊಂಚಕಾಲ ಕಷ್ಟವಾಗಿ ತೋರಿದರೂ ಹೊಸ ಆಸೆ ಉತ್ಸಾಹಗಳು ಅದನ್ನು ಬೇಗ ಮರೆಮಾಡಿದುವು. ಚಂದ್ರನು ಅವಳನ್ನು ಪ್ರೇಮದ ನೂತನ ಲೋಕಕ್ಕೇ ಕರೆದುಕೊಂಡು ಹೋಗಿದ್ದನು. ಅವಳು ಮನೆಯನ್ನು ಸಿಂಗರಿಸಿ, ಚಂದ್ರನಿಗೆ ಇಷ್ಟವಾದ ತಿಂಡಿಗಳನ್ನು ಮಾಡಿ, ಅವನೊಡನೆ ಸರಸ ಸಲಾಪದಲ್ಲಿ ಲೋಕವನ್ನೇ ಮರೆಯುತ್ತಿದ್ದಳು. ಚಂದ್ರನು ಇಷ್ಟಪಟ್ಟು ವೈದ್ಯ ವೃತ್ತಿಯನ್ನು ಆರಿಸಿಕೊಂಡವನು. ಅವನ ಪ್ರತಿಭೆಗೆ ತಕ್ಕ ಮನ್ನಣೆಯೂ ಸಿಕ್ಕಿತ್ತು. ಬಹಳ ಸುಖವಾಗಿಯೇ ಇದ್ದರು ಇಬ್ಬರೂ.

"ನಾವೆಂದು ಊರಿಗೆ ಹೊರಡುವುದು?"

"ಹೋಗಲೇಬೇಕೆ ತುಳಸಿ? ನಿಮ್ಮ ತಾಯಿಯನ್ನೇ ಇಲ್ಲಿಗೆ ಬರಹೇಳಿದರೆ?"

"ತುಳಸಿಗೆ ತಂದೆಯ ಮನೆಗೆ ಹೋಗಬೇಕೆಂದು ತೀವ್ರಾಭಿಲಾಷೆಯುಂಟಾಗಿತ್ತು. ಎಳತನದ ಸುಖವನ್ನು ಪುನಃ ಸವಿಯಲು ಆತುರಳಾಗಿದ್ದಳು.

"ಈಗ ಹೋಗದಿದ್ದರೆ ತಂದೆಯವರು ತುಂಬಾ ನೊಂದುಕೊಳ್ಳುತ್ತಾರೆ."

"ನನ್ನ ಗತಿ?" ಚಂದ್ರನು ಮುಗುಳುನಗೆ ನಗುತ್ತಾ ತಲೆಯೆತ್ತಿದನು.

ತುಳಸಿಯೂ ನಗುತ್ತಾ "ನೀವೂ ಬನ್ನಿ" ಎಂದಳು.

"ನನ್ನ ಕೆಲಸ ಮಣ್ಣುಪಾಲಾಗುತ್ತೆ."

ತುಳಸಿಯೇನೋ ಹೊರಟುಹೋದಳು. ಒಂದೆರಡು ತಿಂಗಳೊಳಗಾಗಿ ಚಂದ್ರನಿಗೂ ಬೇಸರವಾಗಿ ಅವಳ ಹಿಂದೆ ಹೊರಟನು. ಆ ಮೂರು ನಾಲ್ಕು ತಿಂಗಳೂ ಸರಸ್ವತಮ್ಮನಿಗೂ ಹಬ್ಬದಂತಿತ್ತು. ತುಳಸಿಗೆ ಎಷ್ಟು ತಿಂಡಿ ಮಾಡಿಟ್ಟರೂ ತೃಪ್ತಿಯಿಲ್ಲ. ರಾಧೆಯು ಹುಟ್ಟಿ ಎರಡು ತಿಂಗಳಾಗಿತ್ತಷ್ಟೇ. ಆಗಲೇ ಚಂದ್ರನು ಹೊರಡುವ ಆತುರದಲ್ಲಿದ್ದನು.

"ತುಳಸಿ ಇನ್ನು ನಾಲ್ಕು ದಿನ ಇಲ್ಲೇ ಇರಲಿ. ಎಳೇ ಮಗುವನ್ನು ಕಟ್ಟಿಕೊಂಡು ಒಬ್ಬಳೇ ಹೇಗಿರುತ್ತಾಳೆ?" "ಮಗುವನ್ನು ನೋಡಿಕೊಳ್ಳಲು ಯಾರನ್ನಾದರೂ ಗೊತ್ತುಮಾಡ್ತೀನಿ" ಎಂದನು ಚಂದ್ರ.

"ಅಷ್ಟು ದೂರದ ಪ್ರಯಾಣ ಮಗುವಿನ ಮೈಗಾಗುವುದಿಲ್ಲ." ಚಂದ್ರನು ನಸುನಗುತ್ತಾ "ನಾನಿಲ್ಲವೇ, ಸ್ವಂತ ಡಾಕ್ಟರ್? ನೋಡಿಕೊಳ್ಳುತ್ತೇನೆ." ಎಂದನು.

ನಿರ್ವಾಹವಿಲ್ಲದೆ ಸರಸ್ವತಮ್ಮನು ಸುಮ್ಮನಾದರು. ಹೊಸ ಸೀರೆಯುಡಿಸಿ, ಕುಂಕುಮವಿಟ್ಟು ಮನಸಾರೆ ಹರಸಿ ಮಗಳನ್ನು ಕಳುಹಿಸಿಕೊಟ್ಟರು.

ತುಳಸಿಯು ತಂದೆಯ ಮನೆಯ ಹೊಸ್ತಿಲನ್ನು ದಾಟಿದ್ದು ಅದೇ ಕಡೆಯಾಯಿತು.

*

ಆ ದಿನದ ನೆನಪು ಚಂದ್ರನ ದೇಹದಲ್ಲಿ ಜೀವಸಂಚಾರವಿರುವವರೆಗೂ ಬಿಟ್ಟು ಹೋಗುವುದಿಲ್ಲ. ಭಾರತ ಸ್ವಾತಂತ್ರ್ಯದ ಅರುಣೋದಯ. ರಕ್ತ ಬಲಿಯಿಲ್ಲದೆ ಸಾಧಿಸಿದ ಸ್ವಾತಂತ್ರ್ಯವೆಂದು ದೇಶವೇ ಹಿಗ್ಗಿ ಬಿರಿಯಿತು. ಮುಂದಿನ ಭಯಾನಕ

ದೃಶ್ಯಗಳ ನೆರಳೂ ಕೂಡ ಆ ದಿನದ ಸುಪ್ರಭಾತದಲ್ಲಿ ಕಾಣಿಸಿಕೊಳ್ಳಲಿಲ್ಲ. ಜವಾಹರರು ರಾಷ್ಟ್ರಧ್ವಜವನ್ನು ಹಾರಿಸುತ್ತಿರಲು ದೇವಲೋಕವೇ ಆಶೀರ್ವಚನವಿತ್ತಂತೆ ಕಾಮನಬಿಲ್ಲು ಕಾಣಿಸಿಕೊಂಡಿತು. ಅದಾದ ಕೇವಲ ಹದಿನೈದೇ ದಿನಗಳು, ಭಯಂಕರ ಪ್ರಳಯಕ್ಕಾರಂಭವಾಯಿತು.

ಚಂದ್ರನು ಆಸ್ಪತ್ರೆಯಿಂದ ಬೇಗ ಹೊರಟನು. ಊರಲ್ಲಿ ಗಲಭೆಯೆಂದು ವರ್ತಮಾನ ತಿಳಿದಾಗ ಅವನು ಶಸ್ತ್ರಚಿಕಿತ್ಸೆಯ ಕೋಣೆಯಲ್ಲಿದ್ದನು. ಆಗ ಅವನಿಗೆ ತಿಳಿಸುವ ಧೈರ್ಯ ಯಾರಿಗೂ ಇರಲಿಲ್ಲ. ಕೈ ತೊಳೆದು ಹೊರಗೆ ಬರುತ್ತಲೇ ಅಲ್ಲಿಯ ನೌಕರನೊಬ್ಬನು ವರ್ತಮಾನ ತಿಳಿಸಿದನು. ಗಾಬರಿಯಿಂದ ಚಂದ್ರನು ಹೊರಟನು. "ದೇವರೇ! ತುಳಸಿ, ರಾಧೆ ಕ್ಷೇಮವಾಗಿರಲಿ" ಎಂಬುದೊಂದೇ ಅವನ ಜಪವಾಗಿತ್ತು. ಎಷ್ಟು ತಿರುಗಿಸಿದರೂ ಕಾರು ಹೊರಡಲೊಲ್ಲದು. ಚಂದ್ರನ ಮೈಯೆಲ್ಲಾ ಬೆವತು ನೀರಾಗಿತ್ತು. ಕಡೆಗೆ ಅಲ್ಲಿದ್ದವರೆಲ್ಲ ತಳ್ಳಿ ಕಾರನ್ನು ಹೊರಡಿಸುವ ವೇಳೆಗೆ ಅರ್ಧಘಂಟೆಯಾಯಿತು. ಮನೆಯ ಕಡೆ ಹೋಗಹೋಗುತ್ತ ಜನರ ಗುಂಪು ಹೆಚ್ಚುತ್ತಿದ್ದಿತು. ಚಂದ್ರನ ಗಾಬರಿಯೂ ಹೆಚ್ಚಾಗುತ್ತಾ ಹೋಯಿತು. ಮುಂದೆ ಕಾರನ್ನು ಬಿಡುವುದೇ ಅಸಾಧ್ಯವಾಗಲು ಅಲ್ಲೇ ನಿಲ್ಲಿಸಿ ಚಂದ್ರನು ನುಗ್ಗಿ ಹೋದನು. ಅಲ್ಲಿಯ ದೃಶ್ಯವನ್ನು ನೋಡಿ ಅವನ ಹೃದಯ ಬಾಯಿಗೇ ಬಂತು. ಅವನ ಮನೆ, ತುಳಸಿಯ ಪ್ರೇಮ ಮಂದಿರ ಬೆಂಕಿಹತ್ತಿ ಉರಿಯುತ್ತಿತ್ತು. ಅಲ್ಲಿ ಸೇರಿದ್ದವರು ಬೆಂಕಿಯನ್ನಾರಿಸಲು ಪ್ರಯತ್ನಿಸುತ್ತಿದ್ದರು. ಚಂದ್ರನು "ತುಳಸೀ" ಎಂದರಚುತ್ತಾ ಮುನ್ನುಗ್ಗಲು ಯಾರೋ ಅವನ ರಟ್ಟೆಯನ್ನು ಬಲವಾಗಿ ಹಿಡಿದು ನಿಲ್ಲಿಸಿದರು. ರಾಧೆಯನ್ನು ತೊಡೆಯಮೇಲೆ ಹಾಕಿಕೊಂಡು ಅವನ ಮುದಿ ಸೇವಕ ರಾಮಸಿಂಹನು ಕುಳಿತಿದ್ದನು. ರಾಧೆಯೆಂದು ಗುರುತೇ ಸಿಕ್ಕದಷ್ಟು ಅವಳ ದೇಹವೆಲ್ಲಾ ಸುಟ್ಟುಹೋಗಿತ್ತು. ಚಂದ್ರನು ಕುಳಿತುಕೊಂಡು ರಾಧೆಯನ್ನು ಮೆಲ್ಲಗೆ ಎತ್ತಿಕೊಂಡನು. ಮುಟ್ಟಿದ ನೋವಿಗೆ ರಾಧೆಯು "ಅಮ್ಮಾ" ಎಂದು ಚೀರಿದಳು. ಚಂದ್ರನ ಪಳಗಿದ ಕಣ್ಣಿಗೆ ಅವಳ ಜೀವದ ಆಸೆಯಿಲ್ಲವೆಂದು ಖಂಡಿತವಾಗಿ ತಿಳಿಯಿತು. ರಾಮಸಿಂಹನನ್ನು ನೋಡಿ, "ಅಮ್ಮಾವರೆಲ್ಲಿ?" ಎಂದನು. ರಾಮಸಿಂಹನು ಕಣ್ಣುಗಳಿಂದ ಧಾರಾಳವಾಗಿ ನೀರು ಸುರಿಯುತ್ತಿರಲು ಸುಮ್ಮನೆ ತಲೆಯಾಡಿಸಿದನು. ರಾತ್ರಿ ಸುಮಾರು ಹತ್ತು ಘಂಟೆಯ ವೇಳೆಗೆ ನೋವಿನ ಪಂಜರದಿಂದ ತಪ್ಪಿಸಿಕೊಂಡು ರಾಧೆಯ ಪ್ರಾಣಪಕ್ಷಿ ಹಾರಿಹೋಯಿತು.

ಮನುಷ್ಯನ ಸಹನಾಶಕ್ತಿಗೂ ಒಂದು ಮಿತಿಯುಂಟು. ಚಂದ್ರನ ದುಃಖ ಆ ಎಲ್ಲೆಯನ್ನು ಮೀರಿ ಹೋಗಿತ್ತು. ಅವನ ಸಹೋದ್ಯೋಗಿಗಳೂ, ನೌಕರರೂ ತುಳಸಿಗಾಗಿ ಊರನ್ನೆಲ್ಲಾ ಶೋಧಿಸಿದರು. ಎಲ್ಲೂ ಪತ್ತೆಯಾಗಲಿಲ್ಲ. ತಾನು ಹೇಗೆ ಊರುಬಿಟ್ಟನೋ, ಮಾವನ ಮನೆಯನ್ನು ಸೇರಿದನೋ ಒಂದೂ ಚಂದ್ರನಿಗೆ ನೆನಪಿಲ್ಲ. ಅವನ ದುಃಖದ ಆಳವನ್ನರಿತ ಅತ್ತೆಮಾವಂದಿರು ಆ ವಿಷಯ ಹೆಚ್ಚು ಪ್ರಶ್ನಿಸುತ್ತಿರಲಿಲ್ಲ. ರಾಧೆ ಸತ್ತಳೆಂದೂ ತುಳಸಿ ಕಣ್ಮರೆಯಾದಳೆಂದೂ ಮಾತ್ರ ತಿಳಿದಿದ್ದರು. ಬರುತ್ತಲೇ ಎಳೆಯ ಮಗುವಿನಂತೆ ಬಿಕ್ಕುತ್ತಾ ಬಂದ ಚಂದ್ರನು ಅಷ್ಟು ಸುದ್ದಿಯನ್ನು ತಿಳಿಸಿದ್ದನು. ಪುನಃ ಅವನು ಆ ಮಾತನ್ನೆತ್ತಲಿಲ್ಲ. ಮರದ ತುಂಡಿನಂತೆ ಬಿದ್ದಿರುತ್ತಿದ್ದನು. ತಮ್ಮ ದುಃಖವನ್ನು ನುಂಗಲು ಪ್ರಯತ್ನಿಸುತ್ತಿದ್ದರೇ ಹೊರತು, ಸರಸ್ವತಮ್ಮನಾಗಲಿ, ಶ್ರೀನಿವಾಸರಾಯರಾಗಲಿ ಚಂದ್ರನನ್ನು ಪ್ರಶ್ನಿಸುತ್ತಿರಲಿಲ್ಲ.

*

"ಇನ್ನೆಷ್ಟು ದಿನ ಹೀಗೆ ಗೋಳಾಡುತ್ತಿರುತ್ತೀ, ಚಂದ್ರೂ? ಆದುದಾಯಿತು. ಮುಂದಿನ ಯೋಚನೆ ನೋಡು. ನನ್ನನ್ನು ನೋಡಿ ಧೈರ್ಯ ತಂದುಕೋ." – ಶ್ರೀನಿವಾಸರಾಯರು ಈ ಮಾತನ್ನಾಡುತ್ತಿರುವಾಗಲೇ ಅವರ ಕಣ್ಣಿನಿಂದ ಪಟಪಟನೆ ನೀರುದುರಿತು.

ಚಂದ್ರನು ನಿರಾಸೆ ತುಂಬಿದ ಕಣ್ಣುಗಳನ್ನು ಅವರ ಕಡೆ ತಿರುಗಿಸಿ "ನಾನೇನು ಮಾಡಲಿ?" ಎಂದನು.

"ಏನು ಮಾಡಲಿ – ಎಂದರಾಗುತ್ತದೆಯೇ? ನೀನಿನ್ನೂ ಹುಡುಗ, ಮಾಡಬೇಕಾದದ್ದು ಎಷ್ಟೋ ಇದೆ."

"ಯಾರಿಗಾಗಿ ಮಾಡಲಿ?"

"ನಾನು ಯಾರಿಗಾಗಿ ಮಾಡುತ್ತೇನೆ?" ಎಂದವರೇ ಕುರ್ಚಿಯ ಮೇಲೆ ಕುಳಿತು ಮುಖ ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅತ್ತುಬಿಟ್ಟರು.

ಚಂದ್ರನಿಗೆ ನಾಚಿಕೆಯಾಯಿತು. "ನಾನೆಷ್ಟು ಸ್ವಾರ್ಥತೆಯಿಂದ ನನ್ನ ದುಃಖವನ್ನು ಬೆಳೆಸಿಕೊಳ್ಳುತ್ತಿದ್ದೇನೆ. ಅವರ ದುಃಖವೇನೆಂಬುದನ್ನು ಕೂಡ ವಿಚಾರಿಸಲಿಲ್ಲವಲ್ಲಾ," ಎಂದು ಮರುಗಿ, ಎದ್ದು ಮಾವನ ಭುಜವನ್ನು

ನೇವರಿಸಿದನು. ಶ್ರೀನಿವಾಸರಾಯರು ಕಣ್ಣೊರೆಸಿಕೊಂಡು, "ಬಿಡು, ಪರವಾಯಿಲ್ಲ ಬಿಡು ಈಗ ದೆಹಲಿಯಲ್ಲಿ ವೈದ್ಯರಿಗೇನೂ ಕಡಿಮೆ ಕೆಲಸವಿಲ್ಲ. ಲಕ್ಷಾಂತರ ನಿರಾಶ್ರಿತರು ಬಂದಿದ್ದಾರೆ. ಅವರ ಯೋಗಕ್ಷೇಮ ವಿಚಾರಿಸಲು ವೈದ್ಯರ ತಂಡವೇ ಬೇಕಾಗಿದೆ," ಎಂದರು.

ನಿರಾಶ್ರಿತರೆನ್ನುತ್ತಲೇ ಚಂದ್ರನ ಮೈಯಲ್ಲಿ ವಿದ್ಯುತ್ಸಂಚಾರವಾಯಿತು. ಕೋಣೆಯಲ್ಲಿ ಆ ಕಡೆಯಿಂದ ಈ ಕಡೆಗೆ ತಿರುಗಲಾರಂಭಿಸಿದನು. ಶ್ರೀನಿವಾಸರಾಯರು ವಿಷಾದದಿಂದ ನಕ್ಕು, "ಅವರಲ್ಲಿ ತುಳಸಿಯಿಲ್ಲ, ವಿಚಾರಿಸಿ ಕೇಳಿದೆ" ಎಂದರು.

*

ಚಂದ್ರನಿಗೆ ನಿಜವಾಗಿಯೂ ಕೆಲಸದಲ್ಲಿ ಅಲ್ಪ ಸ್ವಲ್ಪ ಶಾಂತಿ ದೊರಕಿತು. ಹಗಲೆನ್ನದೆ ರಾತ್ರಿಯೆನ್ನದೆ ನಿರಾಶ್ರಿತರ ವಸತಿಯಲ್ಲಿ ದುಡಿಯುತ್ತಿದ್ದನು. ಅವರ ದುಃಖದ ಕತೆಗಳನ್ನು ಕೇಳಿ ಅವನ ಮೈಮೇಲೆ ಮುಳ್ಳೇಳುತ್ತಿದ್ದಿತು. ಅಂತಹ ಸನ್ನಿವೇಶಗಳಲ್ಲಿ ತುಳಸಿಯನ್ನು ಚಿತ್ರಿಸಿಕೊಳ್ಳುವ ಶಕ್ತಿಯೂ ಅವನಿಗಿರಲಿಲ್ಲ. ಆದರೆ ಈ ಹೆಣ್ಣುಮಕ್ಕಳಲ್ಲಿ ಅನೇಕರು ತುಳಸಿಯಂತೆ ಸುಖದಲ್ಲಿ ಬೆಳೆದವರು. ಅವರಿಗೆ ತಾನು ಮಾಡುವ ಸೇವೆ ತುಳಸಿಗೆ ನೆರವಾಗಲೆಂಬ ಬುದ್ಧಿಯಿಂದ ಚಂದ್ರನು ದುಡಿಯುತ್ತಿದ್ದುದರಿಂದ ಅವನ ಕೆಲಸದಲ್ಲಿ ಶ್ರದ್ಧೆಯ ಅನಂತ ವಿಶ್ವಾಸ ಬೆರೆತಿತ್ತು. ಅವನಿಗೆ ಬಿಡುವೇ ಇರಲಿಲ್ಲ. ನಿರಾಶ್ರಿತರಿಗೆ ಔಷಧೋಪಚಾರಗಳನ್ನೆಸಗುವುದೇ ಅಲ್ಲದೆ, ಉಡಲು ಬಟ್ಟೆ, ತಿನ್ನಲು ಆಹಾರ ಇವುಗಳನ್ನೂ ಶೇಖರಿಸಲು ಶ್ರಮಿಸುತ್ತಿದ್ದನು, ಆ ವಸತಿಯ ಹೆಣ್ಣುಮಕ್ಕಳೆಲ್ಲಾ ಅವನನ್ನು ದೇವರಂತೆ ಕಾಣುತ್ತಿದ್ದರು.

ಈಗ ಅವನಲ್ಲಿ ಮೊದಲಿನ ಉಲ್ಲಾಸವಿಲ್ಲ; ಹಾಸ್ಯವಿಲ್ಲ. ತನ್ನ ದುಃಖವನ್ನು ಮರೆಯಲು ಘೋರ ತಪಸ್ಸನ್ನೇ ಆಚರಿಸುತ್ತಿದ್ದನು.

ಸರಸ್ವತಮ್ಮನಿಗೆ ಅವನ ಕಷ್ಟವನ್ನು ನೋಡಿ ಮರುಕವುಂಟಾಗುವುದು. "ಹೊತ್ತಿಗೆ ಸರಿಯಾಗಿ ಊಟಕ್ಕೆ ಬಾ ಚಂದ್ರೂ, ಆರೋಗ್ಯವಾಗಿದ್ದರಲ್ಲವೇ ಕೆಲಸ?" ಎನ್ನುವರು.

"ಆರೋಗ್ಯವಿಲ್ಲದೆ ನನಗೇನಾಗಿದೆ, ಅತ್ತೇ" ಎಂದು ಉತ್ತರವನ್ನು ಹಾರಿಸಿ ಹೊರಟು ಹೋಗುವನು.

ಆ ವಸತಿಯಲ್ಲಿ ಮೂರು ವರ್ಷದ್ದೊಂದು ಮಗು. ಅದನ್ನು ನೋಡಿದಾಗಲೆಲ್ಲಾ ರಾಧೆಯ ನೆನಪು ಚಂದ್ರನ ಮನಸ್ಸನ್ನು ಕಲಕುವುದು, ಆಸ್ಪತ್ರೆಯಿಂದ ಬರುವ ವೇಳೆಗೆ ಸಿಂಗರಿಸಿಕೊಂಡು ಕಾರಿನಲ್ಲಿ ಹೊರಡಲು ಸಿದ್ಧಳಾಗಿರುತ್ತಿದ್ದ ರಾಧ! ಮನೆಗೆ ಬರುವ ವೇಳೆಗೆ ಅಮ್ಮನ ಮೇಲೆ ಎಷ್ಟೋ ದೂರುಗಳು. ನಗುತ್ತಾ, ಕುಣಿಯುತ್ತಾ, ಇಬ್ಬರ ಹೃದಯದಲ್ಲೂ ತನ್ನದೊಂದು ಸಿಂಹಾಸನವನ್ನೇ ಪ್ರತಿಷ್ಠಿಸಿಬಿಟ್ಟಿದ್ದಳು. ಅವಳನ್ನು ಎಷ್ಟು ಸಿಂಗರಿಸಿದರೂ ತುಳಸಿಗೆ ತೃಪ್ತಿಯಿಲ್ಲ. ಕಡೆಯ ದಿನ ಆಸ್ಪತ್ರೆಗೆ ಹೋಗುವ ಮೊದಲು ಬೊಂಬೆ ತರಬೇಕೆಂದು ಹಠ ಹಿಡಿದು ಮಾತು ತೆಗೆದುಕೊಂಡಿದ್ದಳು. ಪುನಃ ನೋಡುವ ವೇಳೆಗೆ ಸುಟ್ಟು ಮಾಂಸದ ಮುದ್ದೆಯಾಗಿದ್ದಳು. ಅಲ್ಲಿಗೆ ಚಂದ್ರನ ಆಲೋಚನೆಗಳು ತಡೆಗಟ್ಟಿ ನಿಲ್ಲುವುವು. ಆ ಭಯಂಕರ ದೃಶ್ಯವನ್ನು ಮನಸ್ಸಿನಿಂದ ಅಳಿಸಲು ಸಾಧ್ಯವೇ ಇರಲಿಲ್ಲ. ಇಂದಿಗೂ ಅವಳು ನೋವಿನಿಂದ ಚೀರುತ್ತಿರುವಂತೆ ಅವನಿಗೆ ಆಗಾಗ ತೋರುವುದು. ತುಳಸಿಯೂ ಅಲ್ಲಿಯೇ ಬೆಂದು ಹೋಗಿದ್ದರೆ! ಈ ಅನಿಶ್ಚಯವಿರುತ್ತಿರಲಿಲ್ಲ. ಕಲ್ಪಿತ ಯಾತನೆಯಿರುತ್ತಿರಲಿಲ್ಲ. ಆಲೋಚನೆಗಳನ್ನು ಹರಿಯಬಿಟ್ಟರೆ ಹುಚ್ಚು ಹಿಡಿಯುವಂತಾಗುತ್ತಿತ್ತು. ಇವನ್ನೆಲ್ಲ ಮರೆಯಲು ಆ ಅನಾಥಮಗುವನ್ನು ಮುದ್ದಿಸಿ ಅವಳಿಗೆ ತಿಂಡಿಯನ್ನು ತೆಗೆದುಕೊಂಡು ಹೋಗುತ್ತಿದ್ದನು.

*

ಆ ದಿನ ಸಂಜೆ ಶ್ರೀನಿವಾಸರಾಯರು ಹೊರಗೆ ಹೊರಡಲು ಸಿದ್ಧರಾಗಿ ನಿಂತಿದ್ದರು. ಬೈಸಿಕಲ್ಲನ್ನು ತಳ್ಳಿಕೊಂಡು ಚಂದ್ರನು ಆಗತಾನೆ ಮನೆಗೆ ಬರುತ್ತಿದ್ದನು. ಮಾವನನ್ನು ನೋಡಿ, "ಎಲ್ಲಿಗೋ ಹೊರಟಿರುವ ಹಾಗಿದೆ?" ಎಂದನು.

"ಗಾಂಧೀಜಿಯ ಪ್ರಾರ್ಥನಾ ಸಭೆಗೆ ಹೋಗಿಬರೋಣವೆಂದು ಕೊಂಡೆ" ಎಂದರು.

"ಒಂದು ನಿಮಿಷ ತಡೆದರೆ ನಾನೂ ಬರುತ್ತೇನೆ."

"ಇನ್ನೂ ಈಗತಾನೇ ಮನೆಗೆ ಬರುತ್ತಿದ್ದೀ. ಸ್ವಲ್ಪ ಕಾಫಿ, ತಿಂಡಿ ತೆಗೆದುಕೊಂಡು ವಿಶ್ರಮಿಸಿಕೋ." ಆ ವಿಶ್ರಾಂತಿಯೇ ಬೇಕಾಗಿರಲಿಲ್ಲ ಚಂದ್ರನಿಗೆ. ಒಂದರೆಗಳಿಗೆ ಸುಮ್ಮನೆ ಕುಳಿತರೂ ಮನಸ್ಸನ್ನು ಕದಡುವ ಆಲೋಚನೆಗಳು: ಹಿಂದಿನ ನೆನಪುಗಳು; ನಡೆದು ಹೋದುದನ್ನು ಬದಲಾಯಿಸಲು ಶಕ್ತಿಯಿಲ್ಲದ

ತನ್ನ ಅಸಹಾಯಕತೆ! ಚಂದ್ರನಿಗೆ ವಿಶ್ರಾಂತಿಯಿಲ್ಲ. ದುಡಿತ, ದುಡಿತ! ಹಗಲೂ ರಾತ್ರಿ ದುಡಿದು ದುಃಖದ ಆವೇಗವನ್ನು ಮರೆಯಬೇಕಾಗಿತ್ತು. ತುಳಸಿಯ ನಿರಾಶ್ರಿತ ಅಜ್ಞಾತ ಸ್ಥಿತಿಯನ್ನು ನೆನೆದರೆ ಅವನಿಗೆ ಈ ಭೂಮಿಯ ಮೇಲಿರುವುದೇ ಅಸಾಧ್ಯವಾಗಿ ತೋರುತ್ತಿತ್ತು.

"ಬೇಗ ಬರುತ್ತೇನೆ" ಎಂದು ಒಳಗೆ ಹೋದನು. ಸರಸ್ವತಮ್ಮನು ತಿಂಡಿ, ಕಾಫಿಯನ್ನು ಸಿದ್ಧವಾಗಿಯೇ ಇಟ್ಟುಕೊಂಡಿದ್ದುದರಿಂದ ಅವನು ಹಿಂತಿರುಗಿ ಬರುವುದು ತಡವಾಗಲಿಲ್ಲ. ಇಬ್ಬರೂ ಹೊರಟು ಮೈದಾನವನ್ನು ಸೇರುವುದರೊಳಗಾಗಿ ಜನರು ಕಿಕ್ಕಿರಿದು ನೆರೆದಿದ್ದರು. ಗಾಂಧೀಜಿಯೂ ಬಂದು ಕುಳಿತಿದ್ದರು. ಆ ದಿನದ ಪ್ರಸಂಗವು ನಿರಾಶ್ರಿತರ ವಿಚಾರವಾಗಿಯೇ ನಡೆದಿತ್ತು; ಅದರಲ್ಲೂ ನಿರಾಶ್ರಿತರಾದ ಹೆಣ್ಣುಮಕ್ಕಳ ವಿಚಾರವಾಗಿ. "ಜಾತಿಕೆಟ್ಟರೆಂದು ಅವರನ್ನು ದೂಡಬೇಡಿ; ಅವರು ಬುದ್ಧಿಪೂರ್ವಕವಾಗಿ ಕೆಟ್ಟ ಹಾದಿಗೆ ನಡೆದವರಲ್ಲ. ಬಲಾತ್ಕಾರದಿಂದ, ಹಿಂಸೆಯಿಂದ ಕುಲವಧುಗಳು ದಾರಿತಪ್ಪಿದರೆ, ವಿಶ್ವಾಸದಿಂದ ಆದರದಿಂದ ಹಿಂದಕ್ಕೆ ಬರಮಾಡಿಕೊಳ್ಳಿ" ಎಂದು ಅಮೃತವಾಣಿಯಿಂದ ಮಹಾತ್ಮರು ಉಪದೇಶಿಸಿದರು.

ಚಂದ್ರನು ಒಂದೇ ಮನಸ್ಸಿನಿಂದ ಕೇಳಿದನು. ಆ ಮಹಾತ್ಮನ ಸನ್ನಿಧಿಯಲ್ಲಿ ಎಂತಹ ಅಲೌಕಿಕ ಶಾಂತಿ. ಮನಸ್ಸಿನ ಹೊಡೆದಾಟವೆಲ್ಲಾ ನಿಂತು ಶಾಂತಿಸಾಗರದಲ್ಲಿ ಮಿಂದು ಬಂದಂತಿತ್ತು. ಹೆಂಗಳೆಯರ ಘೋರ ಸಂಕಟಕ್ಕೆ ಮರುಗಿ ಮಹಾತ್ಮರ ಕಣ್ಣುಗಳಿಂದ ನೀರುದುರುತ್ತಿತ್ತು. ಎಂತಹ ಕಷ್ಟಕಾಲದಲ್ಲಿಯೂ ಮಿಡುಕದ ಜೀವವು ಪರರ ಕಷ್ಟಕ್ಕಾಗಿ ತಲ್ಲಣಿಸುತ್ತಿತ್ತು. ಚಂದ್ರನು ನಿರ್ವಿಕಾರವಾಗಿ ತುಳಸಿಯ ವಿಚಾರವಾಗಿ ಆಲೋಚಿಸಲು ಶಕ್ತನಾದನು. "ಈಗೊಂದುವೇಳೆ ತುಳಸಿ ದೊರೆತರೆ – ಆನಂದದಿಂದ ಅವಳನ್ನು ಮನೆಗೊಯ್ದು ಪುನಃ ನನ್ನ ಹೃದಯಮಂದಿರದಲ್ಲಿ ಪ್ರತಿಷ್ಠಿಸುವೆನು. ನೊಂದ ಜೀವವನ್ನು ಪುನಃ ನೋಯಿಸುವೆನೆ? ತುಳಸಿ ಬರಿದು ಮಾಡಿಹೋದ ಸ್ಥಳವನ್ನು ತುಂಬಲು ಬೇರಾರಿಗೆ ಸಾಧ್ಯ?" ಎಂದು ಆಲೋಚಿಸಿಕೊಂಡನು. ಮಹಾತ್ಮರ ವಚನಗಳನ್ನು ಎಷ್ಟು ಕೇಳಿದರೂ ಅವನಿಗೆ ತೃಪ್ತಿಯೆನಿಸಲಿಲ್ಲ. ಸಭೆ ಮುಗಿದಮೇಲೂ ಕಲ್ಲಿನ ಪ್ರತಿಮೆಯಂತೆ ಕುಳಿತೇ ಇದ್ದನು. ಶ್ರೀನಿವಾಸರಾಯರು ಭುಜ ಹಿಡಿದು ಅಲುಗಿಸಿದಾಗಲೇ ಅವನಿಗೆ ಎಚ್ಚರ. ಅವರ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಸುರಿಯುತ್ತಿತ್ತು. "ಪುನಃ ತುಳಸಿ ದೊರೆಯುವಳೇ?" ಎಂದು ನಿಟ್ಟುಸಿರುಗರೆದರು.

ಮಾರನೆಯ ದಿನ ಮಧ್ಯಾಹ್ನ ಚಂದ್ರನು ಬಿರ್ಲಾ ಭವನಕ್ಕೆ ನಡೆದನು. ಮಹಾತ್ಮರ ಬಳಿಯಲ್ಲಿ ಬೇರೆ ಯಾರೂ ಇಲ್ಲದುದರಿಂದ ಚಂದ್ರನನ್ನು ಬೇಗ ಕರೆಸಿಕೊಂಡರು. ಸಹಜವಾದ ಸೌಜನ್ಯದಿಂದ ಚಂದ್ರನ ಕೈ ಹಿಡಿದು ಕುಳ್ಳಿರಿಸಿಕೊಂಡರು. "ನೀವು ನಿರಾಶ್ರಿತರ ವಿಚಾರದಲ್ಲಿ ಬಹಳ ಶ್ರದ್ಧೆವಹಿಸಿ ಕೆಲಸಮಾಡುತ್ತಿರುವಿರಂತೆ. ಕೇಳಿ ಬಹಳ ಸಂತೋಷವಾಯಿತು." ಶ್ರೀಕೃಷ್ಣನೊಮ್ಮೆ ಅರ್ಜುನನ ಮೈತಡವಲು ಅವನ ಸಮಸ್ತ ದುಃಖಗಳೂ ಮರೆಯಾದುವಂತೆ. ಈಗ ಚಂದ್ರನ ಸ್ಥಿತಿಯೂ ಹಾಗೆಯೇ ಆಯಿತು. ತನ್ನ ಕೆಲಸವೂ ಸಾರ್ಥಕವಾಯಿತೆನ್ನಿಸಿತು. ತಲೆಬಾಗಿ ಸುಮ್ಮನಿದ್ದನು. "ಬೇರೆಯವರ ಕಷ್ಟದಲ್ಲಿ ಸಹಾನುಭೂತಿ ತೋರುವುದು ದೈವದತ್ತ ವರ" – ಮಹಾತ್ಮರೆಂದರು. "ನಾನೂ ಕಷ್ಟಪಟ್ಟಿದ್ದೇನೆ ಬಾಪೂಜಿ" ಎಂದು ಚಂದ್ರನು ತನ್ನ ದುಃಖದ ಕಥೆಯನ್ನು ತೋಡಿಕೊಂಡನು. ಮಹಾತ್ಮರ ಮುಖವು ಕನಿಕರದಿಂದ ಬಾಡಿಹೋಗಿತ್ತು. ಮಾತನಾಡದೆ ಚಂದ್ರನ ಬೆನ್ನನ್ನು ನೇವರಿಸಿದರು. ಕೆಲಹೊತ್ತು ಸುಮ್ಮನಿದ್ದು, "ತುಳಸಿ ನಿಮಗೆ ಖಂಡಿತ ಸಿಕ್ಕುತ್ತಾಳೆ. ದೇವರನ್ನು ನಂಬಿ. ಧೈರ್ಯಗೆಡಬೇಡಿ. ಆದರೆ ಮಾತ್ರ ಜೋಕೆಯಿಂದಿರಿ! ಈಗಲೇ ಹೇಳಿದ್ದೇನೆ. ಅವಳ ಮೇಲೆ ವಿಚಾರಣೆಗೆ ಕೂಡುವ ಅಧಿಕಾರವನ್ನು ದೇವರು ನಿಮಗೆ ಕೊಟ್ಟಿಲ್ಲ. ಪರಮಾತ್ಮನು ನಿಮಗೆ ಕೊಟ್ಟುದ್ದನ್ನು ನಮ್ರತೆಯಿಂದ, ವಿಶ್ವಾಸದಿಂದ ಸ್ವೀಕರಿಸಿ" ಎಂದರು. ಆ ದಿನ ಚಂದ್ರನು ಮನೆಗೆ ಬರುವ ವೇಳೆಗೆ ಸಂಜೆಯಾಗಿತ್ತು. ಮನಸ್ಸು ಶಾಂತವಾಗಿತ್ತು. ತುಳಸಿ ಹೊರಟು ಹೋದಂದಿನಿಂದ, ಆ ರಾತ್ರಿ ಅನುಭವಿಸಿದಂತಹ ಹಿತವಾದ ನಿದ್ರೆಯನ್ನು ಚಂದ್ರನು ಎಂದೂ ಅನುಭವಿಸಿರಲಿಲ್ಲ.

ಮುಂದೆ ಅನೇಕ ದಿನಗಳು ಕಳೆದವು. ಬರಬರುತ್ತ ಚಂದ್ರನಿಗೆ ಮಹಾತ್ಮರ ಅಭಯವಚನದಲ್ಲಿ ವಿಶ್ವಾಸ ಜಾರುತ್ತಾ ಬಂತು. ಇನ್ನೆಲ್ಲಿಯ ತುಳಸಿ! ಯಾವ ಪೈಶಾಚಿಕ ಕೃತ್ಯದಿಂದ ಎಂದು ಅವಳು ಹತಳಾದಳೋ! ಈ ಜನ್ಮದಲ್ಲಿ ಅವಳನ್ನು ಕಾಣುವ ಆಸೆಯಿಲ್ಲ!

ನಿರಾಸೆ ಹೆಚ್ಚಿಂದತೆಲ್ಲಾ ಚಂದ್ರನು ತನ್ನ ಕೆಲಸದಲ್ಲೇ ತಲ್ಲೀನನಾಗುತ್ತ ಬಂದನು. ಎಷ್ಟು ಮಾಡಿದರೂ ಕೊನೆಮೊದಲಿಲ್ಲದ ಕೆಲಸ, ಹೊಟ್ಟೆಗಿಲ್ಲದ, ಬಟ್ಟೆಗಿಲ್ಲದ ಆ ಅನಾಥರ ನಡುವೆ ರೋಗಗಳು ಮನೆ ಮಾಡಿಕೊಂಡುದೇನಾಶ್ಚರ್ಯ? ಮಧ್ಯಾಹ್ನವಾಗುವ ವೇಳೆಗೆ, ಆ ಕರ್ಕಶ ದೃಶ್ಯಗಳನ್ನು ನೋಡಿ, ಅವನೆದೆಯು ಸೋತುಹೋಗುವುದು. ಮನೆಗೆ

ನಡೆಯುವುದಕ್ಕೂ ತ್ರಾಣ ಸಾಲದೆ ಹೋಗುವುದು. ಒಂದು ದಿನ ಉರಿಯುವ ಬಿಸಿಲಿನಲ್ಲಿ ನಿಧಾನವಾಗಿ ಬರುತ್ತಿರಲು ಹಿಂದೆ ಯಾರೋ ಹೆಂಗಸು ನಡೆದು ಬಂದಳು. ಮುಖವನ್ನು ಸೆರಗಿನಲ್ಲಿ ಮರೆಸಿಕೊಂಡಿದ್ದುದರಿಂದ ಯಾರೆಂದು ತಿಳಿಯಲಿಲ್ಲ. ಮುಂದೆ ಹೋಗಲೆಂದು ಹೆಜ್ಜೆಯನ್ನು ನಿಧಾನ ಮಾಡಿದನು. ಅವಳು ಎದುರಿಗೆ ಬಂದು ಪರದೆಯನ್ನು ಸರಿಸಲು – ತುಳಸಿ! ಆಯಾಸದಿಂದ ಕಂದಿ, ಅನಾಥಳಾಗಿ ಬೆಂದ ತುಳಸಿ! ಚಿಂದಿ ಚಿಂದಿ ಸೀರೆಯನ್ನುಟ್ಟಿದ್ದಳು. ತಲೆಬಾಚಿ ಯಾವ ಕಾಲವೋ ಆಗಿತ್ತು. ಆದರೂ ಚಂದ್ರನ ಹೃದಯಾಧಿದೇವತೆ ತುಳಸಿ! ಚಂದ್ರನು ಕಣ್ಣನ್ನೇ ನಂಬಲಾರದೇ ಹೋದನು. "ತುಳಸೀ" ಎಂದು ಕೈಗಳನ್ನು ಚಾಚಿದನು. ತುಳಸಿಯು ಹೆದರಿದಂತೆ ಸ್ವಲ್ಪ ಹಿಂದೆ ಸರಿದಳು. ಚಂದ್ರನು ಅನುಮಾನದಿಂದ, "ನೀನು ತುಳಸಿಯಲ್ಲವೆ?" ಎಂದನು. ತುಳಸಿಯ ಕಣ್ಣೀರು ಹರಿಯುತ್ತಿತ್ತು. "ಹೌದು ನಾನೇ–ನಿರ್ಭಾಗ್ಯೆ ತುಳಸಿ" ಎಂದಳು.

ಚಂದ್ರನಿಗೆ ತಾನು ನಿದ್ರೆಯಲ್ಲಿ ಕನಸು ಕಾಣುತ್ತಿರುವಂತೆ ತೋರಿತು. ಅನೇಕ ಸಲ, ರಾತ್ರಿ ಮಲಗಿ ಅವನು ಈ ದೃಶ್ಯವನ್ನು ಕಲ್ಪಿಸಿಕೊಂಡಿದ್ದನ್ನು. ತುಳಸಿಯ ಪುನದರ್ಶನವಾದಾಗ ತಾನಾಡಬೇಕಾದ ಮಾತುಗಳನ್ನು ನಿರ್ಧರಿಸಿದ್ದನು. ಅವಳ ನೋವನ್ನೆಲ್ಲಾ ಮರೆಸುವೆನೆಂದು ಪಣತೊಟ್ಟಿದ್ದನು. ಆದರೆ ಈಗ ಅವನ ಬಾಯಲ್ಲಿ ಮಾತೇ ಹೊರಡಲಿಲ್ಲ. ಮೂಕನಂತೆ ತುಳಸಿಯನ್ನು ನೋಡುತ್ತಿದ್ದನು. ತುಳಸಿಯು ಸುಮ್ಮನಿದ್ದರೂ ಅವಳ ಅಂಕೆ ಮೀರಿ ಹರಿದ ಕಣ್ಣೀರನ್ನು ಸೆರಗಿನಲ್ಲಿ ಒರೆಸಿಕೊಂಡಳು. ಚಂದ್ರನಿಗೆ ತಟ್ಟನೆ ಎಚ್ಚರವಾದಂತಾಗಿ, "ಮನೆಗೆ ಬಾ, ತುಳಸೀ" ಎಂದನು. ತುಳಸಿ "ಬರಬಹುದೆ?" ಎಂದಳು.

"ಇದೇನು ಹೀಗೆನ್ನುತ್ತೀ?" ನಿನ್ನ ಮನೆಗೆ ಬರಲು ನೀನು ಅಪ್ಪಣೆಯನ್ನು ಕೇಳಬೇಕೆ? ಬಾ, ಹೋಗೋಣ." "ಹಾಗಾದರೆ ಇಲ್ಲೇ ಇರಿ, ಮಗುವನ್ನು ತರುತ್ತೇನೆ." "ಮಗು!!" ಚಂದ್ರನು ಬೆಚ್ಚಿದನು. ಅವನ ಕಲ್ಪನೆಯಲ್ಲಿಯೂ ಮಗುವೊಂದರ ಚಿತ್ರ ಸುಳಿದಿರಲಿಲ್ಲ. ತಟ್ಟನೆ ಹೊಡೆದೆಬ್ಬಿಸಿದಂತಾಯಿತು. ತನ್ನದಲ್ಲದ ತುಳಸಿಯ ಮಗು! ಅವಮಾನದಿಂದ ರಕ್ತ ಬಿಸಿಯಾಯಿತು. ಅವನ ಅನುಮಾನವನ್ನು ನೋಡಿ ತುಳಸಿ, "ಹೌದು, ನಿರ್ಭಾಗ್ಯ ಮಗುವೊಂದಿದೆ. ನಾಲ್ಕು ತಿಂಗಳು. ರಾಧೆ ಚೆನ್ನಾಗಿದ್ದಾಳೆಯೇ?" ಎಂದಳು.

"ರಾಧೆ! ಇನ್ನೆಲ್ಲಿಯ ರಾಧೆ! ಮನೆ ಸುಟ್ಟಾಗ ರಾಧೆಯೂ

ಬೆಂದುಹೋದಳು." ಕ್ಷಣಕಾಲ ಇಬ್ಬರ ಬಗೆಯ ಮುಂದೆಯೂ ಆ ಸುಖಸಂಸಾರವನ್ನು ಸುಟ್ಟು ಬೂದಿಮಾಡಿದ ಪ್ರಳಯಾಗ್ನಿಯು ಸುಳಿಯಿತು. ಆದರೆ ಕಷ್ಟದ ಬೇಗುದಿಯಲ್ಲಿ ಬೆಂದು ಬಂದ ತುಳಸಿಗೆ ರಾಧೆಯ ಮರಣ ವಾರ್ತೆಯೂ ಹೆಚ್ಚಾಗಿ ತಟ್ಟಲಿಲ್ಲ. ಅವಳಿಗೆ ನೋವಿನ ಗ್ರಹಣಶಕ್ತಿಯೂ ಕೂಡ ಹೋಗಿಬಿಟ್ಟಂತಿತ್ತು.

ಚಂದ್ರನು ತನ್ನ ಮುಂದಿನ ಕಥೆಯನ್ನು ಚಿಂತಿಸುತ್ತಾ "ಮಗುವನ್ನು ಬೇಕಾದರೆ ಯಾವುದಾದರೂ ಅನಾಥಾಲಯದಲ್ಲಿ ಬಿಡೋಣ. ನೀನು ಬಾ ತುಳಸೀ" ಎಂದನು. ತುಳಸಿ ಮೊದಲಿನ ತುಳಸಿಯಾಗಿರಲಿಲ್ಲ. ಕಷ್ಟದ ಬೇಗೆ ಅವಳ ಮಾರ್ದವವನ್ನೂ ಕನಿಕರವನ್ನೂ ಬೇಯಿಸಿ, ಕಠಿಣ ಪ್ರಪಂಚದೆದುರು ಕಲ್ಲಾಗಿ ನಿಲ್ಲುವ ಸಾಮರ್ಥ್ಯವನ್ನು ಕೊಟ್ಟಿತ್ತು.

"ಮಗುವನ್ನು ಬಿಟ್ಟು ಬರುವುದಿಲ್ಲ. ಬೇಕಾದರೆ ಇಬ್ಬರೂ ಬರುತ್ತೇವೆ." ಅವಳ ಮುಖದಲ್ಲಿ ತಿರಸ್ಕಾರದ ನಗೆಯೂ ಇದ್ದಂತಿತ್ತು.

ಚಂದ್ರನು ಅನುಮಾನಿಸಿದನು. ಮಹಾತ್ಮರ ಮಾತು – "ಅವಳ ಮೇಲೆ ವಿಚಾರಣೆಗೆ ಕೂಡುವ ಅಧಿಕಾರ ನಿನಗಿಲ್ಲ"... ಆ ಮಾತುಗಳು ರಕ್ತದಲ್ಲಿ ಬರೆದಂತೆ ಕಾಣುತ್ತಿದ್ದುವು. ಆದರೂ ದುರಭಿಮಾನವೆಲ್ಲ ನಶಿಸಿ ಹೋಗುವಷ್ಟು ಕಷ್ಟದ ಕಾವಿಗೆ ಚಂದ್ರನು ಸಿಕ್ಕಿರಲಿಲ್ಲ. ಮಗುವಿನ ಮುಖ ನೋಡಲು ಕೂಡ ಅವನು ಹಿಂಜರಿದನು. ತಡವರಿಸುತ್ತಾ "ಸಾಯಂಕಾಲ ಇಲ್ಲಿಗೇ ಬಾ. ಮಾವನವರಿಗೆ ಒಂದು ಮಾತು ಹೇಳಿ ಬರುತ್ತೇನೆ" ಎಂದನು. ತುಳಸಿ ಆಗಲೆಂದು ತಲೆಯಾಡಿಸಿ ಹೊರಟುಹೋದಳು.

ಚಂದ್ರನು ಚಿಂತಿಸುತ್ತಾ ಹೊರಟನು. ಕಲ್ಪನೆಯಲ್ಲಿ ತಾನು ತುಳಸಿಗೆ ತೋರಿದ ಆದರವೇನು, ಸ್ವಾಗತವೇನು? ವಾಸ್ತವವಾಗಿ ತೋರಿದುದೇನು? ಮಗುವಿಲ್ಲದಿದ್ದರೆ ಅಥವಾ ಅದನ್ನು ಬೇರೆಲ್ಲಾದರೂ ಬಿಡಲು ತುಳಸಿ ಒಪ್ಪಿದ್ದರೆ! ವೈದ್ಯನಾಗಿ ಈ ವಿಚಾರಗಳಿಗೆ ಅಷ್ಟು ಮಹತ್ವ ಕೊಡಕೂಡದೆಂದು ತಿಳಿದಿದ್ದರೂ ಅಭಿಮಾನವು ಒಪ್ಪಲಿಲ್ಲ. ಸದಾ ತುಳಸಿಯ ಕಳಂಕವನ್ನು ಸಾರುತ್ತಾ ಆ ಮಗುವಿರಬೇಕೆ? ತನ್ನ ರಾಧೆಯ ಸ್ಥಾನದಲ್ಲಿ ಆ ಮಗುವನ್ನು ಮುದ್ದಿಸಬೇಕೆ? ಮನೆ ಸೇರಿದರೂ ಚಂದ್ರನಿಗೆ ದಿಕ್ಕು ತೋರಲಿಲ್ಲ. ಮಹಾತ್ಮರ ಬಾಯಿಂದ ತುಳಸಿಯನ್ನು ಸ್ವೀಕರಿಸಬೇಕೆಂದು ಕೇಳಿದಾಗ ಅದರಲ್ಲೇನೂ ತೊಡಕು ಕಂಡಿರಲಿಲ್ಲ. ಈಗ ಅದು ಅಸಾಧ್ಯವಾಗಿ ತೋರಿತು.

ಯಾವುದೋ ಜ್ಞಾನದಲ್ಲಿ ಊಟಮಾಡಿ ಹಾಸಿಗೆಯ ಮೇಲೆ ಬಿದ್ದುಕೊಂಡನು. ಕಡೆಗೊಂದು ಪತ್ರವನ್ನು ಬರೆದು ಮಾವನವರಿಗೆ ಕಾಣುವಂತೆ ಮುಂದಿನ ಮೇಜಿನ ಮೇಲಿಟ್ಟು ಬೈಸಿಕಲ್ ಹತ್ತಿಕೊಂಡು ಹೊರಟುಹೋದನು.

ಶ್ರೀನಿವಾಸರಾಯರು ಸಂಜೆ ಹೊರಗೆ ಹೊರಡಲು ಸಿದ್ಧರಾದರು. ಮೇಜಿನ ಮೇಲಿದ್ದ ಕಾಗದವನ್ನು ನೋಡಿದರು. "ನಿಮ್ಮ ಸ್ನೇಹಕ್ಕಾಗಲಿ, ತುಳಸಿಯ ಪ್ರೇಮಕ್ಕಾಗಲಿ ನಾನು ಅರ್ಹನಲ್ಲ, ಕ್ಷಮಿಸಿ. ತುಳಸಿ ನಿರಾಶ್ರಿತರ ವಸತಿಯ ಬಳಿಯಿರುವ ಆಲದ ಮರದ ಹತ್ತಿರ ಸಂಜೆ ನಿಮಗಾಗಿ ಕಾಯುತ್ತಿರುವಳು" ಎಂದು ಚಂದ್ರನು ಬರೆದಿಟ್ಟದ್ದನು.

ಶ್ರೀನಿವಾಸರಾಯರಿಗೇನೂ ತೋರಲಿಲ್ಲ. ಸರಸ್ವತಮ್ಮನಿಗೂ ತಿಳಿಸದೆ ಚಂದ್ರನು ಹೇಳಿದ್ದ ಕಡೆಗೆ ಹೋದರು. ತಂದೆಯನ್ನು ನೋಡಿ ತುಳಸಿಯ ಕಣ್ಣೀರಿನ ಕಟ್ಟೆಯು ಒಡೆಯಿತು. ಬಿಗಿದ ಗಂಟಲಿನಿಂದ "ಅಪ್ಪಾ" ಎಂದಳು. ಶ್ರೀನಿವಾಸರಾಯರೂ ಧಾರಾಳವಾಗಿ ಅತ್ತರು. ಮಗಳ ಬೆನ್ನನ್ನು ನೇವರಿಸಿದರು. ತಲೆ ಸವರಿದರು, "ಬಾಮ್ಮಾ ಮನೆಗೆ ಹೋಗೋಣ."

ತಿರುಗಿ ತುಳಸಿಯ ಎದೆ ಕಲ್ಲಾಯಿತು. "ಇಲ್ಲಪ್ಪಾ, ನಾನು ಬರುವುದಿಲ್ಲ, ಮಗುವೊಂದಿದೆ" ಎಂದಳು. ಶ್ರೀನಿವಾಸರಾಯರೂ ಬೆಚ್ಚಿದರು. ಮಹಾತ್ಮರ ವಚನಗಳು ಅವರ ಕಿವಿಯಲ್ಲೂ ಇನ್ನೂ ಮೊರೆಯುತ್ತಿದ್ದವು. ಕ್ಷಣಕಾಲ ಅಂಜಿದರು. ಮರುಕ್ಷಣವೇ, ಕರಕೊಂಡು ಬಾಮ್ಮಾ, ನಿನ್ನ ಮಗು ನನ್ನ ಮೊಮ್ಮಗುವಲ್ಲವೇ?" ಎಂದರು.

ತುಳಸಿ ಬಿಕ್ಕುತ್ತಾ, "ಅಪ್ಪಾ, ನೀನು ದೇವರು" ಎಂದಳು.

"ನಾನಲ್ಲಮ್ಮಾ, ಬೇರೊಬ್ಬ ದೇವರು ಮಾರ್ಗ ತೋರಿಸಿದ್ದಾನೆ" ಎಂದರು.

ಮನೆಗೆ ಹೋದ ಮೇಲೆ ತುಳಸಿ "ಅವರೆಲ್ಲಿ" ಎಂದು ಅಂಜುತ್ತ ಕೇಳಿದಳು. ಶ್ರೀನಿವಾಸರಾಯರು ಚಂದ್ರನ ಕಾಗದವನ್ನು ಕೊಟ್ಟರು. ಓದಿನೋಡಿ ತುಳಸಿ "ಹೀಗಾಗಬಹುದೆಂದುಕೊಂಡೆ" ಎಂದಳು.

ಶ್ರೀನಿವಾಸರಾಯರು "ಮನುಷ್ಯರನ್ನು ದೇವರು ಹೀಗೆ ಪರೀಕ್ಷಿಸಬಾರದಮ್ಮಾ" ಎಂದು ಕಣ್ಣೊರೆಸಿಕೊಂಡರು.

■

# 5. ಭಗತ್ ಸಿಂಗ್ (ಜೀವನ ಚರಿತ್ರೆಯ ಆಯ್ದಭಾಗ)

**– ಡಾ. ಜಿ. ರಾಮಕೃಷ್ಣ**

ಏಪ್ರಿಲ್ 1919ರ 20ನೇ ತಾರೀಖಿನಂದು ಮಧ್ಯಾಹ್ನ ಹನ್ನೆರಡು ವರ್ಷದ ಒಬ್ಬ ಬಾಲಕ ಅಮೃತಸರದ ಜಲಿಯನ್ ವಾಲಾಬಾಗ್‌ನಲ್ಲಿ ಮೂಕನಂತೆ ಅತ್ತಿಂದಿತ್ತ ಓಡಾಡುತ್ತಿದ್ದ. ಶಾಲೆಗೆ ಹೋಗಬೇಕಾಗಿದ್ದ ಆ ಬಾಲಕ ಅಂದು ತನ್ನ ಹಳ್ಳಿಯಿಂದ ರೈಲಿನಲ್ಲಿ ಅಮೃತಸರದಲ್ಲಿ ಬಂದಿಳಿದಿದ್ದ. ಶಾಲೆಯಲ್ಲಾಗಲಿ ಮನೆಯಲ್ಲಾಗಲಿ ಯಾರಿಗೂ ಈ ವಿಷಯ ತಿಳಿಯದು. ಒಂದೆರಡು ಪುಸ್ತಕಗಳು ಹಾಗೂ ಒಂದು ಪುಟ್ಟ ಡಬ್ಬಿ ಇದ್ದ ಕೈಚೀಲ ಅವನ ಬಳಿಯೇ ಇತ್ತು. ತುಸುಹೊತ್ತಿನ ನಂತರ ಹುಡುಗ ಜಲಿಯನ್‌ವಾಲಾಬಾಗ್‌ನಲ್ಲಿ ಒಂದೆಡೆ ಅಂತರ್ಮುಖಿಯಾಗಿ ಬಹುಕಾಲ ನಿಂತ. ನಂತರ ಅಲ್ಲಿದ್ದ ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡ. ಇನ್ನಷ್ಟನ್ನು ತನ್ನಲ್ಲಿದ್ದ ಡಬ್ಬಿಯಲ್ಲಿಯೆ ಶೇಖರಿಸಿಕೊಂಡು ಹಿಂದಿರುಗಿದ. ರಾತ್ರಿ ಮನೆಗೆ ಹಿಂದಿರುಗಿದಾಗ ಅವನ ಸಹೋದರಿ ಎಂದಿನಂತೆ ಅವನನ್ನು ಊಟಕ್ಕೆಬ್ಬಿಸಿದರೆ, ಒಲ್ಲೆನೆಂದು ಮುಖ ತಿರುಗಿಸಿದ. ಅವನಿಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ಕೂಡ ನಿರಾಕರಿಸಿ ಅವಳನ್ನು ಮನೆಯ ಹಿಂಭಾಗಕ್ಕೆ ಕೊಂಡೊಯ್ದು ತನ್ನ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿದ. ರಕ್ತದಲ್ಲಿ ಕಲಸಿದಂತಿದ್ದ ಆ ಮಣ್ಣು ಎಲ್ಲಿಯದೆಂದು ತಿಳಿದಾಗ ಅವನ ಉಪವಾಸಕ್ಕೆ ಕಾರಣ ಅವಳಿಗೆ ಸ್ವಲ್ಪಮಟ್ಟಿಗೆ ಗೊತ್ತಾಯಿತು. 'ತ್ಯಾಗ'ದ ಪ್ರತೀಕ ಆ ಮಣ್ಣು ಎಂದವಳಿಗೆ ತಿಳಿಯಹೇಳಿದ.

ಇದಾದ ಕೆಲದಿನಗಳ ನಂತರ ಬಾಲಕ ಒಂದು ಪ್ರಾತಃಕಾಲ ರಾವಿನದಿಯ ಬಳಿಹೋದ. ನದಿಯ ನೀರಿಗೆ ತನ್ನ ಶರೀರದ ರಕ್ತವನ್ನು ಸೇರಿಸಿ ನೀರಿನ ಬಣ್ಣ ಬದಲಾಯಿಸಿಯೇನು ಎಂದುಕೊಂಡ. ರಾವಿನದಿಯ ಕೆಂಪು ನೀರು ಪಂಜಾಬಿನ ಬದಲಾಯಿಸಿಯೇನು ಎಂದುಕೊಂಡ. ರಾವಿನದಿಯು ಕೆಂಪು ನೀರು ಪಂಜಾಬಿನ ಬೇರೆ ನಾಲ್ಕು ನದಿಗಳ ನೀರನ್ನು ಕೂಡಿಕೊಂಡು ಸ್ವಾತಂತ್ರ್ಯದ ಪ್ರವಾಹವೊಂದನ್ನು ಉಂಟುಮಾಡೀತೆಂಬ ಭಾವನೆ ಅವನಲ್ಲಿ ಉತ್ಕಟವಾಗಿ ತುಂಬಿಬಂತು. ಜಲಿಯನ್‌ವಾಲಾಬಾಗಿನಿಂದ ಅವನು ತಂದಿದ್ದ ಕೆಂಪು ಮಣ್ಣಿಗೆ ಪ್ರತ್ಯುತ್ತರವಾಗಿ ಈ ಕೆಂಪು ಪ್ರವಾಹವನ್ನು ಪದೇ ಪದೇ ಊಹಿಸಿಕೊಂಡ. ಶಾಲೆಯಲ್ಲಿ ತಾನು ಕಲಿಯುತ್ತಿದ್ದ ವಿಷಯಗಳಿಗಿಂತ ಈ ಕೆಂಪು ಮಣ್ಣು ಅವನಿಗೆ ಹೆಚ್ಚು ಸ್ಫೂರ್ತಿ ನೀಡುತ್ತಿದ್ದಂತೆ ತೋರಿತು.

ಏಪ್ರಿಲ್ 13, 1919ರಂದು ಜಲಿಯನ್‌ವಾಲಾಬಾಗ್ ಹತ್ಯಾಕಾಂಡದಲ್ಲಿ ಪ್ರಾಣ ಕಳೆದುಕೊಂಡಿದ್ದವರಿಗೆ ನಮನ ಸಲ್ಲಿಸಲು ಹೋಗಿದ್ದ ಆ ಬಾಲಕ ಭಗತ್ ಸಿಂಗ್. ಇಂದು ಜಲಿಯನ್‌ವಾಲಾಬಾಗ್‌ನಲ್ಲಿರುವ ಒಕ್ಕಣೆ ಹೀಗಿದೆ: "ಏಪ್ರಿಲ್ 13, 1919ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು ಎರಡು ಸಾವಿರ ಮುಗ್ಧ ಹಿಂದು, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ." ಭಗತ್ ಸಿಂಗ್ ಅಲ್ಲಿಗೆ ಹೋಗಿ ಅಂತರ್ಮುಖಿಯಾಗಿ ನಿಂತಾಗ ಈ ಭಾವನೆ ಅವನ ಮನಸ್ಸಿನಲ್ಲಿ ಹಾಯುತ್ತಿದ್ದಿರಬೇಕು.

ಅಂದು ವೈಶಾಖಿ ದಿನವಾಗಿತ್ತು. ಜಲಿಯನ್‌ವಾಲಾಬಾಗ್‌ನಲ್ಲಿ ನೆರೆದಿದ್ದ ಜನಕ್ಕೆ ತಾವೊಂದು ರಾಜಕೀಯ ಆಂದೋಲನದಲ್ಲಿ ಭಾಗಿಗಳಾಗಬೇಕೆಂಬ ಆಕಾಂಕ್ಷೆಯಾಗಲಿ ಹುತಾತ್ಮರಾಗಬೇಕೆಂಬ ಅಭಿಲಾಷೆಯಾಗಲಿ ಇದ್ದಿರಲಾರದು. ಜನರಲ್ ಡಯರ್ ಸಹ ತನ್ನ ಪೈಶಾಚಿಕ ಘಾತುಕತೆಯನ್ನುಳಿದು ಬೇರಾವ ಭಾವನೆಯಿಂದಲೂ ಪ್ರೇರಿತನಾಗಿದ್ದನೆಂದು ನಂಬುವುದು ಕಷ್ಟ. ಕ್ರೂರ ಮಾರ್ಗದಿಂದ ಭಾರತೀಯರನ್ನು ಬಗ್ಗು ಬಡಿಯಬಹುದೆಂದು ಅವನ ಎಣಿಕೆ. ಬ್ರಿಟಿಷ್ ಸಾಮ್ರಾಜ್ಯದ ಅನವರತ ಏಳಿಗೆಗೆ ಇದಕ್ಕಿಂತಲೂ ಸುಲಭವಾದ ಮಾರ್ಗವನ್ನು ಚಿಂತಿಸಲು 'ಅವನು ಅಶಕ್ತನಾಗಿದ್ದ. ಒಟ್ಟು 1,650 ಸುತ್ತುಗಳಷ್ಟು ಗುಂಡಿನ ಮಳೆ ಕರೆಯಿಸಿದ್ದ ಅವನು ಹೆಮ್ಮೆಯಿಂದ ಹೇಳಿಕೊಂಡದ್ದು ಇದು: "ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ:. ಅಂದು ಪ್ರಾಣ ಕಳೆದುಕೊಂಡವರ ಸಂಖ್ಯೆ ಇದನ್ನು ಖಚಿತಗೊಳಿಸಿತ್ತು! "ಗಾಯಗೊಂಡಿದ್ದವರ ಚಿಕಿತ್ಸೆಗೆ ಏನು ಏರ್ಪಾಟು ಮಾಡಲಾಗಿತ್ತು?" ಈ ಪ್ರಶ್ನೆಯ ಡಯರ್‌ಗೆ ಹಾಕಿದವನು ನ್ಯಾಯಮೂರ್ತಿ ರ್‍ಯಾಂಕಿನ್. ಪಂಜಾಬಿನ ಪ್ರಕ್ಷೋಭೆಯ ವಿಚಾರಣಾ ಸಮಿತಿಯ'ಯ ಅಧ್ಯಕ್ಷ ಆತ. 'ವೀರ' ಡಯರ್ ನೀಡಿದ ಉತ್ತರ ಉತ್ತರ : "ಏರ್ಪಾಟು? ಅದಕ್ಕೂ ನನಗೂ ಏನು ಸಂಬಂಧ? ಅದು ನನ್ನ ಕೆಲಸವಲ್ಲ. ಆಸ್ಪತ್ರೆಗಳನ್ನೇನೂ ಮುಚ್ಚಿರಲಿಲ್ಲ; ಗಾಯಗೊಂಡಿದ್ದವರು ಬೇಕಾಗಿದ್ದರೆ ಅಲ್ಲಿಗೆ ಹೋಗಬಹುದಾಗಿತ್ತು."

ಭಾರತದಲ್ಲೇ ಹುಟ್ಟಿದ್ದ ರೆಜಿನಾಲ್ಡ್ ಇ. ಎಚ್. ಡಯರ್ ಬ್ರಿಟಿಷ್ ಸೈನ್ಯಾಧಿಕಾರಿ; ಬ್ರಿಗೇಡಿಯರ್ ಜನರಲ್. ಅವನ ದಿನಚರಿಯಲ್ಲಿ ಹೀಗೆ ಬರೆದುಕೊಂಡಿದ್ದನಂತೆ: "ಇದರಿಂದ ಅಮೂಲ್ಯವಾದ ಒಂದು ಕೆಲಸವನ್ನು ಮಾಡುತ್ತಿದ್ದೇನೆಂಬ ಭಾವನೆ ನನಗಿತ್ತು." ಹಂಟರ್ ಆಯೋಗದ ವರದಿಯ

ಪ್ರಕಾರ 1650 ಸುತ್ತು ಗುಂಡಿನ ದಾಳಿಯಿಂದ 1516 ಜನ ಮರಣವನ್ನಪ್ಪಿದರು ಇಲ್ಲವೇ ತೀವ್ರವಾಗಿ ಗಾಯಗೊಂಡಿದ್ದರು. ಭಾರತದ ರಕ್ತವನ್ನು ಹೀರುತ್ತಿದ್ದ ಬ್ರಿಟಿಷ್ ವಸಾಹತುಶಾಹಿ ಸಾಮ್ರಾಜ್ಯಕ್ಕೆ ಡಯರ್ ಇದಕ್ಕಿಂತಲೂ ಹೆಚ್ಚು ಅಮೂಲ್ಯವಾದ ಬೇರೇನನ್ನು ಕೊಡಲು ಸಾಧ್ಯವಿತ್ತು?

ಹಂಟರ್ ವರದಿ ಮುಂದುವರಿದು ಹೀಗೆನ್ನುತ್ತದೆ : "ಜಲಿಯನ್ ವಾಲಾಬಾಗ್ ಒಂದು ಚಚ್ಚೌಕವಾದ ಪ್ರದೇಶ; ಯಾರೂ ಉಪಯೋಗಿಸದ ಈ ಪ್ರದೇಶದಲ್ಲಿ ಒಂದಷ್ಟು ಮನೆಕಟ್ಟುವ ಸಾಮಗ್ರಿ ಮತ್ತು ಕೆಲಸಕ್ಕೆ ಬಾರದ ಕಲ್ಲು–ಮಣ್ಣನ್ನು ಒಟ್ಟಲಾಗಿದೆ. ಸುತ್ತಲೂ ಗೋಡೆಗಳು, ಮನೆಗಳು ಅದರೊಳಕ್ಕೆ ಹೋಗಲು ಇರುವ ಹಾದಿಗಳು ವಿರಳ; ಅವೂ ಚೆನ್ನಾಗಿಲ್ಲ. ಜನರಲ್ ಡಯರ್ ಪ್ರವೇಶಿಸಿದ ಭಾಗದಲ್ಲಿ ಹಾದಿಯ ಇಬ್ಬದಿಗಳಲ್ಲೂ ಸ್ವಲ್ಪ ಎತ್ತರದ ಜಾಗಗಳಿವೆ. ಅದರಿಂದ ನೇರವಾಗಿ ಎದುರಿಗೆ, ಪ್ರದೇಶದ ಇನ್ನೊಂದು ಭಾಗದಲ್ಲಿ, ಜನಸಂದಣಿ ಇತ್ತು. ಅಲ್ಲೊಬ್ಬ ವೇದಿಕೆಯ ಮೇಲೆ ನಿಂತು ಭಾಷಣ ಮಾಡುತ್ತಿದ್ದ. ಡಯರ್ ತನ್ನ ಸೈನ್ಯದ ತುಕಡಿಯನ್ನು ಅಲ್ಲಿಂದ ನೂರೈವತ್ತು ಗಜದ ದೂರದಲ್ಲಿ ನಿಲ್ಲಿಸಿದ್ದ."

ವೈಶಾಖಿಯ ಸಂಭ್ರಮವೆಂದರೆ ಮುಖ್ಯವಾಗಿ ಕಣಜ ತುಂಬಿಸುವ ಆನಂದ ಹಾಗೂ ಸಡಗರಗಳ ಸಂಭ್ರಮ. ಗಾಂಧೀಜಿ, ಡಾ॥ ಸಯಿಫುದ್ದೀನ್ ಕಿಚ್‌ಲ್ಯೂ ಮತ್ತು ಡಾ॥ ಸತ್ಯಪಾಲ್ ಅವರನ್ನು ಬ್ರಿಟಿಷ್ ಸರ್ಕಾರ ಬಂಧನಕ್ಕೊಳ ಪಡಿಸಿದ್ದುದರಿಂದ ಬೇರೆ ವರ್ಷಗಳ ವೈಶಾಖಿಗೂ 1919ರ ವೈಶಾಖಿಗೂ ವ್ಯತ್ಯಾಸವಿತ್ತು. ಜನರಲ್ಲಿ ಆಕ್ರೋಶ ತುಂಬಿದ್ದುದಷ್ಟೇ ಅಲ್ಲ, ಪ್ರತೀಕಾರಕ್ಕಾಗಿಯೂ ಅವರು ಹಾತೊರೆಯುತ್ತಿದ್ದರು. ಎಂದಿನಂತೆ ನಗರದ ಹೊರವಲಯದಲ್ಲಿ ಸೇರದೆ ಜನ ಈ ಬಾರಿ ಜಲಿಯನ್‌ವಾಲಾಬಾಗ್‌ನಲ್ಲಿ ನೆರೆದಿದ್ದರು. ರೌಲಟ್ ವಿಧಾಯಕಗಳನ್ನು ಅಮಾನತ್ತಿನಲ್ಲಿಡಬೇಕೆಂಬ ಅವರ ಕೂಗು ಪಂಜಾಬಿನಿಂದ ಭಾರತದ ಇತರ ಎಲ್ಲ ಭಾಗಗಳಿಗೂ ಕೇಳುವಂತೆ ಜಲಿಯನ್‌ವಾಲಾಬಾಗ್‌ನಿಂದ ಮೊಳಗಿಸುವುದು ಆ ವರ್ಷದ ಸಂಭ್ರಮದ ವಿಶಿಷ್ಟ ಉದ್ದೇಶವಾಗಿತ್ತು. ಸೇರಿದ್ದವರ ಸಂಖ್ಯೆ ಸುಮಾರು ಇಪ್ಪತ್ತು ಸಾವಿರವೆಂದು ಅಂದಾಜು ಮಾಡಲಾಗಿದೆ. ಹಂಸರಾಜ್ ಅಂದಿನ ಭಾಷಣಕಾರರು. ಡಯರನ ಆಗಮನವಾಗುವ ವೇಳೆಗೆ ಭಾಷಣ ಪ್ರಾರಂಭವಾಗಿ ಬಹಳ ಕಾಲವೇನೂ ಆಗಿರಲಿಲ್ಲ. ಬಿಳಿಯ ಸಿಪಾಯಿಗಳೂ ಇದ್ದ ತುಕಡಿ ನೇರವಾಗಿ ಗುಂಡು ಹಾರಿಸಲು ಉಪಕ್ರಮಿಸಿತು. ಸಂಜೆ ಐದೂವರೆ ಗಂಟೆಗೆ ಪ್ರಾರಂಭವಾದ ಈ ಮಾರಣಹೋಮಕ್ಕೆ ತಗುಲಿದ್ದ

ಒಟ್ಟು ವೇಳೆ ಕೇವಲ ಹತ್ತು ನಿಮಿಷ ಮಾತ್ರ. ಎಲ್ಲೆಲ್ಲೂ ರಕ್ತದ ಹೊಳೆ, ಅಸುನೀಗಿದ ಜನ, ಪ್ರಾಣ ಉಳಿಸಿಕೊಳ್ಳಲು ಕೆಲವರು ಒಂದು ಪಕ್ಕದಲ್ಲಿದ್ದ ಬಾವಿಯೊಳಕ್ಕೆ ನೆಗೆದು ಅಲ್ಲಿ ಪ್ರಾಣ ಕಳೆದುಕೊಂಡರು. ರತನ್‌ದೇವಿ ಎಂಬೊಬ್ಬಾಕೆ ತನ್ನ ಗಂಡನ ದೇಹವನ್ನು ಪತ್ತೆಮಾಡಿ ಬ್ರಿಟಿಷರ ಕಣ್ಣುತಪ್ಪಿಸಿ ಪಕ್ಕದಲ್ಲಿನ ಪೊದೆಗಳ ಹಿಂದಕ್ಕೆ ಕೊಂಡೊಯ್ದು ಇಡೀ ರಾತ್ರಿ ಅಲ್ಲೇ ಉಳಿದುಕೊಂಡಿದ್ದಳಂತೆ. "ದುಗುಡದಿಂದ ತುಂಬಿದ್ದ ನನ್ನ ಮನಸ್ಸಿನ ಎಲ್ಲ ಭಾವನೆಗಳನ್ನು ವಿವರಿಸಲು ನನಗೆ ಸಾಧ್ಯವಿಲ್ಲ. ರಾಶಿರಾಶಿ ಹೆಣಗಳು. ಕೆಲವರು ಅಂಗಾತ ಬಿದ್ದಿದ್ದಾರೆ, ಇನ್ನು ಹಲವರು ಸೊಟ್ಟಸೊಟ್ಟಗೆ. ಅವರಲ್ಲಿ ಚಿಕ್ಕ ಮಕ್ಕಳೇ ಹೆಚ್ಚು. ಆ ಪೊದೆಗಳ ಪ್ರದೇಶದಲ್ಲಿ ಇಡೀ ರಾತ್ರಿ ನಾನೊಬ್ಬಳೇ ಇದ್ದೆ. ನಾಯಿಗಳ ಬೊಗಳುವಿಕೆ, ಕತ್ತೆಗಳ ಚೀರಾಟ ಬಿಟ್ಟರೆ ಬೇರೆ ಸದ್ದೇ ಇಲ್ಲ. ಈ ರಾಶಿ ರಾಶಿ ಹೆಣಗಳ ಮಧ್ಯೆ ನಾನೊಬ್ಬಳೇ ಜೀವಂತವಾಗಿದ್ದು ರಾತ್ರಿ ಹೇಗೆ ಕಳೆದೆನೋ ನನಗೆ ತಿಳಿಯದು." – ಇದು ರತನ್‌ದೇವಿಯ ಹೇಳಿಕೆ. ಹಂಟರ್ ಆಯೋಗದ ಮುಂದೆ ಈ ನರಮೇಧದ ಅಧ್ವರ್ಯುವಾಗಿದ್ದ ಜನರಲ್ ಡಯರ್ ತನ್ನ ಪ್ರತಾಪವನ್ನು ಕೊಚ್ಚಿಕೊಂಡದ್ದು ಹೀಗೆ : "ನನ್ನ ಮೋಟಾರ್ ವಾಹನದಲ್ಲಿ ಬರುವಾಗಲೇ ನಾನು ತೀರ್ಮಾನ ಮಾಡಿಯಾಗಿತ್ತು. ಆ ಜನರೆಲ್ಲಾ ಅವಸಾನಕ್ಕೀಡುಮಾಡಬೇಕೆಂಬುದೇ ನನ್ನ ಸಂಕಲ್ಪವಾಗಿತ್ತು.... ಅದು ನನ್ನ ಕ್ರೂರ ಜವಾಬ್ದಾರಿಯಾಗಿತ್ತು. ನನ್ನನ್ನು ಅಪಹಾಸ್ಯಕ್ಕೆ ಗುರಿಮಾಡದಿರುವಂತೆ ಅವರಿಗೆ ಒಂದು ಪಾಠ ಕಲಿಸಬೇಕಾದದ್ದು ನನ್ನ ಕರ್ತವ್ಯವಾಗಿತ್ತು. ಸಾಕಷ್ಟು ಗುಂಡುಗಳಿದ್ದಿದ್ದರೆ ಇನ್ನೂ ಹೆಚ್ಚು ಕಾಲ ಗುಂಡುಗಳ ಸುರಿಮಳೆ ಮಾಡಿಸುತ್ತಿದ್ದೆ. ಜಲಿಯನ್‌ವಾಲಾಬಾಗ್‌ನೊಳಕ್ಕೆ ವಾಹನ ತೆಗೆದುಕೊಂಡು ಹೋಗಲು ಬೇಕಾಗುವಷ್ಟು ದಾರಿ ಇರಲಿಲ್ಲವಾದ್ದರಿಂದ ವಾಹನವನ್ನು ಹೊರಗೇ ಬಿಡಬೇಕಾಯಿತು. ಇಲ್ಲದಿದ್ದಲ್ಲಿ ಗುಂಡು ಹಾರಿಸುವ ಕಾರ್ಯ ಇನ್ನೂ ಪ್ರಬಲವಾಗಿ ಮುಂದುವರಿಯುತ್ತಿತ್ತು. ಹಾಗೆ ಸಾಧ್ಯವಾಗಿದ್ದಿದ್ದಲ್ಲಿ ನಾನಾಗಲಿ ಬೇರೆಯವರಾಗಲಿ ಮತ್ತೆ ಗುಂಡು ಹಾರಿಸುವ ಪ್ರಮೇಯವೇ ಉಂಟಾಗುತ್ತಿರಲಿಲ್ಲ." ಈ ಅಮಾನುಷ ಕೌರ್ಯವನ್ನು ಸಮರ್ಥಿಸಿ ಪಂಜಾಬಿನ ಆಗಿನ ಲೆಫ್ಟಿನಂಟ್ ಗವರ್ನರ್‌ರಾಗಿರದ್ದ ಮೈಕೇಲ್ ಓ ಡ್ವಯರ್ ಜನರಲ್ ಡಯರ್‌ನಿಗೆ ತಂತಿ ಸಂದೇಶವೊಂದನ್ನು ಕಳಿಸಿದ್ದ. ನಂತರ ಡಯರ್ ಇಂಗ್ಲೆಂಡಿಗೆ ಮರಳಿದಾಗ ಅಲ್ಲಿನ 'ನಾಗರಿಕರು' ಈತನನ್ನು ಅಭಿನಂದಿಸಲು ಸಭೆಯೊಂದನ್ನೇರ್ಪಡಿಸಿದ್ದರು ಹಾಗೂ ಒಂದಷ್ಟು ಹಣವನ್ನು ಶೇಖರಿಸಿ ಕಾಣಿಕೆಯನ್ನಾಗಿ ನೀಡಿದ್ದರು! ಕೆಲವರು ಮಾತ್ರ ಅವನಿಗೆ ಸಾಮಾಜಿಕ

ಬಹಿಷ್ಕಾರ ಹಾಕಿದ್ದರೆಂದು ಆಗಾಗ್ಗೆ ಹೇಳುವುದುಂಟು. ಆದರೆ ಇದೊಂದು ಐತಿಹ್ಯವೂ ಆಗಿರಬಹುದು.

ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಸುದ್ದಿ ತಿಳಿದಾಗ ಸುಭಾಷ್‌ಚಂದ್ರ ಬೋಸ್ ಅವರು ಕಲ್ಕತ್ತೆಯ ಒಂದು ಸಭೆಯಲ್ಲಿ ಬಂದೂಕು ಹಿಡಿದು, ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಅದರ ಪ್ರಯೋಗವೇ ಸೂಕ್ತವಾದೀತೆಂದು ಗುಡುಗಿದರು. ಪ್ರತೀಕಾರದ ಜ್ವಾಲೆ ಪಂಜಾಬಿನಲ್ಲಿ ಮಾತ್ರವಲ್ಲದೆ ಇಡೀ ಭಾರತದಲ್ಲಿ ಹೊತ್ತಿಕೊಂಡು ಉರಿಯಲಾರಂಭಿಸಿತು. ಹತ್ಯಾಕಾಂಡದ ತರುವಾಯದಲ್ಲಿ ಪಂಜಾಬನ್ನು ಸೇನೆಯ ಆಡಳಿತಕ್ಕೆ ಒಪ್ಪಿಸಲಾಗಿತ್ತು. ಅಂದಿನ ವಿದ್ಯಮಾನಗಳನ್ನು ಸಂಕ್ಷಿಪ್ತವಾಗಿ ತಿಳಿಯಲು ಕೆ. ಸಿ. ಘೋಷ್ ಅವರ ವಿವರಣೆಯನ್ನು ಅವಲೋಕಿಸಬಹುದು: "ನೂರಾರು ವಿದ್ಯಾರ್ಥಿಗಳನ್ನು ಪ್ರತಿದಿನ ಹಾಜರಾತಿ ಒಪ್ಪಿಸಲು ಹದಿನಾರು ಮೈಲಿಗಳ ದೂರದಲ್ಲಿದ್ದ ಜಾಗವೊಂದಕ್ಕೆ ಹೋಗಿಬರುವಂತೆ ಆಜ್ಞಾಪಿಸಲಾಗಿತ್ತು. ನೂರಾರುಮಂದಿ ವಿದ್ಯಾರ್ಥಿಗಳನ್ನೂ ಅಧ್ಯಾಪಕರನ್ನೂ ಬಂಧನಕ್ಕೊಳಪಡಿಸಲಾಗಿದ್ದಿತು. ಬ್ರಿಟಿಷ್ ಧ್ವಜಕ್ಕೆ ಗೌರವ ಸೂಚಿಸಲು ಪ್ರತಿನಿತ್ಯ ನೂರಾರು ಶಾಲಾ ಬಾಲಕರನ್ನು ಮೆರವಣಿಗೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಸೈನ್ಯದ ಆಡಳಿತದ ಬಗ್ಗೆ ಅಲ್ಲಲ್ಲಿ ಅಂಟಿಸಲಾಗಿದ್ದ ಭಿತ್ತಿಪತ್ರಗಳನ್ನು ಹರಿದುಹಾಕದಂತೆ ನೋಡಿಕೊಳ್ಳಲು ಆಯಾ ಪ್ರದೇಶಗಳಲ್ಲಿ ಕೆಲವು ಆಸ್ತಿವಂತರನ್ನು ಹೊಣೆಗಾರರನ್ನಾಗಿ ಮಾಡಲಾಗಿತ್ತು. ಅಲ್ಲಲ್ಲಿ ಛಡಿಯೇಟುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ನೀಡುವ ಏರ್ಪಾಟು ಉಂಟಾಗಿತ್ತು. ಜನರಿಗೆ ತಮ್ಮ ದೈನ್ಯದ ಅರಿವುಂಟಾಗಲೆಂಬ ದೃಷ್ಟಿಯಿಂದ ಹಲವು ಕೇಂದ್ರ ಸ್ಥಳಗಳಲ್ಲಿ ದೊಡ್ಡ ಸ್ಥಳಗಳಲ್ಲಿ ದೊಡ್ಡ ದೊಡ್ಡ ಪಂಜರಗಳನ್ನಿಟ್ಟು ಅವುಗಳಲ್ಲಿ ಬಂಧಿತರನೇಕರನ್ನು ತುಂಬಿ ಪ್ರದರ್ಶಿಸಿದ್ದರು."

ಇಂತಹ ಘಟನೆಗಳು ಭಾರತದಾದ್ಯಂತ ತೀವ್ರವಾದ ಅಸಮಾಧಾನಕ್ಕೆ ಎಡೆಮಾಡಿಕೊಟ್ಟವು. ರವೀಂದ್ರನಾಥ ಟಾಗೋರ್ ಅವರು ತಮಗೆ ನೀಡಲಾಗಿದ್ದ ಬಿರುದನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂದಿರುಗಿಸಿದ್ದೂ ಈ ಸಂದರ್ಭದಲ್ಲೇ. 1919ರ ಏಪ್ರಿಲ್ 14 ರಂದು ಗುಜ್ರನ್‌ವಾಲಾ ಎಂಬಲ್ಲಿ ರೈಲ್ವೆ ನಿಲ್ದಾಣಕ್ಕೆ ಬೆಂಕಿ ಇಡಲಾಯಿತು. ಅಲ್ಲಿಯ ಕೇಂದ್ರ ಅಂಚೆ ಕಚೇರಿಗೂ ಬೆಂಕಿ ಬಿತ್ತು; ಮತ್ತು ಅಲ್ಲಿಯ ಮುನ್ಸೀಫ್ ಕೋರ್ಟನ್ನು ಧ್ವಂಸಮಾಡಲಾಯಿತು. ಇಂತಹ ಘಟನೆಗಳನ್ನು ಹತ್ತಿಕ್ಕಲು ಬ್ರಿಟಿಷ್ ಸರ್ಕಾರ ಹೊಸ ನಿಯಮಗಳನ್ನು

ಘೋಷಿಸಿತು. ಯಾರ ಮೇಲಾದರೂ ಗುಮಾನಿ ಬಂದಿಂತೆಂದರೆ ಅಂತಹವನು ಸಾರ್ವಜನಿಕ ಸ್ಥಳದಲ್ಲಿ ತೆವಳಿಕೊಂಡು ಹೋಗುವ ಬವಣೆ ಅನುಭವಿಸ ಬೇಕಾಗುತ್ತಿತ್ತು. ಸೈನ್ಯಾಧಿಕಾರದ ಭಿತ್ತಿ ಪತ್ರವನ್ನು ಕಾಲೇಜೊಂದರಲ್ಲಿ ಯಾರೋ ಹರಿದುಹಾಕಿದ್ದರೆಂಬ ಆಪಾದನೆಯ ಮೇಲೆ ಕಾಲೇಜಿನ ಪ್ರಾಚಾರ್ಯರನ್ನೂ ಸೇರಿದಂತೆ ಎಲ್ಲ ಅಧ್ಯಾಪಕರನ್ನೂ ಬಂಧನಕ್ಕೊಳಪಡಿಸಲಾಯಿತು. ಹಿಂದೂ–ಮುಸಲ್ಮಾನರ ಐಕ್ಯತೆಯನ್ನು ವಿಕಟವಾಗಿ ನಿಂದಿಸುವ ಸಲುವಾಗಿ ಎರಡೂ ಧರ್ಮಗಳ ಜನರನ್ನು ಒಟ್ಟೊಟ್ಟಾಗಿ ಬಂಧಿಸಿ ಪಂಜರಗಳಲ್ಲಿ ಕೂಡಿಹಾಕಿ ಪ್ರದರ್ಶನಕ್ಕಿಟ್ಟರು. ಮೈಕೇಲ್ ಓ ಡ್ವಯರ್‌ನನ್ನು ಇಪ್ಪತ್ತೊಂದು ವರ್ಷಗಳ ನಂತರ ಇಂಗ್ಲೆಂಡಿನ ಕಾಕ್ಸ್‌ಟರ್ ಎಂಬಲ್ಲಿ ಸಾರ್ವಜನಿಕ ಸಭೆಯೊಂದು ಜರುಗಲಿದ್ದಾಗ ಗುಂಡಿಕ್ಕಿ ಕೊಂದ ಉಧಂ ಸಿಂಗ್‌ಗೆ ಆಗಿನ್ನೂ 16 ವರ್ಷ. ಆತ ಇಂತಹ ಅಪಮಾನಕರ ಪ್ರಸಂಗಗಳನ್ನು ಕಂಡು ರೋಸಿಹೋಗಿದ್ದನೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ.

ರೌಲಟ್ ಶಾಸನದ ವಿರುದ್ಧದ ಆಂದೋಲನ ಮುಂದುವರಿದಿತ್ತು. ಅಕ್ಟೋಬರ್ 1919ರ ವರೆಗೆ ಗಾಂಧೀಜಿಯವರಿಗೆ ಪಂಜಾಬನ್ನು ಪ್ರವೇಶಿಸಲು ಅನುಮತಿ ದೊರಕಿರಲಿಲ್ಲ. ಅದೇ ವರ್ಷದ ಡಿಸೆಂಬರ್‌ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಅಮೃತಸರದಲ್ಲಿ ನಡೆಯುವುದಿತ್ತು. ಜಲಿಯನ್‌ವಾಲಾಬಾಗ್‌ನ ನರಮೇಧವು ಸಂಪೂರ್ಣವಾಗಿ ಪೂರ್ವನಿಯೋಜಿತವಾಗಿದ್ದಿತೆಂದು ಅಧಿವೇಶನ ಘೋಷಿಸಿತು. ಆದರೆ ಹಂಟರ್ ಆಯೋಗದ ವರದಿ ಪ್ರಕಟವಾದದ್ದು 1920ರ ಮೇ 28 ರಂದು. ಜನರಲ್ ಡಯರ್ ಮತ್ತು ಮೈಕೆಲ್ ಓ ಡ್ವಯರ್ ಇಬ್ಬರನ್ನೂ ವರದಿಯು ಆಪಾದನೆಗಳಿಂದ ಮುಕ್ತಗೊಳಿಸಿತ್ತು. ತನ್ನ ಅಧಿಕಾರವನ್ನು ಕಳೆದುಕೊಳ್ಳಬೇಕಾಗಿ ಬಂದದ್ದನ್ನು ಬಿಟ್ಟರೆ ಜನರಲ್ ಡಯರ್‌ನ ಮೃಗೀಯ ವರ್ತನೆಗೆ ಬೇರಾವ ಶಿಕ್ಷೆಯನ್ನೂ ವಿಧಿಸಲಾಗಿರಲಿಲ್ಲ. ಬ್ರಿಟಿಷ್ ಸರ್ಕಾರವು ತಮಗೆ ನೀಡಿದ್ದ ಬಿರುದು ಬಾವಲಿಗಳನ್ನು ಗಾಂಧೀಜಿಯವರು ಅಂದಿನ ವೈಸ್‌ರಾಯ್‌ಗೆ ಹಿಂದಿರುಗಿಸುತ್ತಾ “ಪೈಶಾಚಿಕ ಯಂತ್ರದಂತಿರುವ ಈ ಬ್ರಿಟಿಷ್ ಸರ್ಕಾರವನ್ನು ನುಚ್ಚುನೂರು ಮಾಡಬೇಕು” ಎಂದು ಘೋಷಿಸಿದರು.

ಜಲಿಯನ್‌ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್‌ಗೆ ಈ ಎಲ್ಲ ಬೆಳವಣಿಗೆಗಳೂ ಸಂಪೂರ್ಣವಾಗಿ ಅರ್ಥವಾಗಿರಲಿಕ್ಕಿಲ್ಲ. ಅಂತೆಯೇ ಡಾ॥ ಸಯಿಪುದ್ದೀನ್

ಕಿಚ್‌ಲ್ಯೂ ಅವರ ಅಧ್ಯಕ್ಷತೆಯಲ್ಲಿ 1929ರ ಜೂನ್ 30ರಂದು ಜಲಿಯನ್‌ವಾಲಾಬಾಗಿನಲ್ಲಿ **'ಭಗತ್ ಸಿಂಗ್ ದಿನಾಚರಣೆ'** ನಡೆಯಲಿದ್ದಿತೆಂದು ಸಹ ಯುವಕ ಭಗತ್ ಸಿಂಗ್‌ಗೆ ತಿಳಿದಿರಲಿಕ್ಕಿಲ್ಲ. ಏಕೆಂದರೆ, ಆ ಕಾಲಕ್ಕಾಗಲೇ ಭಗತ್ ಸಿಂಗ್ ಕಾರಾಗೃಹವಾಸಿಯಾಗಿ ಪ್ರತಿಭಟನೆಗಳನ್ನು ರೂಪಿಸಿಕೊಳ್ಳುತ್ತಾ ದೀರ್ಘಕಾಲದ ಉಪವಾಸ ಸತ್ಯಾಗ್ರಹದಲ್ಲಿ ತೊಡಗಿದ್ದರು.

■

# ಶಾಂತಿ

## ಆಶಯ :

### 1. ಮಹಾತ್ಮ

– ಗಂಗಾಧರ ಚಿತ್ತಾಲ

ನಿನ್ನ ನೆತ್ತರು ನೆಲಕೆ ಚೆಲ್ಲಿದಂದು
ಮಣ್ಣು ನಡುಗಿತು, ಹಗಲ – ಹೂ ಬಾಡಿತು,
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ,
ಉತ್ತಮರ ಬಲಿ ಇಲ್ಲಿ – ಬಾನಾಡಿತು.

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು
ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು,
ಛಲವನರಿಯುವ ಬದುಕು – ಇಷ್ಟೆ ಸಾಕು.

ಅಂತೆ ತವಕದಿ ಬಂದೆ, ಮನದ ಮಮತೆಯ ತಂದೆ
ಹಗೆಯ ಕಾಳೋರಗವ ತವಿಪೆನೆಂದೆ
ಇತ್ತ ಹಾಲಾಹಲವು, ಅತ್ತ ಕೋಲಾಹಲವು
ಅಮೃತಹಾಸವ ಬೀರಿ ನಡೆದೆ ಮುಂದೆ

ಬತ್ತಿದೆದೆಗಳಲು ತಿಳಿವಿನ ತೇವು ಒಡೆದಿತ್ತು
ಶಾಂತಿ ಸಮರಸಕೆ ಇದು ಮೊದಲನಿಸಿತು.
ಕಲ್ಲೆದೆಯ ಸೀಮೆಯಲು ಹೂ–ಕುಸುರು–ಆಹಾ ಇದು
ಬರುವ ಭಾಗ್ಯದ ಯುಗದ ತೊದಲೆನಿಸಿತು.

ನರನ ಕಾಡಿಗೆ ನಡತೆ ಇನ್ನೂ ಮುಗಿದಿರಲಿಲ್ಲ
ನಿನ್ನ ಬೇಟೆಗೆ ತಾಯಿ–ಮಣ್ ನಡುಗಿತು.
ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಇಂಥ ಬಲಿ ಇನ್ನೇಸೊ! ಬಾನ್ ಗುಡುಗಿತು.

■

# 2. ನಲ್ಲಿಯಲ್ಲಿ ನೀರು ಬಂದಿತು ! ! !

**– ಸದಾಶಿವ**

‘ಆರು ಮನೆಗಳ ಸಾಲು ವಠಾರದಲ್ಲಿ ಸೀತಮ್ಮ ಮತ್ತು ರಂಗಮ್ಮನ ಮನೆಗಳು ಒಂದು ಗೋಡೆಯ ಆಚೆಯೀಚೆಯವು. ಸೀತಮ್ಮನ ಮನೆಯಲ್ಲಿ ಕುಳಿತ ರಂಗಮ್ಮ ಹರಟೆ ಕೊಚ್ಚುತ್ತಿದ್ದಳು.

ಗುಂಪು ಮೋಡ ಪಡುವಣದಲ್ಲಿ ಕರಿ ರೂಪ ತಳೆದು ತಾಸೆರಡು ಇವರ ಮಾತಿನ ಹೊರಳಾಟದಲ್ಲಿ ಕಂಡೂ ಕಾಣದಂತೆ ಮಾಯವಾಗಿತ್ತು.

ಸೀತಮ್ಮನ ಬಸಿರೊಳಗೆ ಜೀವವೊಂದು ಹೊರಳಾಡಿತು.... ಇಂದೋ... ನಾಳೆಯೋ.... ಎನ್ನುವಂತಿತ್ತು.

‘ಬಹಳ ದಿಗಿಲಾಗುತ್ತೆರೀ....ರಂಗಮ್ಮ...’

ಹತ್ತು ಹೆತ್ತ ರಂಗಮ್ಮನ ಮುಂದೆ ನಾಚಿಕೆಯಿಂದ ಅಂದಳು– ಏನಾಗಬಹುದು ‘ಅಂದು’ ಎಂಬುದನ್ನು ಕೇಳಿ ತಿಳಿದಿದ್ದವಳು ಅನುಭವಿಸದೇ ಇದ್ದುದರಿಂದ ಈವರೆಗೂ...

‘ಹಾಗೆಲ್ಲ ದಿಗಿಲುಪಟ್ಕೊಬಾರ್ದು ತಾಯಿ....’

ಹೆತ್ತ ಹತ್ತರಲ್ಲಿ ಏಳನ್ನೇ ಉಳಿಸಿಕೊಂಡಿದ್ದ ಆಕೆ ಧೈರ್ಯಕೊಡುವ ಮಾತನ್ನು ಎಸೆದಳು.... ಕತ್ತಲ ಕೋಣೆಯಲ್ಲಿ ರೆಪ್ಪೆಯಾಡಿಸದ ಜೀವ ಹೊರಳಿದುದರಿಂದ ತಾಯಿ ದೇಹಕ್ಕೆ ನೋವು ಆಗಿತ್ತು... ಕೆಂಪೇರಿದ ಮುಖವನ್ನು ತಗ್ಗಿಸಿದಳು... ನಾಚಿಕೆ ಬಂದು ತುಟಿ ಎರಡಾಗಲು ಬಿಡಲಿಲ್ಲ.

ಒಣಗಿದ ಬರಿದಾದ ಅನ್ನದ ಪಾತ್ರೆಯನ್ನು ‘ನೆನೆಸಲು’ ಅಡಿಗೆ ಮನೆಗೆ ಮೆಲ್ಲನೆದ್ದು ಹೋದಳು ಸೀತಮ್ಮ, ನೀರಿಗೆಂದು ನಲ್ಲಿ ತಿರುಗಿಸಿದಾಗ ಅಚ್ಚರಿಯಾಯಿತು.... ದಾರವಾಗಿ ಸುರಿಯುತ್ತಿದ್ದ ನೀರನ್ನು ಕಂಡು... ಘಳಿಗೆಯೆರಡಲ್ಲಿ ಸುರಿಯುವ ದಾರವೂ ನಿಲ್ಲಬಹುದೆನ್ನಿಸಿತು.

‘ನೀರು ನಿಲ್ಲೋ ಹಾಗಿದೆ ರಂಗಮ್ಮ....’

ಕೆಟ್ಟವಾರ್ತೆಯೊಂದು ಕಿವಿಗೆ ಬಿದ್ದಂತೆ ಕುಳಿತ ತಳಕ್ಕೆ ಬಿಸಿಯೇರಿದಂತೆ ಎದ್ದೋಡಿದಳು ಮನೆಗೆ ರಂಗಮ್ಮ, ಕೊಡವನ್ನು ನಲ್ಲಿಯ ಬುಡದಲ್ಲಿಟ್ಟು

ನಲ್ಲಿ ತಿರುಗಿಸಿದಳು. ಧೈರ್ಯವಾಯಿತು... ಹುರಿಯಷ್ಟು ಗಾತ್ರ ಸುರಿಯುತ್ತಿದ್ದ ನೀರನ್ನು ನೋಡಿ.

ಹಾಗಲ್ಲಿ ನಲ್ಲಿ ತಿರುಗಿಸಿದುದರಿಂದ ಸೀತಮ್ಮನ ಮನೆಯಲ್ಲಿ ನಲ್ಲಿ ಕೋಪಿಸಿಕೊಂಡಿತು–ಕೂಗಿತು.

'ಕೊರ್.....'

ಸೀತಮ್ಮ ನೋಡಿದಳು. ಹಿಂದೆ ಬದುಕಿದ್ದ ಅಜ್ಜಿ ಮರಣಶಯ್ಯೆಯಲ್ಲಿ ಉಬ್ಬಸದಿಂದ ನರಳಿದಾಗ ಅವಳ ಮೂಗಿನಿಂದ ಇಂಥದೇ ಒಡಕು ಸ್ವರ ಹೊರಟಿತ್ತು.

ದಾರವಾಗಿದ್ದದ್ದು ಹನಿಯಾಯಿತು... ಕೊನೆಗದೂ ನಿಂತಿತು.

ಆಚೆ ಮನೆಯಲ್ಲಿ ನಲ್ಲಿ ತಿರುಗಿಸಿದಾಗ ಇವಳ ಮನೆಯಲ್ಲಿ ನಲ್ಲಿ 'ಗೊರ್' ಎಂದು ಗುರುಗಟ್ಟಿ ಮುಷ್ಕರ ಹೂಡುವುದು... ಪಾಪವೆನಿಸಿ ಆಕೆ ಬಿಟ್ಟರೆ ಇಲ್ಲಿ ನೀರು ಬರಬಹುದು... ಅಷ್ಟೆ.

ನೀರು ತುಂಬಿಡಲು ಮರೆತುದು ಆಕಸ್ಮಿಕವಾಗಿ... ಹಾಗೆ ಮರೆತುದೇ ಅಚಾತುರ್ಯವಾಯಿತು... ನೀರು ನುಂಗಿ ನಿಂತ ನಲ್ಲಿಯನ್ನೇ ದೀಪದ ಬೆಳಕಿನಲ್ಲಿ ನೋಡುತ್ತಿದ್ದ ಸೀತಮ್ಮನಿಗೆ ರಂಗಮ್ಮನ ಮನೆಯಲ್ಲಿ ಬುಳುಬುಳೆಂದು ನೀರು ಕೊಡದಲ್ಲಿ ತುಂಬಿಕೊಳ್ಳುತ್ತಿದ್ದುದು ಕೇಳಿಸದೇ ಇರಲಿಲ್ಲ. ಬಿಂದಿಗೆ ಮುಕ್ಕಾಲು ತುಂಬಿ ಕತ್ತಿನವರೆಗೂ ನೀರು ಏರುತ್ತಿದ್ದ ಸದ್ದು ಆಲಿಸಿದಾಗ, ಇನ್ನು ಆಕೆ ನಲ್ಲಿ ನಿಲ್ಲಿಸಬಹುದೆಂದು ಯೋಚಿಸದಳು.... ಆದರೆ ಬಿಂದಿಗೆ ತುಂಬಿದಾಗ ಅದರ ನೀರನ್ನು ಹಂಡೆಗೆ ಸುರಿದು ಪುನಃ ನಲ್ಲಿಯ ಬುಡಕ್ಕೆ ಬಿಂದಿಗೆಯಿಟ್ಟ ಸದ್ದು ಕೇಳಿದಾಗ ನಿಲ್ಲಲಾರದೆ ಅಲ್ಲೆ ಕುಳಿತಳು... ನೋವು ಈಗೊಮ್ಮೆ ಆಗೊಮ್ಮೆ ಕಾಣಿಸಿಕೊಳ್ಳುತ್ತಿತ್ತು.

'ಕುಡಿಯೋಕ್ಕೆ ತೊಟ್ಟು ನೀರಿಲ್ಲ... ಬಿಡ್ತೀರಾ ರಂಗಮ್ಮಾ...'

ರಂಗಮ್ಮನಿಗೆ ಕೇಳುವಂತೆ ಏರುದನಿಯಲ್ಲಿ ಕೂಗಿದಳು.

ರಂಗಮ್ಮ ಎಣಿಸುತ್ತಿದ್ದಳು–ಹಂಡೆ ತುಂಬಲು ನಾಲ್ಕು ಬಿಂದಿಗೆ ಕೊಳೆತಪ್ಪಲೆಗೆ ಎರಡು.. ದೊಡ್ಡ ಬಾನಿಗೆ...

'ನಾಳೆ ನೀರು ಹಾಕ್ತಿಯಾ?'

ಅಚ್ಚರಿಯಿಂದ ಗಂಡನ ಕಡೆ ನೋಡಿದ್ದಳು....

'ಯಾವ ದೇವ್ರು ನಿಮಗಿಂಥಾ ಬುದ್ಧಿ ಕೊಟ್ನೋ ಸದ್ಯ ಹಾಕ್ಕೊಳ್ಳಿ....'

ಪತಿರಾಯ ಬೆಳಿಗ್ಗೆಯಷ್ಟೇ ನುಡಿದಿದ್ದರು... ಹಂಡೆಗೆ ನೀರು ತುಂಬುವಾಗ ಆ ನೆನಪು ಆಯಿತು... ಸದ್ಯ ಹಂಡೆ ಕೊಳತಪ್ಪಲೆ ತುಂಬುವಷ್ಟಾದರೂ ನೀರು ಬಂದರೆ ಬೆಳಿಗ್ಗೆ 'ಅವರಿಗೆ' ನೀರು ಹಾಕಬಹುದು... ಹಾಳು ಮುಂಡೇದು.. ಇಂದೇ ನಿಲ್ಲಬೇಕೆ?

'ರ್ರೀ ರಂಗಮ್ಮ.... ಸ್ವಲ್ಪ ನೀರು ಬಿಡ್ರಿ... ಕುಡಿಯೋಕ್ಕೆ ತೊಟ್ಟು ಇಲ್ಲ...'

ತಾರಸ್ಥಾಯಿಯಲ್ಲಿ ಸೀತಮ್ಮ ಕಿರುಚಿದುದು ನೀರು ಸುರಿಯುವ ಸದ್ದಿಗೂ ಮಿಗಿಲಾಗಿ ಕೇಳಿತು....

।ಅಬ್ಬಾ!... ಎಷ್ಟು ಜೋರಾಗಿ ಹೊಡ್ಕೊತಾಳೆ ಬಾಯಿಬಡ್ಕಿ...।

'ಬಿಡ್ತೀನಿ ತಾಳ್ರಿ... ಈಕೆಯೂ ಅಷ್ಟೇ ಜೋರಾಗಿ ಉತ್ತರಿಸಿದಳು....

'ಕೊನೆಗೂ ಕೇಳಿಸ್ತಲ್ಲ... ಅಬ್ಬಾ... ಸ್ವಲ್ಪ ನೀರು ಬಿಡೀಂದ್ರೆ ಹೇಗೆ ಆಡ್ತಾರಪ್ಪ... ಏನು ತಲೆಮೇಲೆ ಹಾಕ್ಕೊಂಡು ಹೋಗ್ತಿದ್ರೆ... ನಲ್ಲಿಯ ದಂಡೆಯ ಮೇಲೆ ಕುಳಿತ ಸೀತಮ್ಮ ಯೋಚಿಸಿದಳು – ನಾಲ್ಕು ನಾಲ್ಕು ಬಾರಿ ಕೂಗಿದ ನಂತರ ಆಕೆ ಉತ್ತರಿಸಿದುದಕ್ಕಾಗಿ.

ಮತ್ತೂ ಮೂರು ನಿಮಿಷವಾಯಿತು–

ಸಣ್ಣಗೆ ನೋವು ಕಾಣಿಸಿಕೊಂಡಿತು... ಮುಖದಲ್ಲಿ ಕಂಡೂ ಕಾಣದಂತೆ ಬೆವರು ಮೂಡಿತು... ಜೊತೆ ಜೊತೆಯಲ್ಲೇ ಭಯವೂ ಆಯಿತು... ಪತಿರಾಯ ಊರಲಿಲ್ಲ... ಬೆಳಗ್ಗೆಯಷ್ಟೇ ದೊಡ್ಡ ಸಾಹೇಬರೊಡನೆ ದೂರದೂರಿಗೆ ಇನ್‌ಸ್ಪೆಕ್ಷನ್ನಿಗೆಂದು ಹೋಗಿದ್ದರು. ಅವರಿರುವಾಗಲೇ ನೋವು ಕಾಣಿಸಿಕೊಂಡಿದ್ದರೆ ಪ್ರಯಾಣವನ್ನು ತಪ್ಪಿಸಬಹುದಿತ್ತು.. 'ರೆ' ಪ್ರಪಂಚದಲ್ಲಿ ತೇಲಾಡುವಷ್ಟರಲ್ಲೆ ನೆನಪಾಗಿ ಕೂಗಿದಳು....

'ರ್ರೀ... ಸ್ವಲ್ಪ ನೀರು ಬಿಡ್ರಿ....'

ಆಕೆಯ ಹೆಸರನ್ನೂ ಕೂಗಿ ಕರೆಯುವ ಸಂಯಮವನ್ನು ಕಳೆದುಕೊಂಡಳು.

'ಸರಿ... ಇದ್ದದ್ದೇ... ಇನ್ನು ಮೂರು ಕೊಡ ಆದಮೇಲೆ ಮಹಾರಾಯ್ತಿ ಹಾಗೆ ಎಲ್ಲಾ ನೀರನ್ನೂ ಅವಳೇ ಕುಡೀಲಿ... ಯಾರು ಬೇಡವೆಂದರು?... ನಾನೇನು ತಲೇ ಮೇಲೆ ಹೊತ್ಕೊಂಡು ಹೋಗಬೇಕೆ?....

ಗೊಣಗುಟ್ಟಿದ ರಂಗಮ್ಮ ಮತ್ತೆ ಕೂಗಿ ಹೇಳಿದಳು–

'ಆಯ್ತೂರೀ... ಬಿಡ್ತೀನಿ.....' – 'ಅಯ್ಯೋ, ಯಾಕೆ ಹೊಡ್ಕೊಳ್ತಿ– ಎನ್ನುವ ಧಾಟಿಯಲ್ಲೇ.

ಹಾಗೆ ಕೂಗು ಹಾಕುವಾಗಲೇ ಕೂಸಿನ ಕಿರಿಬೆರಳ ಗಾತ್ರದಲ್ಲಿ ಸುರಿಯುತ್ತಿದ್ದ ನೀರಿಗೂ ಕ್ಷಯವಾಗಿ ಕೊನೆಗೆ ನಿಂತಿತು.

ನಲ್ಲಿ ಕೂಗಿತು.... 'ಗೊರ್...'

ಥತ್!.. ಇನ್ನೆರಡು ಕೊಡವಾಗಿದ್ರೆ ಸಾಕಾಗಿತ್ತು... ಹಾಳು ಮುಂಡೇದು'– ನಲ್ಲಿ ಕೆಲಸಗಾರರಿಗೂ ಕೂಡಿಸಿಯೇ ಹಿಡಿ ಶಪಿಸಿದಳು ರಂಗಮ್ಮ.

ನೀರು ನಿಂತಿದ್ದುದು ಕೇಳಿಸಿತು – ಸೀತಮ್ಮನಿಗೆ 'ಕೊನೆಗೂ ನಿಲ್ಲಿಸಿದರಲ್ಲ' ನಲ್ಲಿಯನ್ನು ತಿರುಗಿಸಿದಳು.

ನೀರು ನಿಂತಿತ್ತು!

ಸೀತಮ್ಮನಿಗೆ ವ್ಯಥೆಯಾಯಿತು... ದುಃಖವಾಯಿತು...

'ಛೆ!... ಆಕೆಗೆ ಅಷ್ಟೂ ಕರುಣೆ ಬರಲಿಲ್ಲ!... ಕುಡಿಯೋದಕ್ಕೆ ನೀರಿಲ್ಲಾಂದ್ರೂ ನಿಲ್ಲಿಸಲಿಲ್ಲವಲ್ಲ!... ಒಂದೆರಡು ಚೊಂಬಿನಷ್ಟಾದರೂ ಆಗಿದ್ದರೆ ಸಾಕಿತ್ತು...' ಯೋಚಿಸುತ್ತಲೇ ಮತ್ತೆ ಕೂಗಿದಳು..

'ರ್ರೀ... ಸ್ವಲ್ಪ ಬಿಡ್ರಿ...' ಸಹನೆ ಮೀರಿ, ದುಃಖ ಎದೆಯಲ್ಲಿ ಒತ್ತಿ ಬಂದಿದ್ದರೂ, ಕೋಪ ಮೈಯುದ್ದಕ್ಕೂ ಮಿಂಚಿದ್ದರೂ ತೋರಗೊಡದೆ ಕೂಗಿದಳು.

'ನಿಲ್ಲಿಸಿದೀನ್ರೀ...'

ದಿಗಿಲಾಯಿತು ಸೀತಮ್ಮನಿಗೆ... ಯೋಚಿಸಿದಂತೆಯೇ ನೀರು ಪೂರ್ತಿ ನಿಂತು ಹೋಗಿತ್ತು.

'ಅಬ್ಬಾ ಕೊನೆಗೆ ಹಠ ಸಾಧಿಸಿದರಲ್ಲ ಆಕೆ!' – ಎಂದೆನಿಸಿತು. ಕಣ್ಣಿನಲ್ಲಿ ಹನಿಯೊಂದು ತುಳುಕಿತು. 'ಹತ್ತು ಹೆತ್ತವರಾದರೇನು? – ಕರುಳಿಗೆ ಮಾತ್ರ ಮರುಕವಿಲ್ಲ' – ಎಂದುಕೊಂಡಳು.

ನೋವು ಮತ್ತೆ ಕಾಣಿಸಿಕೊಂಡಿತು. ಹಸಿವು ಪೈಪೋಟಿ ಹೂಡಿತ್ತು. ಮೆಲ್ಲನೆ ಹೊರಳಿ ತಟ್ಟೆಯನ್ನಿಟ್ಟುಕೊಂಡಳು. ಚೊಂಬೊಂದರಲ್ಲಿ ಹಗಲಿನಲ್ಲೇ ನೀರಿಟ್ಟಿದ್ದುದು ನೆನಪಿಗೆ ಬಂದಿತು. ಆಸೆಗಣ್ಣಿನಿಂದ ಮೂಲೆಯಲ್ಲಿದ್ದ ಚೊಂಬನ್ನು ನೋಡಿದಳು. ತುಂಬ ಅಲ್ಲದಿದ್ದರೂ ಮುಕ್ಕಾಲು ಚೊಂಬು ನೀರಿತ್ತು. ತುಸು ಧೈರ್ಯವಾಯಿತು.

ಅನ್ನ ಬಡಿಸಿಕೊಂಡು ಅರ್ಧ ಊಟವಾಗುವಾಗಲೇ ಮತ್ತೊಮ್ಮೆ ನೋವು ಹೆಚ್ಚಿತು...

'ಹಾಗೇನಾದ್ರೂ ನೋವು ಕಾಣಿಸಿಕೊಂಡ್ರೆ ಸ್ವಲ್ಪ ಜೀರಿಗೆ ಕಷಾಯ ಮಾಡಿ ಕುಡೀರಿ... ಹಾಗೂ ನಿಲ್ದೆ ಇದ್ರೆ ಬಂದು ಕರೀರಿ... ಬರ್ತೀನಿ....'

ಮೊನ್ನೆಯಷ್ಟೆ ಸೂಲಗಿತ್ತಿ ಸುಂದರಮ್ಮ ಮನೆಗೆ ಬಂದು ತನ್ನನ್ನು ಪರೀಕ್ಷಿಸಿ ಹೋಗುವಾಗ ನುಡಿದಿದ್ದರು.

'ಹೆದರಿಕೆ ಏನೂ ಇಲ್ಲವಷ್ಟೆ?'

'ಛೆ!... ನಾನಿಲ್ವೆ'

ಪತಿ ಕೇಳಿದುದಕ್ಕೆ ಸುಂದರಮ್ಮ ಹಾಗೆ ಧೈರ್ಯವಿತ್ತಿದ್ದರು.... ಪಾಪ... ಎಷ್ಟು ಒಳ್ಳೆಯವರಾಕೆ?... ತನಗೆ ತಾಯಿಯಲ್ಲ.. ತವರಿಗೆ ಕರೆಸಿಕೊಳ್ಳುವಷ್ಟು ಇರುವ ತಂದೆಗೆ ಚೈತನ್ಯವಿಲ್ಲವೆಂದಾಕೆಗೆ ತಿಳಿದಾಗ, ಹೆತ್ತಮ್ಮನಿಗೂ ಮಿಗಿಲಾಗಿ ಮರುಗಿದ್ದರು.

ನೆನಪು ಒಡೆಯಿತು....

ಕಷಾಯ ಮಾಡಿಕೊಳ್ಳಬೇಕು... ಕೈಯಲ್ಲಾಗದು ಎಂದು ಮನವರಿಕೆಯಾದಾಗ ರಂಗಮ್ಮನಿಗೆ ಕರೆಯುವುದೇ ಎಂದು ಒಮ್ಮೆ

ಯೋಚಿಸಿದಳು. ಮರುಕ್ಷಣವೇ ಸ್ವಾಭಿಮಾನ ಕೆರಳಿತು. 'ಉಹುಂ... ಬೇಡ.. ಚೊಂಬು ನೀರಿಗಾಗಿ ಎಷ್ಟೆಲ್ಲ ಆಡಿದರಾಕೆ? ನಾನಾಗಿ ಏಕೆ ಕೂಗಲಿ?...?.. ಎನಿಸಿತು.

ನೋವಿನಿಂದಾಗಿ ಅನ್ನ ಗಂಟಲಿಗಿಳಿಯಲಿಲ್ಲ... ಎದ್ದು ಕೈತೊಳೆದು, ಕಷ್ಟದಿಂದಲೇ ಅಗ್ಗಿಷ್ಟಿಕೆ ಹಚ್ಚಿ ಎರಡು ಲೋಟ ನೀರನ್ನು ಕುದಿಸಿ ಕಷಾಯ ಮಾಡಿದಳು...

ನಲ್ಲಿಯಲ್ಲಿ ನೀರು ನಿಲ್ಲುವಾಗಲೇ ರಂಗಮ್ಮನಿಗೆ ಕೋಪ ಉಕ್ಕೇರಿತು... ಇನ್ನೊಂದೆರಡು ಬಿಂದಿಗೆ ಎನ್ನುವಷ್ಟರಲ್ಲೆ ನೀರು ನಿಂತಿತ್ತು. ಅಷ್ಟರಲ್ಲೇ ಸೀತಮ್ಮನ ಕೂಗು ಕೇಳಿಸಿತು. ಮೈ ಉರಿಯುರಿಯಾಯಿತು. ನೀರು ನಿಂತಿತೆಂದು ತಾನು ಯೋಚಿಸುವಾಗಲೇ ಅವಳು ಹಾಗೆ 'ನೀರು ನಿಲ್ಲಿಸಿ'– ಎಂದು ಕೂಗಿ ಕೆಣಕುವುದೇ?... 'ಹೊಟ್ಟುರಿದು ಕೊಂಡ್ಲು... ಈಗ ಸಾಯ್ಲಿ ನೋಡೋಣ...' ಎನ್ನಿಸಿತು. ತುಂಬಿಟ್ಟ ಹಂಡೆ, ಪಾತ್ರೆಗಳಿಗೆ ಮುಚ್ಚಿ, ಗುಟುಕು ನೀರು ಕುಡಿದು, ದೀಪವಾರಿಸಿ ಹಜಾರಕ್ಕೆ ಬಂದಳು... ಆಗಲೇ ಪತಿರಾಯರು ಗೊರಕೆ ಹೊಡೆಯುತ್ತಿದ್ದರು... ಮಕ್ಕಳು ಕನಸು ಕಾಣುತ್ತಿದ್ದರು... ಗೋಡೆಗೆ ಸಿಕ್ಕಿಸಿದ್ದ ಬುಡ್ಡಿಯನ್ನು ತೆಗೆದುಕೊಂಡು ರೂಮಿಗೆ ಹೋಗಿ ಗಂಟೆ ನೋಡಿದಳು. ಹನ್ನೊಂದುವರೆಯಾಗಿತ್ತು. ಪುನಃ ಹಜಾರಕ್ಕೆ ಬಂದು ಹಾಸಿಗೆಯನ್ನು ಬಿಡಿಸಿದಳು. ಹಾಸಿಗೆ ಬಿಡಿಸುವಾಗ ಅನ್ನಿಸಿತು... 'ಆಕೆ ನೀರಿಲ್ಲವೆಂದು ಹೊಡ್ಕೊಂಡ್ಳು... ಕೇಳಿದರೆ ಚೊಂಬು ನೀರು ಕೊಡುತ್ತಿರಲಿಲ್ಲವೆ?.. ಏನಿಲ್ಲದಿದ್ದರೂ ಜಂಭವೊಂದಿಷ್ಟಾದರೂ ಇದೆ... ಹುಂ... ಯಾರು ಕೇಳ್ತಾರೆ ಇದನ್ನೆಲ್ಲ... ಸೆಟೆದು ಕೂತರೆ ಕೂರಲಿ.. ಯಾರಿಗೆ ನಷ್ಟ? ನೀರು ನಿಂತದ್ದು ನನ್ನ ತಪ್ಪೆ?..'

ಹಾಸಿಗೆ ಹೊರಳಿಸಿ ಧೂಳು ಕೊಡಹಿದಳು. ತಟಕ್ಕನೆ ಹಾಲು ಮುಚ್ಚಿಡದೇ ಇದ್ದುದು ನೆನಪಾಗಿ ಅಡಿಗೆ ಮನೆಗೋಡಿದಳು–

ಮಾಡಿದ ಕಷಾಯವನ್ನು ಅರಿಸಿ, ಕುಡಿದು ಹೊರಬಂದು ಹಾಸಿಗೆ ಬಿಚ್ಚಿ ರಗ್ಗನ್ನು ಝಾಡಿಸಿದಳು ಸೀತಮ್ಮ–

'ನಾವಿನ್ನು ನಾಲ್ಕು ದಿನ ಊರಲ್ಲಿರೋಲ್ಲ ತಾಯಿ–ದಯವಿಟ್ಟು ಆಕೇನ ನೋಡ್ಕೊಳ್ಳೋ ಭಾರ ತಮ್ದು–ರಾತ್ರಿ ನೀವು ನಮ್ಮನೇಲಿ ಸ್ವಲ್ಪ ಮಲ್ಕೊಂಡಿದ್ರೆ'

'ಅಯ್ಯೋ ಅದ್ಕೇನು–ನಾನೇನು ಮನುಷ್ಯಳಲ್ಲವೇ... ಖಂಡಿತಾ ಮಲ್ಕೋತೀನಿ ನೀವು ನಿರಾತಂಕವಾಗಿ ನಿಮ್ಮ ಕೆಲಸಕ್ಕೆ ಹೋಗಿ–ನನ್ನ ಮಕ್ಳಲ್ಲಿ ಒಬ್ಳು ನಿಮ್ಮ ಸೀತಮ್ಮ–'

ದೂರದೂರಿಗೆ ಪತಿರಾಯ ಹೋಗುವ ಮುನ್ನ ಆಕೆಯನ್ನು ಕರೆದು ನುಡಿದು, ತನಗೆ ಸಂತೈಸಿ, ಧೈರ್ಯ ತುಂಬಿ, ಕಾಲು ಕಿತ್ತುದುದು–ಎಲ್ಲ ನೆನಪಿಗೆ ಬಂದಿತು... ಪಾಪ–ಅವರು ದೂರದಲ್ಲಿದ್ದರೂ ಮನಸ್ಸು ಮನೆಯನ್ನೇ ಕುರಿತು ಚಿಂತಿಸುತ್ತಿರಬಹುದೆಂದು ಎದೆ ನುಡಿಯಿತು... ಅಂತೆಯೇ ಕತ್ತಲಲ್ಲಿ ತಾನೊಬ್ಬಳೇ ಇರಬೇಕಾದ ಪರಿಸ್ಥಿತಿಯನ್ನು ಯೋಚಿಸಿದಾಗ ತುಡಿಯುವ ಎದೆಯಲ್ಲಿ ಭಯ ತುಂಬಿತು. ಆಕೆಯನ್ನು ಮಲಗಲು ಕರೆಯುವುದೇ ಎಂದು ಯೋಚಿಸುವಾಗ, ಮತ್ತೊಂದು ಮನಸ್ಸು 'ಉಹುಂ... ನೋಡೋಣ.. ಆಕೆಯೇ ಬರಬಹುದು.. ಬೆಳಿಗ್ಗೆಯಷ್ಟೇ ತನ್ನ ಗಂಡನೊಂದಿಗೆ ಹಾಗೆ ಧೈರ್ಯಕೊಟ್ಟಿರಲಿಲ್ಲವೆ?.. ಅದು ನೆನಪಿರದೇ ಇರುತ್ತದೆಯೆ...' ಎಂದಿತು.

ಭಯದ ನಡುವೆಯೇ ಬಂದ ಬಿಗುಮಾನ ಭೂತವಾಯಿತು.

ಬೇಕೆಂದೇ ರಗ್ಗನ್ನು ಮತ್ತೊಮ್ಮೆ ಬಿರುಸಾಗಿ ಝಾಡಿಸಿದಳು ಆಕೆಗೆ ಕೇಳಿಸಲೆಂದು. ಸದ್ದು ಕೇಳಿ ಬರಬಹುದು....

ಹಾಗೊಂದು ವೇಳೆ ಬಾರದಿದ್ದರೆ?

ಆಗ ತಾನೇ ಕೂಗುವುದೆ? ಅಥವಾ....

ಹಾಸಿಗೆಯ ಮೇಲುಹೊದಿಕೆಯನ್ನು ಝಾಡಿಸುವವರೆಗೂ ಪ್ರಶ್ನೆಗೆ ಉತ್ತರಿಸಲೆತ್ನಿಸಿದಳು... ಅಸ್ಪಷ್ಟ ಉತ್ತರ ಭಯಾನಕವಾಗಿತ್ತು. ಗೌರವಕ್ಕೆ ಕಮ್ಮಿಯೆನಿಸಿಕೊಂಡು ಕರೆಯುವುದೂ ಆಗದ ಮಾತು. ಹಾಗೆಂದು ಒಬ್ಬಳೇ ಮಲಗುವುದೂ ಅಸಾಧ್ಯದ ವಿಷಯ–ಹೊಟ್ಟೆಯೊಳಗಿನ ನೋವು ಒಮ್ಮೊಮ್ಮೆ ಅವಳ ನಿಶ್ಚಯವನ್ನು ಸಡಿಲಿಸುತ್ತಿತ್ತು–ಧೈರ್ಯವನ್ನು ಕರಗಿಸುತ್ತಿತ್ತು... 'ಥೂ, ಹಾಳು ನೋವು....' ಎಂದಂದುಕೊಳ್ಳುವಾಗಲೇ ನೋವು ಕಳೆದು ಮುಂದೆ ತಾನು ಕಾಣಬಹುದಾದ ದೃಶ್ಯವನ್ನು ಕಲ್ಪಿಸಿಕೊಂಡಾಗ ಮೈಯುದ್ದಕ್ಕೂ ನಾಚಿಕೆ ಹರಿದಂತಾಯಿತು... ದೀಪ ಚಿಕ್ಕದುಮಾಡಿ ಹಾಸಿಗೆಯ ಮೇಲೆ ಮೈಯಾನಿಸಿ, ಮಂದ ಬೆಳಕಿನಲ್ಲಿ ಬೆಣ್ಣೆ ಮಗುವಿನ 'ಆ' ಫೋಟೋವನ್ನು ನೋಡುತ್ತ ಆಕೆ ಬರುವುದನ್ನೇ ಕಾಯುತ್ತಿದ್ದಳು....

ರಗ್ಗು ಝಾಡಿಸಿದುದು ರಂಗಮ್ಮನಿಗೂ ಕೇಳಿಸಿತು.

'ಏನು ಕೇಳಿಸ್ತ...'

'ಏನು...'

'ರಾತ್ರಿ ಅವಳ ಮನೇಲೆ ಮಲ್ಕೋತೀನಿ'

'ಆತ ಊರಲ್ಲಿರಲ್ಲ–ಹೇಳಿ ಹೋದ್ರು... ಪಾಪ ದಿನ ತುಂಬ್ದೋಳು–'

'ಆಗ್ಲಿ–ಅದಕ್ಕೇನು–'

ಹಗಲಿನೂಟವಾಗುವಾಗಲೇ ಪತಿಯಿಂದ ಅನುಮತಿ ಪಡೆದಿದ್ದಳು. ಸೀತಮ್ಮ ರಗ್ಗು ಝಾಡಿಸಿದಾಗ ಅದು ನೆನಪಿಗೆ ಬಂದೇ ಬಂದಿತು. ಆದರೂ ಸುಮ್ಮನಿದ್ದಳು–ಅವಳಿಗೆ ಕೋಪ ಬಂದರೆ ತಾನೇನು ಮಾಡಲು ಸಾಧ್ಯ! – ಇಷ್ಟು ಸಣ್ಣ ವಿಷಯಕ್ಕೆಲ್ಲ ಕೋಪಿಸಿಕೊಂಡಳೆಂದರೆ ಯಾರಾದರೂ ನಕ್ಕಾರು– ಸೆಟೆದು ಕೂತರೆ ಕೂರಲಿ–ತನಗೇನು ಅಗತ್ಯ, ಹೋಗಿ ದಮ್ಮಯ್ಯ ಗುಡ್ಡೆ ಹಾಕಿ ಮಾತನಾಡಲು? – ಚೋಟುದ್ದದವಳಿಗೆ ಹತ್ತು ಹೆತ್ತ ತಾನು ಹೆದರುವುದು?–

ದೀಪ ದೊಡ್ಡದದಾಗಿಯೇ ಉರಿಯುತ್ತಿತ್ತು. ಬೆಳಗಿನಿಂದ ಕೆಲಸಮಾಡಿ ಸೋತ ಮೈ ಹಾಸಿಗೆಗಾಗಿ ಹಾತೊರೆಯುತ್ತಿತ್ತು. ಹಾಸಿಗೆಯ ಮೇಲೆ ಕುಳಿತವಳು ಹಾಗೆಯೇ ಮಲಗಿದ ಮಗುವನ್ನು ಸ್ವಲ್ಪ ಸರಿಸಿ, ದೀಪವನ್ನು ಕೈದೂರವಾಗಿಟ್ಟು ಮೈಚಾಚಿದಳು–ಹಾಯೆನಿಸಿತು–

–ದೀಪ ದೊಡ್ಡದಾಗಿಯೇ ಉರಿಯುತ್ತಿತ್ತು–

ನಿದ್ದೆಯಿಂದ ಕಣ್ಣು ಊದಿದ್ದರೂ ಪ್ರಯತ್ನಿಸಿ ದೊಡ್ಡದು ಮಾಡಿಕೊಂಡೇ ಕಾಯುತ್ತಿದ್ದಳು, ಆಕೆಯೇ ಕೂಗಲೆಂದು–

'ಅಯ್ಯೋ–ಅಯ್ಯೋ–ನಾ ಸತ್ತೆ–

............

ಮಗುವನ್ನಾಡಿಸುತ್ತಿದ್ದ ರಂಗಮ್ಮ ಕಿವಿಯುದ್ದ ಮಾಡಿದಳು–

'ಅಯ್ಯೋ–ಅಯ್ಯೋ...'...

ಸೂರು ನಡುಗಿತ್ತು–ನೆಲ ಆಡಿತು–

ರೂಮಿನ ತುಂಬ ಹೊಗೆ ಹೆಪ್ಪುಗಟ್ಟಿ ಉಸಿರು ನಿಂತಿತು–

ಸುತ್ತ ಮಕ್ಕಳು ನಗುತ್ತಿದ್ದರು–

ಹ ಹ್ಹ ಹ್ ಹ್ಹ ಹ್ಹ – ಹ್ಹ ಹ್ಹ ಹ್ಹ ಹ್ಹ –

ಘಳಿಗೆಯೂ ಕಳೆಯಲಿಲ್ಲ – ಸೀತಮ್ಮನ ಪತಿ ಎದುರು ನಿಂತು ಬೆಂಕಿ ಕಣ್ಣು ಬೀರಿದ –

ನರ್ಸ್ ಕಿಡಿಕಿಡಿಯಾಗಿ ನೋಡಿದಳು....

ತನ್ನ ಪತಿ ನುಂಗುವಂತೆ ದೃಷ್ಟಿಸಿದ –

'ಏನ್ರಿ – ಕತ್ತೆ ಹಾಗಿದೀರಿ – ಸ್ವಲ್ಪ ನೋಡ್ಕೊಳ್ಳೋಕೆ ಆಗಲಿಲ್ಲವೆ?...'

'ಅಷ್ಟ್ಯಾಕ್ರಿ ಹೆತ್ರಿ... ಸುಡ್ರಿ!'

'ಅಯ್ಯೋ ರಾಕ್ಷಸೀ!....'

ರಂಗಮ್ಮ ಕೈಬೀಸಿ ಎಲ್ಲರನ್ನೂ ಕರೆಯಲೆತ್ನಿಸಿದಳು.. ಕೈ ಮೇಲೆ ಏಳಲೊಲ್ಲದು–

ಸೀತಮ್ಮ ಬಿದ್ದಿದ್ದಾಳೆ....

ರಕ್ತದ ಕೆರೆಯಲ್ಲಿ ಈಜುತ್ತಿದ್ದಾಳೆ ರಂಗಮ್ಮ –

ಹುಟ್ಟಿದ ಮಗು ಕಣ್ಣು ಬಿಟ್ಟು ಬೊಬ್ಬೆಯಿಕ್ಕುತ್ತಿದೆ....

ಸೂರು ನಡುಗುತ್ತಿದೆ....

ಧಕ್ಕನೆ ಎಚ್ಚರವಾಯಿತು ರಂಗಮ್ಮನಿಗೆ – ಕಣ್ಣು ಬಿಟ್ಟು ಕೂಡಲೇ ದೊಡ್ಡದಾಗಿ ಉರಿಯುತ್ತಿದ್ದ ದೀಪದ ಬೆಳಕು ಭಯಂಕರವಾಗಿ ಕಂಡಿತು... ಪಕ್ಕದಲ್ಲಿದ್ದ ಮಗು ಕಿರುಚುತ್ತಿತ್ತು... ಅಳುವ ಮಗುವನ್ನು ತೊಡೆಯ ಮೇಲೇರಿಸಿಕೊಂಡು ತಟ್ಟಿದಳು... ನಿದ್ದೆಯ ಪರೆ ಜಾರಿ ತನ್ನ ಅರಿವು ಹತ್ತಿದಾಗ

ಧೈರ್ಯವಾಯಿತು... ಮಗುವು ಮಲಗಿತು.. ರೂಮಿಗೆ ಹೋಗಿ ಗಂಟೆ ನೋಡಿದಾಗ ತನ್ನ ಕಣ್ಣನ್ನು ತಾನೇ ನಂಬಲಿಲ್ಲ... ಆಗಲೆ ನಾಲ್ಕೂವರೆಯಾಗಿತ್ತು... ಹೊರಗೆ ಅಲ್ಲಲ್ಲಿ ಕಾಗೆ ಕೂಗುವುದು ಕೇಳಿಸುತ್ತಿತ್ತು. ಬುದ್ಧಿ ತಿಳಿಯಾಗುವ ಹೊತ್ತಿಗೆ ರಾತ್ರಿ ನಡೆದುದು ಜ್ಞಾಪಕವಾಗಿ ಎದೆ ಬಿಗಿಯಿತು. 'ಅಂತೂ ಮೊಂಡು ಹಿಡಿದಳು ಹುಡುಗಿ. ತನಗೆ ವಯಸ್ಸಾಗಿ ದಂಡ, ಹೆಂಗಸಿಗೆ ಅಷ್ಟೊಂದು ಶಾಠ್ಯವಿರಬಾರದು'.... ಎನಿಸಿತು. ಮೆಲ್ಲನೆದ್ದು ಹೋಗಿ ಹಂಡೆಯೊಲೆಗುರಿಯಿಕ್ಕಿದಳು.

ನೀರು ಕಾಯುವವರೆಗೂ ಮನೆಗೆಲಸ ಮಾಡುತ್ತಿದ್ದಳು. ಪದೇ ಪದೇ ಸೀತಮ್ಮನ ಮನೆಯ ಬಾಗಿಲನ್ನು ನೋಡುತ್ತಿದ್ದಳು...

ಪತಿರಾಯ ಬಚ್ಚಲಿನಿಂದ ಎದ್ದರು. ಒದ್ದೆ ಮಾಡಿದ್ದ ಟವೆಲ್ಲನ್ನು ಒಗೆಯಲು ವಠಾರದವರೆಲ್ಲರಿಗೂ ಒಂದೇ ಆದ ನಲ್ಲಿಯ ಬುಡದಲ್ಲಿದ್ದ ಕಲ್ಲಿನ ಬಳಿ ಕೊಂಡೊಯ್ದಳು. ನಲ್ಲಿಯಲ್ಲಿ ನೀರಿನ್ನೂ ಬಂದಿರಲಿಲ್ಲ. ಎಂತಲೇ, ಒಳಗಿನಿಂದ ತುಂಬಿದ ತಪ್ಪಲೆ ನೀರು ತಂದಿಟ್ಟುಕೊಂಡಳು.

ಬಟ್ಟೆಯೊಗೆಯುವ ಸದ್ದಿನಿಂದ ಸೀತಮ್ಮನಿಗೂ ಎಚ್ಚರವಾಯಿತು. ಕಣ್ಣು ಬಿಟ್ಟಾಗ ದೀಪ ಸಣ್ಣದಾಗಿ ಉರಿಯುತ್ತಿತ್ತು. ಏನೋ ನೆನಪಾಗಿ ಮೈ ಜುಮ್ಮೆಂದಿತು... ಸದ್ಯ!– ನೋವೂ ನಿಂತಿತ್ತು. ಮೆಲ್ಲನೆದ್ದು ಹಿಂದಿನ ಬಾಗಿಲು ತೆರೆದು ಬಚ್ಚಲಿಗೆ ಹೋದಳು. ಹೋಗುವಾಗ ತಿರುಗಿ ನೋಡಿದಳು. ರಂಗಮ್ಮನನ್ನು ನೋಡಿದ ಕೂಡಲೇ ರಾತ್ರಿಯಾದುದೆಲ್ಲ ನೆನಪಾಗಿ ಎದೆ ಹಿಂಡಿತು. ಮೌನದಿಂದ ಒಳಹೋಗಿ ಹಂಡೆಯಲ್ಲಿ ಬಗ್ಗಿ ನೋಡಿದಳು. ತಳ ಹಿಡಿದಿದ್ದ ನೀರು ಅವಳ ಮುಖವನ್ನು ಅರ್ಧ ಮಾತ್ರ ಬಿಂಬಿಸಿ ಕೆಳಕ್ಕಿತು. ಖಾಲಿ ಬಿಂದಿಗೆಯನ್ನು ಸೊಂಟಕ್ಕೇರಿಸಿದಳು–ಮೂರು ಮನೆಯಾಚೆಯಿದ್ದ ಬಾವಿಯಿಂದ ನೀರು ತರಲು.

ಬಚ್ಚಲು ಮನೆಯಿಂದ ಹೊರಬಂದು ರಂಗಮ್ಮನ ಮುಂದೆಯೇ ಮೌನವಾಗಿ ಮುಂದುವರೆದಳು–ತಲೆ ತಗ್ಗಿಸಿಕೊಂಡು.

'ಬಿಂದಿಗೇನ ಇಲ್ಲಿ ಕೊಡು, ಸೀತಮ್ಮ–'

ರಂಗಮ್ಮ ನುಡಿದಳು.

ಈಕೆ ಕಿವುಡಿಯಂತೆ ಹೆಜ್ಜೆಯೊಂದನ್ನು ಮುಂದಿಟ್ಟಾಗ, ರಂಗಮ್ಮ ಸೀತಮ್ಮನ ಕಂಕುಳಲ್ಲಿದ್ದ ಖಾಲಿ ಬಿಂದಿಗೆಯ ಬಾಯಿಗೆ ಕೈಯಿಟ್ಟಳು–

ಎದುರಿಗಿದ್ದ ನಲ್ಲಿ ಕೊರ್... ಎಂದು ಕೂಗಿತು.

ಮುಂಜಾವಿನ ನೀರು ಬಲು ರಭಸದಿಂದ ಕಲ್ಲ ಮೇಲೆ ಸುರಿಯಿತು. ಸುರಿದ ನೀರು ಆಳುದ್ದ ಚಿಮ್ಮಿ ಇಬ್ಬರ ಮುಖಕ್ಕೂ ಸಿಂಪಡಿಸಿತು. ಸೀತಮ್ಮ ರಂಗಮ್ಮನ ಮುಖವನ್ನು ನೋಡಿದಳು. ರಂಗಮ್ಮನ ಕಣ್ಣಲ್ಲಿ ಕಂಡೂ ಕಾಣದಂತೆ ಹನಿಯೊಂದು ತುಳುಕಿ ದೃಷ್ಟಿ ಮುಸುಕಾಯಿತು. ಮುಖವನ್ನು ಅತ್ತ ಹೊರಳಿಸಿದಳು!!!

■

**ಪೂರಕ ಮಾಹಿತಿಗಾಗಿ ಈ ಲಿಂಕ್ ವೀಕ್ಷಿಸಿ.**

- https://www.facebook.com/A2Moviesofficial/videos/4688777251206056/?extid=CL-UNK-UNK-UNK-AN_GK0T-GK1C&mibextid=2Rb1fB&ref=sharing
- https://www.youtube.com/watch?v=uzv6QC9aqIg

# 3. ಚಂದ್ರಹಾಸನಭ್ಯುದಯ (ಜೈಮಿನಿ ಭಾರತದ ಆಯ್ದ ಭಾಗ)

– ಲಕ್ಷ್ಮೀಶ

ಆಲಿಸೆಲೆ ಫಲಗುಣ ಕುಳಿಂದಕನ ಭವನವದೊ ।
ಳ್ಬಾಲಕಂ ಪೆರ್ಚುವ ಸುಧಾಂಶಕಳೆಯಿಂ ನಗುವ ।
ಲೀಲೆಯಿಂ ಚಂದ್ರಹಾಸಂ ತಪ್ಪನೆಂಬಂತೆ ದಿನದಿನಕೆ ವರ್ಧಿಸುತಿರೆ ॥
ಮೇಲೆ ಮೇಲೆಸೆದುದಾ ಪೊಳಲ ಸಿರಿ ವಿಮಲ ಗುಣ ।
ಶೀಲದಿಂ ಮರೆದುದೆಲ್ಲಾ ಜನಂ ಬಿಡದೆ ಕೊಡ ।
ವಾಲಂ ಕರೆದುವಾಕಳುತ್ತು ಬಿತ್ತದೆ ಬೆಳೆಯತೊಡಗಿತಿಳೆ ಮಳೆಗಳಿಂದ ॥1॥

ಮೆಲ್ಲನಿಂತಿರಲೆಂಟನೆಯ ವರುಷಮಾಗಲ್ಕೆ ।
ನಿಲ್ಲದುಪನಯನಂ ವಿರಚಿಸಿ ಕುಳಿಂದಂ ಸ ।
ಮುಲ್ಲಾಸಮಂ ತಾಳ್ದನಂಗಸಹಿತಖಿಳ ವೇದಂಗಳಂ ನೀತಿಗಳನು ॥
ಸಲ್ಲಲಿತ ಶಬ್ದಾದಿ ಶಾಸ್ತ್ರಸಿದ್ಧಾಂತಂಗ ।
ಳೆಲ್ಲಮಂ ಗುರುಮುಖದೊಳದಿಕರಿಸಿ ಬೇಕಾದ ।
ಬಿಲ್ಲವಿದ್ಯೆಯನರಿದು ಗಜ ತುರುಗದೇರಾಟದೊಳ್ಚತುರನದನವನು ॥2॥

ಷೋಡಶ ಪ್ರಾಯದೊಳವಂ ಪ್ರಬಲ ಭಟನಾಗಿ ।
ಮೂಡಿದಗ್ಗಳಿಕೆಯಿಂದೈದೆ ರಥಿಕರ್ಕಳಂ ।
ಕೂಡಿಕೊಂಡೈದಿ ನಿಜ ತಾತಂಗೆ ಮಲೆವ ಮನ್ನೆಯರೆಲ್ಲರಂ ಘಾತಿಸಿ ॥
ಮಾಡಿದಂ ದಿಗ್ವಿಜಯಮಂ ಕುಳಿಂದಕನಾಳ್ವ ।
ನಾಡಲ್ಲದೆಣ್ದೆಸೆಯ ಸೀಮೆಗಳನೊತ್ತಿದಂ ।
ಪೊಡಿಸಿದನವರವರ ಮನೆಗಳ ಸುವಸ್ತು ಜಾಲಂಗಳಂ ತನ್ನ ಪುರಕೆ ॥3॥

ನಿಳಯಕ್ಕೈ ತಂದನುತ್ಸವದಿಂ ಕುಳಿಂದಕಂ ।
ಬಳಿಕ ತನ್ನಾಧಿಪತ್ಯವನಾತ್ಮಜಂಗೆ ಮಂ ।
ಗಳ ಮುಹೂರ್ತದೊಳಿತ್ತನಂದಿನಿಂ ಚಂದ್ರಹಾಸಂ ಪಾಲಿಸುವನಿಳೆಯನು ॥
ತುಳುಕಾಡಿತಾನಾಡ ಸಿರಿ ಚಂದರಾವತಿಯ ।
ಪೊಳಲ ಸೌಭಾಗ್ಯಮಥಿವರ್ಧಿಸಿತು ವೈಷ್ಣವದ ।
ಬಳೆವಳಿಗೆಯಾದುದೆಲ್ಲಾ ಜನದೊಳಾಚಾರ ಗುಣದಾನ ಧರ್ಮದಿಂದೆ ॥4॥

ಜಲಜಾಕ್ಷ ಭಕ್ತಿಯಿಂ ಪ್ರಹ್ಲಾದನಾಗಿ ನಿ ।
ಶ್ಚಲ ಹರಿಧ್ಯಾನದಿಂ ಧ್ರುವನಾಗಿ ಸತ್ವದಿಂ ।
ಬಲಿಯಾಗಿ ಶಾಂತತ್ವದಿಂ ವಿಭೀಷಣನಾಗಿ ವೈಷ್ಣವಾಭರಣನೆಂಬ ॥
ಕಲೆಯಿಂದ ಮಹಿಗೆ ರುಕ್ಮಾಂಗದಂ ತಾನಾಗಿ ।
ಸಲೆ ಕೀರ್ತಿಯಿಂ ಪುಂಡರೀಕನಾಗಿರುತಿಹಂ ।
ಸುಲಲಿತ ಚರಿತ ಭಾಗವತ ಶಿರೋಮಣಿ ಚಂದ್ರಹಾಸನುರ್ವೀತಳದೊಳು ॥5॥

ರಾಯಂಗೆ ವರ್ಷ ವರ್ಷಕೆ ನಾವು ಕುಡುವ ಸಿ ।
ದ್ಧಾಯಮಂ ದುಷ್ಟಬುದ್ಧಿಗೆ ಸೆಲಿಸಿ ಬರ್ಪ ನಿ ।
ಷ್ಕಾಯತ ದ್ರವ್ಯಯಂ ನೃಪನ ರಾಣಿಗೆ ಪುರೋಹಿತನಾದ ಗಾಲವಂಗೆ ॥
ಪ್ರೀಯದಿಂದುಪಚರಿಸುವರ್ಥಮಂ ತತ್ಕಾಲ ।
ಕೀಯಬೇಕೆಲೆ ಮಗನೆ ಧನವನೊದವಿಸಿ ಕಳುಹ ।
ಸೂಯೆಗೀಡಾಗಬೇಡೆಂದು ನಿಜನಂದನಂಗಾ ಕುಳಿಂದು ಪೇಳ್ದನು ॥6॥

ಪಿತನ ಮಾತಂ ಕೇಳ್ದು ಚಂದ್ರಹಾಸಂ ಮಹೀ ।
ಪತಿಗೆ ಮಹಿಷಿಗೆ ಮಂತ್ರಿ ದುಷ್ಟಬುದ್ಧಿಗೆ ಪುರೋ ।
ಹಿತ ಗಾಲವಂಗೆ ಸಲಿಸುವ ಧನವದನರ ಸಂಗಡಕೆ ತಾನಾಹವದೊಳು ॥
ಪ್ರತಿಭೂಪರಂ ಜಯಿಸಿ ತಂದ ವಸ್ತುಗಳನಂ ।
ಕಿತದಿಂದ ಕಟ್ಟಿ ಶಕಟೋಷ್ಟ್ರಕರಿ ಭಾರಗಳ ।
ಶತ ಸಂಖ್ಯೆಯಿಂದೆ ಕಳುಹಿದನಾಪ್ತರಂ ಕೂಡಿಕೊಟ್ಟು ಕುಂತಳ ನಗರಿಗೆ ॥7॥

ಹಸ್ತಿ ಹಯ ರತನ ವಸ್ತ್ರಾಭರಣ ಕರ್ಪೂರ ।
ಕಸ್ತೂರಿ ಮಲಯಜ ಸುವರ್ಣ ರಜತಾದ್ಯಖಿಳ ।
ವಸ್ತ್ರಚಯಮಂ ಕೊಂಡು ಚಂದ್ರಹಾಸನ ಚರರ್ಬಂದು ಕುಂತಳ ನಗರಿಗೆ ॥
ವಿಸ್ತಾರದಿಂದಸೆವ ನಗರೋಪಕಂಠದ ಸ ।
ರಸ್ತೀರದೊಳ್ಮಿಂದು ಚಕ್ರಿಯಂ ಪೂಜೆಗೈ ।
ದಸ್ತಮಯ ಸಮಯದೊಳ್ಪೊಕ್ಕರಾ ಪಟ್ಟಣವನತಿಶುಚಿರ್ಭೂತರಾಗಿ ॥8॥

ನೊಸಲೊಳೆಸೆವೂರ್ಧ್ವ ಪುಂಡ್ರದ ಸುಧೌತಾಂಬರದ ।
ಮಿಸುಸ ತುಳಸಿ ದಂಡೆಗಳ ಕೊರಳ ನಿಶ್ಚಳದ ।
ದಶನಪಙ್ಕ್ತಯ ವಿಕಿಲ್ಬಿಷಗಾತ್ರ ದಚ್ಛ ಸಾತ್ವಿಕ ಭಾವದಿಂದ ಮೆರೆವ ॥

ಶಶಿಹಾಸನನುಚರ ಬರ್ಂದು ಕಾಣಲ್ಕಿದೇಂ ।
ಪೊಸತಕಟ ನಿಮಗೀಗಳೇಕೆ ಶುದ್ಧಿ ಸ್ನಾನ ।
ಮುಸುವಿಡಿದಿಹನೆ ಕುಳಿಂದಕನೆಂದು ಶಂಕೆಯಿಂ ಕೇಳ್ದನಾ ದುಷ್ಟಬುದ್ಧಿ ॥9॥

ಅಶುಭಕೋಟಿಯನೊರಸುವೇಕಾದಶೀ ವ್ರತಕೆ ।
ವಿಶದ ಸಲಿಲಸ್ನಾನಮಿಂದೆಮಗೆ ಸಮನಿಸಿತು ।
ಕುಶಲದಿಂ ಬಾಳ್ವಂ ಕುಳಿಂದನಾತನ ಸೂನು ಚಂದ್ರಹಾಸಂಗೆ ನಾಡು ॥
ವಶವರ್ತಿಯಾಗಿರ್ಪುದವನಾಜ್ಞೆಯಿಂದುಭಯ ।
ದಶಮಿಯೊಳ್ನಡೆವುದುತ್ಸವಚ್ಯುತಂಗೆ ಕ ।
ರ್ಕಶಮಿಲ್ಲದಖಿಳಜನಮಂ ಬಿಡದೆ ಪಾಲಿಪಂ ಹರಿಭಕ್ತಿ ನಿರತನಾಗಿ ॥10॥

ಏನಿದೆತ್ತಣ ಕೌತುಕದ ನುಡಿ ಕುಳಿಂದಂಗೆ ।
ಸೂನು ಜನಿಸಿರ್ದಪನೆ ಬಂಜೆಯಾಗಿಹಳವನ ।
ಮಾನಿನಿ ವಿಚಿತ್ರಮೆನಲಾಚರರ್ಜೀಯ ಪುಸಿಯಲ್ಲವಂ ಬೇಂಟೆಗೈದೆ ॥
ಕಾನನದ ಮಧ್ಯದೊಳನಾಥನಾಗಿ ಶಿಶು ನಿ ।
ಧಾನಮಿರೆ ಕಂಡೆತ್ತಿಕೊಂಡು ಬಂದನಾತ್ಮಜ ವಿ ।
ದಾನದಿಂದೋವಿದಂ ಪ್ರೀತಿ ಮಿಗೆ ಚಂದ್ರಹಾಸಾಭಿಧಾನದೊಳೆಂದರು ॥11॥

ಮನೆಗೆ ಮಗಳಂ ಕಳುಹಿ ರಾಜಕಾರಿಯಕೆ ಮದ ।
ನನನಿರಿಸಿ ತನ್ನ ಪರಿಜನ ಸಹಿತ ಪೊರಮಟ್ಟು ।
ದಿನವೆರಡಕ್ಕೈತಂದು ಮುನ್ನಿರ್ದ ಕಾಡೆಲ್ಲಮೆಸೆವ ನಾಡಾಗಿರಲ್ಕೆ ॥
ಮನದೊಳ್ಕರುಬನಾಂತು ಮೆಚ್ಚಿದವನಾಗಿ ಲೇ ।
ಸಿನೊಳಾ ಕುಳಿಂದಕನಿದರ್ವಂದು ಸತ್ಕರಿಸೆ ।
ಘನವಿಭವದಿಂದೆ ರಾಜಿಪ ಚಂದನಾವತಿಗೆ ಬಂದನಾ ದುಷ್ಟಬುದ್ಧಿ ॥12॥

ಬಂಜೆಯಾಗದು ವಿಪ್ರರಂದೆನ್ನೊಳೆಂದೆ ನುಡಿ ।
ರಂಜಿಸುವ ರಾಜಲಕ್ಷಣದೊಳೊಪ್ಪುವ ನಿವಂ ।
ಭಂಜಿಸದೊಡೀ ಧರಣಿಗೀತನರಸಾದಪಂ ಬಳಿಕ ತನ್ನಾತ್ಮಜರ್ಗೆ ॥
ಸಂಜನಿಸಲರಿದು ಭೂಪಾಲತ್ವಮಗ್ಗಳಿಕೆ ।
ಗಂಜುವವನಲ್ಲ ಬಲವಂತಹನೀತಂಗೆ ।
ನಂಜನೂಡಿಸಿ ಕೊಲ್ವುಪಾಯಂ ಮಾಳ್ಪೆನೆಂದೆಣಿಸಿದಂ ದುಷ್ಟಬುದ್ಧಿ ॥13॥

ರಾಕಾಶಶಾಂಕನಭ್ಯುದಯಮಮಂ ಕೆಡಿಸಿ ತ ।
ನ್ನಾಕಾರಮಮಂ ತೋರಿಸುವೆನೆಂಬ ಕತ್ತಲೆವೊ ।
ಲಾ ಕಮಲಲೋಚನನ 'ಭೃತ್ಯನಂ ಕೊಲಿಸಿ ತಾಂ ಬಾಳ್ವೆನೆಂಬುಜ್ಜುಗದೊಳು ।
ಆ ಕುಮತಿಯಹಮಂತ್ರಿ ಬಳಿಕೊಂದು ಲೇಖನವ ।
ನೇಕಾಂತದೊಳ್ ಬರೆದು ಮೇಣದಕೆಮುದ್ರೆಯಂ ।
ಜೋಕೆಯಿಂದಳವಡಿಸಿ ಶಶಿಹಾಸನಂ ನೋಡಿ ನಸುನಗುತಲಿಂತೆಂದನು ॥14॥

ಉರ್ವ ಮಂತ್ರದ ಕಜ್ಜಮಿದು ಚಂದ್ರಹಾಸ ನೀ ।
ನೊರ್ವನೆ ಹಯಾರೂಢನಾಗಿ ನಾಲ್ವರ್ಸೇವ ।
ಕರ್ವೆರಸಿ ರಾಜಧಾನಿಗೆ ಪೋಗಿ ತನ್ನ ಮಗ ಮದನಂಗೆ ಮುದ್ರೆ ಸಹಿತ ॥
ಸರ್ವಜನಮರಿಯದಂತೀವುದೀ ಪತ್ರಿಕೆಯ ।
ನುರ್ವರೆಯೊಳಾವೆಸಗಿದತಿಶಯದ ಮಾಳ್ಕೆ ನ ।
ಮ್ಮಿರ್ವರೊಳ್ಗುಪ್ತಮಾಗಿರಲೆಂದು ಕೊಟ್ಟನಾ ಮಂತ್ರಿತಲ್ಲೇಖನವನು ॥15॥

ಹಯವರ ಸಮಾರೂಢನಾಗಿ ಸೇವಕ ಚತು ।
ಷ್ಟಯದೊಡನೆ ಸೂಚಿತ ಶುಭೋದಯದ ಶಕುನಾವ ।
ಳಿಯನಾಲಿಸುತ ಬಟ್ಟೆವಿಡಿದು ಕುಂತಳಪುರದ ಬಾಹ್ಯೋಪವನಕೆ ಬರಲು ॥
ನಯಸರದ ಕೋಗಿಲೆಯ ಸಾದರದ ನುಡಿಯೊಳತಿ ।
ಶಯ ಫಲೋತ್ಕರದ ತರು ಶಾಖೆಗಳ ಕೈಗಾಣಿ ।
ಕೆಯೊಳಿದಿರ್ಗೊಳ್ವವೊಲಾ ವನಂ ಚಂದ್ರಹಾಸನ ಮುಂದೆ ಕಣ್ಗೆಸೆದುದು ॥16॥

ತಿರಿದೆಳೆದಳಿರ್ಗಳಂ ಪಾಸಿ ಕುಳ್ಳಿರ್ದೊಯ್ಯ ।
ನೊರಗಲ್ಕೆ ನಡುವಗಲ ಬಿಸಿಲಿಂದೆ ಮಾರ್ಗದೊ ।
ಳ್ನೆರೆ ಬಳಲ್ದಿಹ ಚಂದ್ರಹಾಸಂಗೆ ತಣ್ಣೆಲರ ಸೊಗಸಿಂದೆ ಕಣ್ಣೆವೆಗಳು ॥
ಸೆರೆಗೊಂಡುವಾಲಿಗಳನ್ನಾತ್ಮಿಯ ಕೃತ್ಯಮಂ ।
ಮರೆದು ನಿದ್ರಾಲೋಲನಾಗಿ ಮಲಗಿದವನಂ ।
ಮಿರುಗುವಹಿತಲ್ಪದೊಳ್ದೇವಪುರದನಿಲಯ ಲಕ್ಷ್ಮೀವರಂ ಪವಡಿಸುವೊಲು ॥17॥

■

**ಪದ್ಯದ ವಾಚನ ಮತ್ತು ವ್ಯಾಖ್ಯಾನ ಪೂರಕ ಮಾಹಿತಿಗಾಗಿ ಯೂಟ್ಯೂಬ್‌ನ ಈ ಲಿಂಕ್ ವೀಕ್ಷಿಸಿ**

◆ https://youtu.be/prE2qADMDQU

# 4. 'ಕ್ಷಮಿಸಿವರನೆಲೆ ತಂದೆ! ತಾವೇನನೆಸಗಿದಪೆ ವೆಂದರಿಯರಿವರು.'

– ಗೋವಿಂದ ಪೈ

ವಸಂತಪೂರ್ಣಿಮಿಯ ಭೃಗುವಾರದಾ
ನಡುಹಗಲ ಸಿರಿಹೊತ್ತು, ಭಾಸ್ಕರನ ಸುಳುವಿಲ್ಲ ;
ನೋಡೊಂದೆ ಬರಮೋಡ ಬಾನಗಲ ಚಾಚಿ ೨೬ನೋ
ಹನ ಕಾಲದಾ ಪ್ರಲಯಮೇಘವೆನೆ ಮುಚ್ಚಿಹುದು :
ಬೇಗೆಯಂ ತಡೆಯಲಾಗದು, ಗಾಳಿ ಸೂಸದಿಳೆ
ಯುಬ್ಬಸದೊಳೇದುತಿದೆ, ಮರಗಳಲಿ ಕದಲದೆಲೆ,
ಹಕ್ಕಿಗಳ ಉಸುರಿಲ್ಲ ; ನೆಟ್ಟಿರುಳೊಳಂತೆ ಮನೆ
ಮನೆಯೊಳುಸಿಕಣೆ ಸಂತಮಿರತಕ್ಕ ಜನಪದಂ
ಧಗೆಯ ಹೆಬ್ಬಾವಂತೆ ಹೊರಟು ತಿಂತಿಣಿವರಿದು
ಬಂತು ಶಲಭಸಮೂಹದಂತೆ ಯೇರೂಸಲೇಮ್
ನಗರದಗಸೆಯ ಹೊರಗಿರುವ ೨೭ ಕಪಾಲಸ್ಥಾನ
ವೆಂಬುವಾ ಗೊಲ್ಗೊಥಾ ಗಿರಿಗೆ. ಬಂದಿಗಳಿಂದ
ಹೊರಿಸಿ ತಂದಾ ಮೂರು ಸಿಲುಬೆಗಳ ನಟ್ಟ ರಾ
ಗೊಲ್ಗೊಥದ ಶಿಖರದಲ್ಲಿ; ಯೇಸುವಂ ನಡುವೆ ಮೇ
ಣೆಡಬಲದೊಳಾ ಕಳ್ಳರಿಬ್ಬರಂ ಸಿಲುಬೆಗಳಿ
ಗಿಕ್ಕಿ, ಕೈಕಾಲ್ಗಳಿಗೆ ಮೊಳೆ ಜಡಿದು, ಯೇಹೂದ್ಯ
ರರಸನೀ ೨೮ ನಜರಾಯ ಯೇಸುವೆಂದಾ ಬರೆದ
ಹಲಗೆಯಂ ತಲೆಗಡೆಗೆ ತೂಗಿದರು. ಹದ್ದು ಬಿಗಿ
ವಿಡಿದ ಲಾವಿಗೆಯಂತೆ, ಪಡುವಣದಿ ಬಿಳಿಯ ಬಿದಿ
ಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ,
ಮರಣ ವೃಕ್ಷದೊಳಮೃತಫಲದಂತೆ ತೂಗುತಿರೆ,
ತನ್ನ ಬೇನೆಯನಣಂ ಗಣಿಸದವನುಸುರಿದಂ–
ನರದೇಹವೆತ್ತವನಿಗಾ ತನುವ ಗುಣಧರ್ಮ
ವಹ ಬೇನೆ ಇಲ್ಲದಿಹುದೆಂತು? ತಾನಾರ ತನು
ಮನಮನಿನಿಸಾದೊಡಂ ನೋಯಿಸಿಲ್ಲೆಂದು ಸಾ

ವಿರ ಚೇಳ್ಗಳೊಮ್ಮಿಗಕಟಾ ಕಡಿದ ಯಾತನೆಯ
ಸಿಲುಬೆಯಳಿಲುರಿಯ ತಣ್ಣನ ತಳೆದು, ತಾಯ ಮೊಗ
ನೋಡೆ ಮಗು ಬೆಸಲಳನೋತು ಸೈರಿಸುವಂತೆ,
ಚೂಣಿಯ ಭಟಂ ಗಾಯದಳಲ ಲೆಕ್ಕಿಸದೆ ಮುಂ
ಗಾದಾಡಿ ಮಡಿದು ಜಯವಡುವಂತೆ, ನರನರಂ
ಗಳಲಿ ಕುದಿಕುದಿವ ವೇದನೆ ಸೋಸಿ, ತನ್ನ ತೊರೆ
ದರ್ಭಕರ ಹಂಬಲಿಸುವ ಮುಮೂರ್ಷು ತಾಯಂತೆ
ತನ್ನ ಕಡಿವವರ್ಗೆ ತಣ್ನೆಳಲೀವ ಮರದಂತೆ,
ತನ್ನಳಲನವರ ಹಂಬಲದಿ ಮರೆತುಸುರಿದಂ–
'ಕ್ಷಮಿಸಿವರನೆಲೆ ತಂದೆ! ತಾವೇನನೆಸಗಿದಪೆ
ವೆಂದರಿಯರಿವರು.' ನೆರೆದವರದಂ ಕೇಳಿ 'ಹಾ!
ನಮಗಾಗಿ ಕ್ಷಮೆಯ ಯಾಚಿಸುವುದಂತಿರಲಿ; ನೀ
ದೇವಸುತನಾಗಿದ್ದರೀ ಸಿಲುಬೆಯಿಂದಿಳಿದು
ಬಾರ ನೋಡುವ!' ಎಂದು ಜಟಕರಿಸೆ, ಯಾಜಕರು
'ಅನ್ಯರಂ ರಕ್ಷಿಸಿದಿವಂ ತನ್ನ ತಾನೆ ರ
ಕ್ಷಿಸಲಾರನಾದನೆ? ಯೆಹೂದ್ಯರರಸಂತೆ! ತಾ
ನಿಳಿತರಲಿ ಸಿಲುಬೆಯಿಂದೊಡನೆ ನಂಬುವೆನಿವನ !
ದೇವರೊಳೆ ಭರವಸಿಗನಂತೆ! ಕಾಂಬೆವು ದೇವ
ರೀತನಂ ರಕ್ಷಿಸಲಿ! ದೇವಸುತ ತಾನೆಂದ
ನಲ್ಲ?' ಎಂದಣಕಿಸಿದರು.

ಅನಿತರೊಳೆ ಬಿರುಗುತ್ತ
ಲೊಂದು ಬಾನೆಲ್ಲವಂ ಬಾಸಣಿಸಿ, ದೇವಸುತ
ನಮೃತನೀ ಮೃತಿನಾಟಕದ ಕಡೆಯ ತೆರೆಯಂತೆ
ಭೂವ್ಯೋಮಗಳ ನಡುವೆ ಮುಸುಕಿದುದು. ಸೂರ್ಯೋಪ
ರಾಗಮೇನಿಂದು ಹುಣ್ಣಿಮೆಯೊಳೆನೆ ನಕ್ಷತ್ರ
ವೊಂದಿಲ್ಲ. ಮಳೆಯ ಕತ್ತಲೆಯೊ? ಕತ್ತಲ ಮಳೆಯೊ?
ಅಲ್ಲಡೆ ನಭೋಗ್ನಿಮುಖಿಯಿಂದುಗುವ ಕಬ್ಬೊಗೆಯೊ?
ಮಿಸ್ರದೊಂಬತ್ತನೆಯ ಮಾರಿ ೨೮ ತಲೆದೋರಿತೇ?
ಹಗಲ ಮೂರನೆಯ ಜಾಮದೊಳೆ ಹಗಲಿನ ದೀಪ

ವಾರಿತೇನೆಂದು ನೆರೆದವರೆಲ್ಲರೆದೆ ನಡುಗೆ,
ಸಿಲುಬೆಯೊಳೆಲೀ! ಎಲೀ! ಲಮ್ಮಾ ಸಬಖ್ಥಾನಿ?
(ದೇವರೇ! ದೇವರೇ ಯಾಕೆನ್ನ ಕೈಬಿಟ್ಟೆ?)
ಎಂದು ದಾವೀದ ನೃಪನಂದಿನಾರ್ತಧ್ವಾನ ೨೯
ದಿಂದರಚೆ ಯೇಸು, ನಿಂದವರಲ್ಲಿ ಕೆಲವರಿವ
ನೇಲೀಯನಂ ೩೦ ಕರೆವನೇಲೀಯನೇಂ ಬಂದು
ಕಾಡಪನೊ ಕಾಂಬೆವೆನೆ, ಮೇಘನಿರ್ಘೋಷದಿಂ
'ತಂದೆಯೆ! ಮಮಾತ್ಮವಂ ನಿನ್ನ ಕೈಯ್ಗೊಪ್ಪಿಸುವೆ!'
ಎಂದು ಗಗನದಿ ಯೇಸು ಕಣ್ಣೂರಿ, ತುದಿಬೆಟ್ಟ
ದಿಂ ಕರೆವ ತಾಯೆಡೆಗೆ ಮರಿಜಿಂಕೆ ಜಿಗಿವಂತೆ,
ಸುಗ್ಗಿಯೆಡೆಗಯ್ದುವಾ ಬಾನಕ್ಕಿಯಂತೆ, ದಿನ
ಮುಖದೊಳಿರುಳಿನ ಸೊಡರು ನೇಸರಂಬುಗುವಂತೆ,
ಕ್ಷಿತಿಜದಿಂ ಸಿಡಿದು ಮೇಲ್ನೆಗೆವೆ ಮಿಂಚಂತೆ, ಯೇ
ಸುವಿನಾತ್ಮಮೊಡನೆ ಬೆಳಕಿನ ಬೀಡಿಗಯ್ದೆ, ೩೧ನಿಲು
ನೇಸರುಗಳೆಡೆಗಯ್ದೆ, ಕಣ್ಮುಗಿದು ತಲೆವಾಗಿ,
ತನ್ನ ಪಡೆದೆ ರವನೊಡೆಯಂಗೆ ಮರಳೀವಂತೆ
ತನ್ನ ತಂದೆಗೆ ಯೇಸುವಸುವನೊಪ್ಪಿಸಿದಂ

❖ ❖ ❖

ಗಡಗಡನೆ ಪೊಡವಿ ನಡುಗಿತು, ದುಃಖವಾರ್ತೆಯಂ
ಜಗಕೆಲ್ಲ ಕೇಳಿಸುವ ಮೃತಕದುಂದುಭಿಯಂತೆ,
ನೆರೆದರೆದೆಯೆದೆ ಭೀತಿಯಿಂದ ಮಾರ್ಮೊಳಗಿದುದು.
ಕಾವಲಿನ ರೋಮಕ ಶತಾಧಿಪತಿ ಕುದುರೆಯಲಿ
ಜೂಗಳಿಸೆ, ಕೆಳಗಿಳಿದು ಸೀಸಕಂ ತೆಗೆದಿವಂ
ದೇವತನಯಂ ಗಡಾ! ಎಂದು ವಿಸ್ಮಯದೊಳಾ
ಹಗಲ ತಿಂಗಳನೆ ಎವೆಯಿಕ್ಕ ದೀಕ್ಷಿಸಿದಂ

❖ ❖ ❖

ಮೆಲ್ಲಮೆಲ್ಲನೆ ತೆಗೆದುದಾ ಕತ್ತಲಾ ಮೋಡ,
ಸುಳಿದುದೆಳೆಗಾಳಿ, ಮುಚ್ಚಿದ ಕೋಳಿ ಹೊರಹೊಂಚಿ
ಮುಂಬೆಳಕೊಳಂತೆ ಕೂಗಿತು, ಹಕ್ಕಿಗಳ ಹಿಂಡು

ಗೂಡುಗೂಡಿಂದ ಹೊರಸೂಸಿತರೆಮೇವಿನೊಳೆ
ಕಂಗೆಟ್ಟ ಮಂದೆಯೊಟ್ಟಾಗಿ ಮರಳಿತು ಮನೆಗೆ.
ಅಂತು ಹಗಲಿನ ರಾತ್ರಿ ಪಾಳೆಯಂ ತೆಗೆಯೆ, ಪಡು
ವಣದಿ ರವಿ ಮೂಡಿ, ತನ್ನೆ ದುರಿನೊಳೆ ಪಡುಮೊಗಂ
ಗೊಂಡು ಧರ್ಮಪತಾಕೆಯಂತೆ ನಡುಸಿಲುಬೆಯಲಿ

ಚಾಚಿದಪರಾರ್ಕನಂ ಕಂಡು ತಾನಸ್ತ ಮಿಸ
ಲಲ್ಲಿ ನೆರೆದವರೆಲ್ಲ ಕತ್ತಲೆಯ ದಂಡೆಯಿಂ
ಹಿಂಡೆದ್ದ ಕೊಕ್ಕರೆಗಳಂತೆ ಗೊಲ್ಗೊಥದಿಂದ
ಮನೆಗೆ ತೆರಳಿದರಲ್ಲಿ ಸದ್ದಿಲ್ಲ. ಸುಳಿವಿಲ್ಲ.

❖ ❖ ❖

ಮೂಗುಹರಕಾವೊಂದು ಹಳೆಯ ೩೨ ತಲೆಬುರುಡೆ ನಡು
ಸಿಲುಬೆಯಡಿಯಿಂ ಜಗವ ಬಾಯ್ಕಿಸಿದು ನಗುತಲಿದೆ.
ಕೆಯ್ಯ ಭಲ್ಲೆಯದೊಬ್ಬನಾ ಜಾಮದ ಪ್ರಹರಿ
ಸಿಲುಬೆಗಳ ಮುಂಗಡೆಯೊಳತ್ತಿತ್ತ ಶತಪದಂ
ಗೆಯ್ದು ತನ್ನಯ ಬಾರಿ ಮುಗಿವ ಹೊತ್ತಂ ಕಾದು
ನಿಮಿಷಗಳನೆಣಿಸುತಿಹನಾದಡಾ ಗಿರಿಯಿಂದ
ಲನತಿದೂರದೊಳೊಂದುದುಂಬರದ ನೆರಳಲ್ಲಿ
ಮೆಯ್ಮರಸಿ ಕುಳಿತಿಹಳು ಕಡೆಮುಗಿಲ ಮಳೆವಿಲ್ಲ
ನೀಕ್ಷಿಸುವ ನವಿಲಂತೆ ನಡಿಸಿಲುಬೆಯೊಳೆ ನಟ್ಟ
ನಯನಗಳ ೧೩ ಮಗ್ದಲದ ಮರಿಯೆ – ದಾವೀದಕುಲ೩೩
ದಾದಿತ್ಯನ ನವಪ್ರಬೋಧನದ ಮುಂಗೋಳಿ.
ಗೊಲ್ಗೊಥದ ಹಿಂದಣಿಂದುದಿಸಿದ ಸುಧಾಸೂತಿ
ಬೆಳ್ಗೊಡೆಯನಮೃತನಾ ಮೃತಮೂರ್ತಿಗೆತ್ತಿಹಂ;
ಮುನ್ನ ಕೀರ್ತಿಯ ಹಾಲ ಹೊನಲಂತೆ, ತಾನನ್ನೆ
ಗಂ ಬೀರಿದಕ್ಕರೆಯ ಬಲೆಯಂತೆ, ಬೋಧಿಸಿದ
ನಿತ್ಯಜೀವನದ ಧವಳಿಮೆಯಂತೆ, ತನ್ನಾತ್ಮ
ದಮೃತತ್ವದಂತೆ ವಿಸಟಂಬರಿಯೆ ಬೆಳದಿಂಗ
ಳೆತ್ತಲುಂ ನಿಷ್ಪಂದಮೆತ್ತಲುಂ ಶಾಂತಂ.

■

# 5. ದಯವೆ ದೇಹ ಧರಿಸಿದಂತಿದ್ದ ದಸರಯ್ಯ – ವೀರಮ್ಮರು

**ಆಕರ : ಶರಣ ಚರಿತಾಮೃತ**

**ಡಾ. ಸಿದ್ಧಯ್ಯ ಪುರಾಣಿಕ**

ಶರಣಧರ್ಮದ ಸುವರ್ಣಸೂತ್ರ–ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು, ದಯವೇ ಧರ್ಮದ ಮೂಲವೆಂದು ತಿಳಿವುದು. ಎಲ್ಲ ಶರಣರೂ ಈ ಸುವರ್ಣ ಸೂತ್ರವನ್ನೇ ಅನುಸರಿಸಿ ನಡೆದಿದ್ದಾರೆ. ದಸರಯ್ಯನಾದರೋ ಈ ಸೂತ್ರಕ್ಕೆ ತನ್ನ ಬಾಳಿನಿಂದಲೇ ಭಾಷ್ಯ ಬರೆದು ಹೋಗಿದ್ದಾನೆ.

ರಾಮಗೊಂಡೆಯಲ್ಲಿ ಹುಟ್ಟಿ ಹುಟ್ಟುಗೆಟ್ಟು ಹೋದ ದಸರಯ್ಯ ಸರ್ವಭೂತ ಹಿತವೇ ತನ್ನ ವ್ರತವೆಂದು ತಿಳಿದು ನಡೆದನು. ಅಹಿಂಸೆ ಆತನ ಉಸಿರು, ಸರ್ವಭೂತಹಿತರತಿ ಆತನ ಕಣ್ಣಾಗಿದ್ದುವು. ಎಲ್ಲವನ್ನೂ ಓದಿ, ಎಲ್ಲವನ್ನೂ ಅರಿದು ಅವನಿದೇ ತೀರ್ಮಾನಕ್ಕೆ ಬಂದಿದ್ದನು – 'ಜೀವಿಯ ನೋವೆ ಲಿಂಗದ ನೋವು!'

ಆದುದರಿಂದ ಸ್ತುತಿನಿಂದೆಗಳಿಗಾಗಲಿ ಸುಖದುಃಖಗಳಿಗಾಗಲಿ ಆತ ಮನಗೊಡುತ್ತಿರಲಿಲ್ಲ. ಇವರು ಹಿತರು, ಇವರು ಅಹಿತರು, ಇವರು ತನ್ನವರು, ಇವರು ಅನ್ಯರು, ಇವರು ಬೇಕಾದವರು, ಇವರು ಬೇಡವಾದವರು–ಎಂಬ ಭಾವನೆಯನ್ನು ಬಳಿಗೆ ಬರಗೊಡುತ್ತಿರಲಿಲ್ಲ. ಕ್ಷಮೆ, ಶಮೆ, ದಮೆ, ಶಾಂತಿ, ಸದಾಚಾರ, ಸದ್ಭಕ್ತಿ, ಸರ್ವಪ್ರೀತಿಗಳೇ ಅವನ ಸರ್ವಸ್ವವಾಗಿದ್ದುವು.

ಅವನ ಅಹಿಂಸೆ ಸಚರಾಚರಗಳನ್ನೆಲ್ಲ ವ್ಯಾಪಿಸಿತ್ತು. ತನ್ನಿಂದ ತರುಮರಾದಿಗಳಿಗೂ ನೋವಾಗಬಾರದೆಂದು ಪೂಜೆಗೆ ಪುಷ್ಪಗಳನ್ನು ಕೂಡ ಮೆಲ್ಲನೆ ಎತ್ತಿ ತರುತ್ತಿದ್ದನು. ಮರದ ರೆಂಬೆಗಳನ್ನು ಬಲವಾಗಿ ಬಾಗಿಸಿದರೆ ಅವುಗಳಿಗೂ ನೋವಾದೀತೆಂದು ಮೆಲ್ಲನೆ ಬಾಗಿಸಿ ನವುರಾಗಿ ಹೂಗಳನ್ನೆತ್ತಿಕೊಂಡು ಬರುತ್ತಿದ್ದನು.

ಒಮ್ಮೆ ಅವನ ಅಹಿಂಸೆಯೂ ಅಗ್ನಿಪರೀಕ್ಷೆಗೆ ಒಳಗಾಯಿತು. ಹೂದೋಟದಲ್ಲಿ ಒಮ್ಮೆ ಹೂಗಿಡದಿಂದ ಹೂ ಬಿಡಿಸಿಕೊಳ್ಳುತ್ತಿರಲು ಹೂ ನೊಂದು 'ಹಾ!' ಎಂದಹಾಗಾಯಿತು. ಹಾಗೆ ಹೂ ನಿಜವಾಗಿ ಹಾಗುಟ್ಟಿರಲಿಕ್ಕಿಲ್ಲ. ಆದರೆ ಸರ್ವಜೀವ ದಯಾಪಾರಿಯಾದ ದಸರಯ್ಯನ

ಸುಪ್ತಚೇತನದಲ್ಲಿ ಹುದುಗಿದ್ದ 'ಹೂಗಳನ್ನು ಬಿಡಿಸಿಕೊಳ್ಳುವಾಗ ತನ್ನಿಂದ ಅವುಗಳಿಗೆ ಎಲ್ಲಿ ನೋವಾಗುತ್ತದೆಯೋ' ಎಂಬ ಅವನ ಅಳುಕು ಅಂದು ಬಲವಾಗಿ ಅವನ ಕಿವಿಗೆ ಹೂವು 'ಹಾ' ಎಂದಂತೆ ಕೇಳಿಸಿರಬೇಕು.

ದಸರಯ್ಯನ ಮೈ ನಡುಗಿತು–ತನ್ನಿಂದ ಹೂವಿನ ಹೃದಯಕ್ಕೆ ನೋವಾಯಿತೆಂದು ಹೂವನ್ನು ಎತ್ತಿಕೊಂಡ ಸ್ಥಳವನ್ನು ನೋಡಿದನು–ಅಲ್ಲಿ ಒಸರುತ್ತಿದ ರಸ ರಕ್ತ ಕಂಡಂತೆ ಕಾಣಿಸಿತವನಿಗೆ! ದಸರಯ್ಯನ ಕಣ್ಣುಗಳಿಗೆ ಕತ್ತಲುಗೂಡಿಸಿದಂತಾಯಿತು. ಹೃದಯ ಝಲ್ಲೆಂದಿತು. ಮರದಿಂದ, ಬಳ್ಳಿಯಿಂದ ಪೂಜೆಗೆ ಬೇಕಾದ ಹೂಗಳನ್ನು ಎತ್ತಿಕೊಳ್ಳುವುದೂ ಹಿಂಸೆಯೇ ಎಂದವನಿಗೆ ಎನಿಸಿತು.

ಅಂದಿನಿಂದ ಹೂಗಳನ್ನು ಹರಿಯುವುದನ್ನು ಬಿಟ್ಟೇಬಿಟ್ಟ. ತಾವಾಗಿ ತಂಗಾಳಿಗೆ ಉದುರಿ ಬಿದ್ದ ಹೂಗಳನ್ನೇ ಆಯ್ದು ತಂದು ಪೂಜೆ ನಡೆಸುತ್ತಿದ್ದ. ಆಯ್ದು ತಂದ ಹೂಗಳನ್ನು ಲಿಂಗಕ್ಕೆ ಅರ್ಪಿಸಿ,

> "ಉದುರಿಬೀಳುವನ್ನಕ್ಕ ನಿನ್ನ ಹಂಗಯ್ಯ! ಉದುರಿ ಬಿದ್ದ ಬಳಿಕ ಎನ್ನೊಡವೆಯ್ಯ ತಂದೆ!... ತರುಲತೆ ಸ್ಥಾವರ ಜೀವಂಗಳೆಲ್ಲ ನಿನ್ನ ಕಾರುಣ್ಯದಿಂದ ಒಗೆದುವು. ಅವ ಹರಿದು ಇನ್ನಾರಿಗರ್ಪಿಸುವೆ– ತೊಟ್ಟು ಬೀಳುವನ್ನಕ್ಕ?"

ಎಂದು ಬೇಡಿಕೊಳ್ಳುತ್ತಿದ್ದನು. ಬಿದ್ದು ಬಾಡಿದ ಹೂಗಳನ್ನು ಅರ್ಪಿಸುದುದಕ್ಕಾಗಿ ಲಿಂಗಯ್ಯನೆಲ್ಲಿ ತಪ್ಪು ತಿಳಿದುಕೊಳ್ಳುವನೋ ಎಂದು–

> "ನಾಪೂಜಿಸುವನ್ನಕ್ಕ ನೀ ದೇವ; ಎನ್ನ ಪೂಜೆಗೊಳಗಾದಲ್ಲಿ ನೀಭಕ್ತ, ನಾನಿತ್ಯನಯ್ಯ, ಮರೆಯದಿರು"

ಎಂದು ಎಚ್ಚರಿಸುತ್ತಿದ್ದನು. ಹೂಗಳು ಮರದಲ್ಲಿರುವವರೆಗೆ, ಬಳ್ಳಿಯಲ್ಲಿರುವವರೆಗೆ ಅವು ನಿನ್ನ ಹಂಗು. ಅಲ್ಲಿಯವರೆಗೆ ಅವು ನನ್ನವಲ್ಲ, ನಿನ್ನವು; ಆದರೆ ಉದುರಿಬಿದ್ದ ಮೇಲೆ ಅವು ನಿನ್ನವಲ್ಲ, ಮರದವಲ್ಲ, ಬಳ್ಳಿಯವಲ್ಲ, ನನ್ನವು. ಆಗ ಮಾತ್ರ ಅವುಗಳನ್ನು ನಾನು ನನ್ನವೆಂದು ನಿನಗರ್ಪಿಸಬಲ್ಲೆ. ಬಾಡಿದ ಹೂ ಬೇಡ, ಮರದ ಹೂವೇ ಬೇಕೆಂದು ನೀನು ಬಯಸಿದರೆ ನಿನ್ನಲ್ಲೂ ಆಸೆಮೂಡಿ ನೀನು ದೇವತ್ತ್ವ ಕಳೆದುಕೊಳ್ಳುವಿ– ನೀನೇ ಭಕ್ತನಾಗುವಿ. ನೆನಪಿರಲಿ, ಎಂದು ಎಚ್ಚರಿಸುವನು. ಶಿವನ ಕಲ್ಯಾಣಗುಣಗಳು ನೆನಪಾಗಿ,

"ಸರ್ವದಯಾವಸ್ತು ಬೀಜನಲಾ ನೀನು; ಮಲತ್ರಯ ದೂರನೆ,
ಸರ್ವಾಂಗ ಸಂತೋಷಿಯೇ, ನಿಗರ್ವಿಯೆ, ದಸರೇಶ್ವರ ಲಿಂಗವೇ–ತಥ್ಯ
ಮಿಥ್ಯವ ಬಿಟ್ಟೆನಗೆ ಕಾರುಣ್ಯ ಪ್ರಸಾದವ ಕರುಣಿಸಯ್ಯ !"

ಎಂದು ಕೋರುತ್ತಿದ್ದನು.

ಬರುಬರುತ್ತ ದಸರಯ್ಯನ ದಯಾದೃಷ್ಟಿ ವಿಶ್ವವ್ಯಾಪಕವಾಗುತ್ತ ನಡೆಯಿತು; ಅವನ ಅಹಿಂಸೆ ಅನಂತವಾಗುತ್ತ ನಡೆಯಿತು. ದಾರಿಯಲ್ಲಿ ನಡೆವಾಗ ಕೂಡ ಕ್ರಿಮಿಕೀಟಕಾದಿ ಜೀವಹತ್ಯೆಯಾದೀತೆಂದು ಮೆಲ್ಲನೆ ನಡೆಯುವನು; ಯಾರ ಮನಸ್ಸಿಗೂ, ಮೈಗೂ ನೋವಾಗದಂತೆ ಹಿತಕರವಾದುದನ್ನೇ ನುಡಿವನು, ಹಿತಕರವಾಗಿಯೇ ನಡೆವನು. ಬಲವಾಗಿ ಕೈ ಬೀಸಿದರೆಲ್ಲಿ ಗಾಳಿಯಲ್ಲಿರುವ ಅಗೋಚರ ಪ್ರಾಣಿಗಳಿಗೆ ಹಿಂಸೆಯಾಗುವುದೋ ಎಂದು ಕೈ ಬೀಸುವಾಗಲೂ ಎಚ್ಚರಿಕೆಯಿಂದ ಬೀಸುವನು. ಮಲಗುವಾಗ, ಕುಳಿತುಕೊಳ್ಳುವಾಗ, ಏಳುವಾಗ, ನಡೆವಾಗ, ನುಡಿವಾಗ – ಒಟ್ಟಿನಲ್ಲಿ ಉಸಿರಾಡಿಸುವಾಗಲೂ ತನ್ನಿಂದ ಹಿಂಸೆ ಜರುಗದಂತೆ ಅಹಿಂಸೆಯ ಅಪರಾವತಾರಿಯಾಗಿ ವರ್ತಿಸತೊಡಗಿದನು. ಇದಕ್ಕೆ ಈ ವಚನ ಸಾಕ್ಷಿ :

"ನುಡಿಯಲ್ಲಿ ಕಿಂಕರತ್ವವನರಿದು, ಕರವ ಬೀಸುವಲ್ಲಿ ತುಷಾರಕೀಟವ
ನರಿದು, ಅಡಿಯಿಡುವಲ್ಲಿ ಪೊಡವಿಯಲ್ಲಿ ಹೊರಹೊಮ್ಮಿದ ಜೀವನ ಚೇತ
ನಾದಿಗಳನರಿದು, ಮತ್ತೆ ಗಿಡವ ಹಿಡಿವಲ್ಲಿ, ಮತ್ತೊಂದ ಒಡಗೂಡುವಲ್ಲಿ
ಒಡಗೂಡಿ ಬಿಡುವಲ್ಲಿ ಸರ್ವದಯಕ್ಕೆ ಮುಡಿಮುಚ್ಚವಿಲ್ಲದಿರಬೇಕು! ಇಂತೀ
ಸಡಗರದ ಚಿತ್ತ ದಸರೇಶ್ವರ ಲಿಂಗವನೊಡಗೂಡುವ ಭಕ್ತಿ"

ಅವನ ಅಹಿಂಸೆ ಶ್ರದ್ಧೆಯಲ್ಲಿ ಉದ್ಭವಿಸಿದುದು ಮಾತ್ರವಲ್ಲ, ಬುದ್ಧಿಯಲ್ಲಿ ಬೆಳೆದುದೂ ಅಹುದು. ಅವನು ಕಂಡ ದಿವ್ಯದರ್ಶನವಿದು :

"ಸರ್ವವನರಿದಲ್ಲಿ, ಸರ್ವಜ್ಞನಾದಲ್ಲಿ ಇದಿರೆಲ್ಲ ತನ್ನಲ್ಲಿ, ತಾನೆಲ್ಲ ಇದಿರಲ್ಲಿ!
ತನ್ನ ಭಿನ್ನಭಾವ ಅನ್ಯರಲ್ಲಿ ತೋರಿ ಆ ಗುಣ ತನ್ನನೆ ಅನ್ಯವೆನಿಸುವುದು!
ತನ್ನಯ ಶಾಂತಿ ಅನ್ಯರಲ್ಲಿ ತೋರಿ ಅಲ್ಲಿ ಭಿನ್ನಭಾವವಿಲ್ಲದಿರೆ ಅವರನ್ಯರಲ್ಲ
–ಎಮ್ಮವರೆಂಬುರು. ಅದು ತನ್ನ ಗುಣ, ಅನ್ಯವಿಲ್ಲ ಎಂಬುದನರಿದಲ್ಲಿ
ತನ್ನೊಪ್ಪ ದರ್ಪಣದಲ್ಲಿ ತೋರುವಂತೆ. ಇದಕ್ಕೆ ಸಂದೇಹವಿಲ್ಲ.
ದಸರೇಶ್ವರ ಲಿಂಗವನರಿವುದಕ್ಕೆ."

ಇದೊಂದೇ ವಚನವನ್ನು ದಸರಯ್ಯ ಬರೆದು ಹೋಗಿದ್ದರೂ ವಚನ ಸಾಹಿತ್ಯದಲ್ಲಿ ಆತನಿಗೊಂದು ಸ್ಥಾನವಿದ್ದೇ ಇರುತ್ತಿದ್ದಿತೆಂದು ಹೇಳಬಹುದು. ಇದರಲ್ಲಿ ಮಾನವತೆಯ ಮೂಲಸೂತ್ರವನ್ನೇ ಬಿತ್ತರಿಸಿದ್ದಾನೆ ದಸರಯ್ಯ. ನಾವು ಯಾವ ರೂಪವಾಗಿರುವೆವೋ ಅದನ್ನೇ ದರ್ಪಣ ಪ್ರತಿಬಿಂಬಿಸುತ್ತದೆ. ಇನ್ನೊಬ್ಬರ ಮನದ ಮುಕುರದಲ್ಲಿ ನಾವು ಬೀರಿದ ಭಾವವೇ ಬಿಂಬಿಸುತ್ತದೆ. ತನ್ನವರು ಅನ್ಯರೆಂಬುದು ತನ್ನನ್ನೇ ಅವಲಂಬಿಸಿದೆ. ತಾನು ಎಲ್ಲರೂ ತನ್ನವರೆಂದು ತಿಳಿದರೆ ತನ್ನವರಾಗುತ್ತಾರೆ, ಅನ್ಯರೆಂಬುದು ತಿಳಿದರೆ ಅನ್ಯರಾಗುತ್ತಾರೆ. ಮುಖ್ಯವಾಗಿ ಬೇಕಾದುದು ಸಮದರ್ಶನ. ಸಮದರ್ಶನ ಸಿದ್ಧಿಸಿದರೆ ಸಹಜೀವನ ತಾನಾಗಿಯೇ ತಲೆದೋರುತ್ತದೆ. ಆ ಸಮದರ್ಶನವೇ ದಸರಯ್ಯನಾಗಿ ಹುಟ್ಟಿದ್ದಿತು :

"ಸರ್ವಮಯ ನೀನಾದಲ್ಲಿ ಆವುದನಹುದೆಂಬೆ? ಆವುದನಲ್ಲವೆಂಬೆ?
ಸರ್ವಚೈತನ್ಯ ನಿನ್ನ ತಂತ್ರಗಳಿಂದಾಡುವುವಾಗಿ ಆವುದು ಕಾಯುವೆ–
ಇನ್ನಾವುದ ಕೊಲುವೆ?"

ಎಂದು ಕೇಳುವ ದಸರಯ್ಯನವರ ದರ್ಶನವಿಶುದ್ಧಿಯನ್ನೇನು ವರ್ಣಿಸುವುದು?

ಇಷ್ಟು ಎಚ್ಚರದಿಂದ ನಡೆದರೂ ಹಿಂಸೆಯನ್ನು ಪೂರ್ಣವಾಗಿ ತಪ್ಪಿಸುವುದು ಸಾಧ್ಯವಾಗದುದನ್ನು ಕಂಡು ದಸರಯ್ಯನವರು ದುಃಖಿಸುತ್ತಾರೆ. ಹೊರಗಿನ ಜೀವಿಗಳನ್ನು ಹಿಂಸಿಸದೆ ಹೇಗಾದರೂ ಬದುಕಬಹುದು. ಆದರೆ ತನ್ನ ತನುವಿನಲ್ಲಿಯೇ ಹುಟ್ಟಿ, ಶರೀರ ಧರ್ಮದಿಂದ ಸಾಯುವ ಕ್ರಿಮಿಜಂತುಗಳ ಹಿಂಸೆಯನ್ನು ಹೇಗೆ ಹೋಗಲಾಡಿಸುವುದು?

"ಎಲು, ನರ, ಚರ್ಮ, ಮಜ್ಜೆ, ಮಾಂಸದೊಳಗಾದ ಕ್ರಿಮಿ ಎನ್ನಂಗ
ದೊಳು ಹುಟ್ಟಿ ಮಲ, ಹುಣ್ಣು, ಹುಗುಳುಗಳಲ್ಲಿ ಬೀಳುವುದ ಕಂಡು
ಅವನು ನಾ ರಕ್ಷಿಸಿದೆನೆ? ಅವು ಬೀಳಬೇಕೆಂದು ನಾ ಶಿಕ್ಷಿಸಿದೆನೆ?
ಇಂತಿಜೀವದ ದೃಷ್ಟವ ಕಂಡು ಎನಗಿದೆತ್ತಣ ಸರ್ವಜೀವದಯೆ?
ಇದರ ಲೇಪನ ಬಿಡಿಸಾ ಚನ್ನದಸರೇಶ್ವರಲಿಂಗಾ!"

ಎಂದು ಮೊರೆಯಿಡುತ್ತಾರೆ. ಅವರು ಕಂಡ ಜೀವ ದೃಷ್ಟ–ಜೀವನದ ದೃಶ್ಯ ಜೀವಿ ಜೀವವ ತಿಂದು ಜೀವಿಸುವ ಜೀವನ ದೃಶ್ಯ ನಿಜವಾಗಿಯೂ

ಮೈ ನಡುಗಿಸುವಂಥಹುದು! ಇಂಥ ಜೀವನ ಸಂಗ್ರಾಮದಲ್ಲಿ ನಾನು ಸರ್ವಜೀವದಯಾಭರಿತನಾಗಿ ಬದುಕಲಾರೆ, ಈ ಹಿಂಸಾಮಯವಾದ ಜೀವನದಿಂದ ಬೇಗ ಮುಕ್ತನನ್ನಾಗಿ ಮಾಡು–ಎಂಬುದನ್ನು ಬೇಡಿಕೊಳ್ಳುವ ದಸರಯ್ಯನ ದಯಾದ್ರ್ಯ ಹೃದಯಕ್ಕೆ ನಮೋ, ನಮೋ ಎನ್ನಬೇಕೆನಿಸುತ್ತದೆ!

ಇಂಥ ಅಹಿಂಸೆಯ ಮೂರ್ತಿಗೂ ಹಿಂಸೆ ತಪ್ಪಲಿಲ್ಲ ಈ ಕ್ರೂರ–ಕುಟಿಲ–ಕುಹುಕ ಲೋಕದಲ್ಲಿ. 'ಇವನ ಅಹಿಂಸೆಯನ್ನೊಮ್ಮೆ ಒರೆಗೆ ಹಚ್ಚಿ ನೋಡಲೇಬೇಕು' ಎಂದು ಸಿದ್ಧರಾದರು ಕೆಲವು ಮಲಿನ ಮತಿಗಳು. ಅವರು ಸಿದ್ಧರಾದರೆನ್ನುವುದಕ್ಕಿಂತ ಶಿವನವರನ್ನು ಸಿದ್ಧಮಾಡಿದ–ದಸರಯ್ಯನ ಕೊನೆಯ ಪರೀಕ್ಷೆಗೆ, ಎಂದು ಬೇಕಾದರೆ ಹೇಳಬಹುದು.

ಆ ಊರಲ್ಲಿ ಒಬ್ಬ ದುರಾತ್ಮನಿದ್ದನು. ಕಳುವು ಮಾಡಿ ಸಿಕ್ಕು ಕೈ ಕಡಿಸಿಕೊಂಡಿದ್ದ ಅವನ ಹೆಸರು ಮೋಟ ಮಲ್ಲುಗ.

ಪರಪೀಡೆಯೇ ಕ್ರೀಡೆಯಾಗಿದ್ದ ಆ ಸುಜನೋಪದ್ರವಜೀವಿಗಳು ದಸರಯ್ಯನ ಸತ್ವ ಪರೀಕ್ಷೆಗಾಗಿ ಆ ಮೋಟ ಮಲ್ಲುಗನನ್ನು ಹುರಿದುಂಬಿಸಿದರು. ಅವನೂ ಆನಂದದಿಂದ ಒಪ್ಪಿಕೊಂಡ. ಕೈ ಕಡಿಸಿಕೊಂಡಿದ್ದರೂ ಅವನ ಮನಕ್ಕೆ ಬೆಳೆದಿದ್ದ ಪಾಪದ ಕೈಗಳಿನ್ನೂ ಮೊಂಡಾಗಿರಲಿಲ್ಲ. ಆ ಕೇಡಿಗಳೆಲ್ಲ ಸೇರಿ ಮೋಟ ಮಲ್ಲುಗನ ಮಂಡೆ ಬೋಳಿಸಿ ಅವನಿಗೆ ಕಾವಿ ಉಡಿಸಿದರು, ಭಸ್ಮ ಬಳಿದರು, ರುದ್ರಾಕ್ಷಿ ಸರ ಸ್ತುತಿದರು, ಸುಳ್ಳು ಸನ್ಯಾಸಿಯನ್ನಾಗಿ ಮಾಡಿದರು. ಬರಿದಾದ ಲಿಂಗದ ಕಾಯಿಯನ್ನು ಕೊರಳಿಗೆ ಕಟ್ಟಿ ಕಪಟ ಜಂಗಮವನ್ನಾಗಿ ಮಾಡಿ ಕಳಿಸಿದರು.

ಮೋಟ ಮಲ್ಲುಗ ಬಂದು ವಂದಿಸಿದ ದಸರಯ್ಯನನ್ನು ನೆವವಿಲ್ಲದೆ ತನ್ನ ಮೋಟುಗೈಗಳಿಂದ ಗುದ್ದತೊಡಗಿದನು. ಆಗ ದಸರಯ್ಯನ ಅಹಿಂಸೆ ಅಗ್ನಿಪರೀಕ್ಷೆಗೆ ಗುರಿಯಾಯಿತು. ನಿಷ್ಕಾರಣವಾಗಿ ತನ್ನನ್ನು ಹಿಂಸಿಸತೊಡಗಿದ್ದ ಆ ದುಷ್ಟನನ್ನು ದಂಡಿಸುವುದು ಧರ್ಮವಲ್ಲವೆ? ಅಧರ್ಮಿಗಳೊಡನೆಯೂ ಧರ್ಮದಿಂದ ನಡೆಯಬೇಕೆ? ಹಿಂಸಾಕರ್ಮವನ್ನೂ ಅಹಿಂಸೆಯಿಂದ ತಾಳಿಕೊಳ್ಳಬೇಕೆ? ಇತ್ಯಾದಿ ಪ್ರಶ್ನೆಗಳು ದಸರಯ್ಯನ ದಯಾಬುದ್ಧಿಯನ್ನೂ ಕೆಣಕಿ ಕಲಕಿರಬೇಕು. ಎಂತಲೇ ಈ ವಚನವನ್ನುವನು ಉಸಿರಿದ್ದಾನೆ :

"ಸರ್ವಜೀವ ನಿನ್ನಹಾಹೆ ಎಂಬೆನೆ? ಅದು ಭಿನ್ನಭಾವ ! ತ್ರಿಗುಣಾತ್ಮಕರುಂಟು : ಅವರು ನಿನಗನ್ಯರೆಂಬೆನೆ? ಆ ತ್ರಿಗುಣಾತ್ಮಕರೂ ನಿನ್ನ ತಿಲಾಂಶ ! ಇಂತೀ ಸರ್ವಭೂತಕ್ಕೆ ನಿನ್ನ ದಯೆ. ಎನಗಿದೇತಕ್ಕೆ ಗೆಲ್ಲ ಸೋಲವೆಂಬ ಖುಲ್ಲತನ? ಎಲ್ಲ ಜೀವಕ್ಕೂ ಸರಿ. ಅದು ಅರುಣೋದಯದಂತೆ ! ಎನ್ನ ಚಿತ್ತದಲ್ಲಿ ಸರ್ವಜೀವಕ್ಕೆಲ್ಲಕ್ಕೂ ದಯೆಯನೇ ಮಾಡು, ಚೆನ್ನ ದಸರೇಶ್ವರಲಿಂಗಾ!"

ಧನ್ಯ ದಸರಯ್ಯ ! ನಿನ್ನಂಥ ಅಹಿಂಸಾಮೂರ್ತಿಗಳು ಶತಮಾನಕ್ಕೊಬ್ಬರು! "ಜೀವಿಗಳೆಲ್ಲ ತ್ರಿಗುಣಾತ್ಮಕರು. ಆ ತ್ರಿಗುಣಾತ್ಮಕರೂ ಶಿವನ ತಿಲಾಂಶರೇ ! ಅವರು ಅನ್ಯರೆ? ಮೋಟ ಮಲ್ಲುಗ ತ್ರಿಗುಣಗಳಲ್ಲೊಂದಾದ ತಾಮಸದಿಂದ ಈ ತಾಮಸೀ ಕೃತ್ಯ ನಡೆಸಿದ್ದಾನೆ. ಅವನು ಗೆದ್ದ, ನಾನು ಸೋತೆನೆಂಬ ಖುಲ್ಲತನ ನನಗೇಕೆ? ಸರ್ವ ಭೂತಗಳಿಗೂ ಶಿವನ ದಯೆ ಸಮಾನವಾಗಿದೆ. ಅದು ಅರುಣೋದಯದಂತೆ. ಪಾಪಿಗಳು ಪುಣ್ಯವಂತರೆನ್ನದೆ, ಗುಡಿ–ಗುಡಿಸಲುಗಳೆನ್ನದೆ ಎಲ್ಲರ ಮೇಲೂ ತನ್ನ ಬಂಗಾರದ ಬೆಳಕನ್ನು ಚೆಲ್ಲುವ ಬಾಲದಿನಮಣಿಯಂತೆ ಶಿವನ ಕರುಣೆ. ಅದುದರಿಂದ ಶಿವನೆ, ನನ್ನ ಚಿತ್ತದಲ್ಲಿ ಸರ್ವ ಜೀವಕ್ಕೆಲ್ಲ ದಯೆಯೊಂದೆ ಉಳಿಯುವಂತೆ ಅನುಗ್ರಹಿಸು!" ಎಂದು ಮೋಟ ಮಲ್ಲುಗನಿಂದ ಮೈಯೆಲುವು ಮುರಿಯುವಂತೆ ಗುದ್ದಿಸಿಕೊಳ್ಳುತ್ತಲಿರುವಾಗಲೂ ಕೇಳಿಕೊಂಡ ದಸರಯ್ಯ, ಅಹಿಂಸೆಗೊಂದು ಹೆಸರಾಗಿ ಉಳಿದ.

ಹೊಡೆದು ಹೊಡೆದು ಸಾಕಾಗಿ ಸುಮ್ಮನಾದ ಮೋಟ ಮಲ್ಲುಗ. ದಸರಯ್ಯ ಧಾವಿಸಿ, 'ಅಣ್ಣಾ, ನಿನ್ನ ಕೈಗಳೆಷ್ಟು ನೊಂದುವಲ್ಲ! ಏಕೆ ಇಷ್ಟು ಬಳಲಿದೆ?' ಎನ್ನುತ್ತ ಅವನ ಕೈಗಳನ್ನು ಕಾಲುಗಳನ್ನು ಮೆತ್ತಗೆ ಒತ್ತಹತ್ತಿದನು. ಮೋಟ ಮಲ್ಲುಗನ ಕಲ್ಲೆದೆ ಕರ್‍ರನೆ ಕರಗಿ ಹರಿಯಿತು. ದಸರಯ್ಯನ ಕಾಲಿಗೆ ಬಿದ್ದು ಕ್ಷಮಿಸೆಂದು ಕೋರಿದನು. ಕಪಟವೇಷದ ಜಂಗಮ ನಿಜವಾದ ಜಂಗಮನಾಗಿ ಮಾರ್ಪಟ್ಟನು. ದಸರಯ್ಯನ ಕೀರ್ತಿ ದಶದಿಕ್ಕುಗಳಿಗೆ ಹರಡಿತು.

ದಸರಯ್ಯನ ಧರ್ಮಪತ್ನಿ ವೀರಮ್ಮ ಅವಳೂ ಶಿವಾನುಭವಿ, ಶರಣೆ, ಸುಕೃತಾಚರಣೆ, ಗುಣಮಣಿಭರಣೆ ! ಪರಮಾರ್ಥಕ್ಕೊಲಿದ ಪತಿಗಳಿಗೆ ಪ್ರತಿಕೂಲಸತಿಯರು ಸಿಕ್ಕುವುದು ಅಪರೂಪವೇನಲ್ಲ. ಆದರೆ ಶರಣರ ಜೀವನದಲ್ಲಿ ಇಂಥ ಉದಾಹರಣೆ ವಿರಳ. ಘಟ್ಟಿವಾಳಯ್ಯನೊಬ್ಬ ಅಪವಾದ.

ವೀರಮ್ಮನೂ ವಚನಕಾರಳು. 'ಗುರುಶಾಂತೇಶ್ವರಾ' ಎಂಬುದವಳ ಅಂಕಿತ. ಶರಣೆಯರಲ್ಲಿ ಸಾಮಾನ್ಯವಾಗಿ ಪತಿಯ ಅಂಕಿತಕ್ಕೇ 'ಪ್ರಿಯ' ಶಬ್ದವನ್ನು ಸೇರಿಸಿ, ತಮ್ಮ ಅಂಕಿತವನ್ನಾಗಿ ಅಂಗೀಕರಿಸುವುದು ಹೆಚ್ಚು. ವೀರಮ್ಮ ಪತಿಗೆ ಭಿನ್ನವಾದ ಅಂಕಿತವನ್ನು ಅಂಗೀಕರಿಸಿರುವುದರಿಂದ ಗುರುಶಾಂತೇಶ್ವರ ಇಲ್ಲವೇ ಶಾಂತೇಶ್ವರ ಅವಳ ಗುರುವಾಗಿರಬೇಕು.

ವೀರಮ್ಮ ಪಾದೋದಕದ ವಿಚಾರದಲ್ಲಿ ಪರಿಣತಳೆಂದು ತೋರುತ್ತದೆ. ಉಪಲಬ್ಧವಾದ ಅವಳ ಒಂದೆರಡು ವಚನಗಳಲ್ಲಿ ಪಾದೋದಕ ವಿಚಾರವೇ ತುಂಬಿದೆ. ಆದರೂ, 'ಮನವೇ ಲಿಂಗ, ಬುದ್ಧಿಯೇ ಶಿವಜ್ಞಾನ, ಚಿತ್ತವೇ ಶಿವದಾಸೋಹ, ಅಹಂಕಾರದಲ್ಲಿ ಶಿವಚಿಂತೆಯುಳ್ಳವನಾಗಿ ಸಲ್ಲಿಸಿದ್ದೇ ಅಂತಃಕರಣ ವಿರಹಿತದ ಪ್ರಸಾದ' ಎಂದು ಮುಂತಾಗಿ ಅವಳು ಹೇಳುವಾಗ ಅವಳ ಆತ್ಮಶ್ರೀ ಅರಳಿ ಮಗಮಗಿಸುತ್ತದೆ.

ದಸರಯ್ಯ-ವೀರಮ್ಮ, ಇಬ್ಬರೂ ನಿರ್ಮಲಜೀವನ ನಡೆಸಿ, ನಿರವಯಲಾದರು; ಶರಣರ ತಾರಾಗಣದಲ್ಲಿ ತೊಳಗಿ ಬೆಳಗುವ ತಾರೆಗಳಾದರು. ದಸರಯ್ಯನ ದಯಾಮಯ ಹೃದಯದಿಂದ ಹರಿದು ಬಂದ ಈ ವಚನ ನೆನಪಿರಲಿ :

> "ಎಲ್ಲವನರಿವಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು ಭೇದ ಉಂಟೆ! ಶಾಸ್ತ್ರವನೆಲ್ಲ ಕಲಿತಲ್ಲಿ ಗೆಲ್ಲ ಸೋಲಕ್ಕೆ ಹೋರಬೇಕೆಂಬುದು ಕಡೆಯಲ್ಲಿ ಒಂದು ಸೊಲ್ಲುಂಟೆ? ಪುರಾಣವನೆಲ್ಲವನೋದಿದಲ್ಲಿ ಸರ್ವಜೀವವ ಕೊಲ್ಲು, ಕೊರೆ-ಎಂಬುದೊಂದು ದಳ್ಳುರಿಯುಂಟೆ? ಶ್ರುತಿಯ ಕೇಳುವಲ್ಲಿ, ಸ್ಮೃತಿಯನಂಗೀಕರಿಸುವಲ್ಲಿ ಸರ್ವಹತವ ಮಾಡಬೇಕೆಂಬುದೊಂದು ಗತಿಯುಂಟೆ? ಇಂತೀ ಆತ್ಮದಲ್ಲಿ ಸರ್ವಭೂತಹಿತವುಳ್ಳವಂಗೆ ಆತ ಅತೀತ ಸ್ವಯವಸ್ತು-ದಸರೇಶ್ವರಲಿಂಗವು !"

■

# ಸಂಕೀರ್ಣ

## ಆಶಯ :

## 1. ಕ್ಲೈಮಾಕ್ಸ್

– **ಅನುಪಮಾ ನಿರಂಜನ**

"ನಮಸ್ಕಾರ ತಾಯಿ", ಎಂದ ಬಂದಾತ.

ತಲೆಯೆತ್ತಿ ನೋಡಿದೆ. ಸುಮಾರು ಐದಡಿ ಎತ್ತರದ ಸ್ಥೂಲಕಾಯದ ಪೊದೆಗೂದಲಿನ ಯುವಕ. ಹಣೆಯಲ್ಲಿ ಕೆಂಪು ಕುಂಕುಮವಿತ್ತು.

"ನನ್ನ ಗುರುತು ಸಿಗಲಿಲ್ವೆ? ನಾನು ರಾಘವೇಂದ್ರ, ಪುಟ್ಟಣ್ಣಾಜಿಯವರ ಶಿಷ್ಯ. ಅವರ ಎಷ್ಟೋ ಚಿತ್ರಗಳಲ್ಲಿ ಸಹಾಯಕನಾಗಿ ಕೆಲಸ ಮಾಡಿದೀನಿ." ಸಿನಿಮಾದವರು ಅಂದ ಕೂಡಲೇ ನನ್ನ ಕಿವಿ ನಿಗುರಿತು. "ಕೂತ್ಕೊಳ್ಳಿ" ಎಂದು ಉಪಚರಿಸಿದೆ.

"ನಾನು ಬಂದ ಕೆಲ್ಸ ಹೇಳಿಬಿಡ್ತೀನಿ. ಮದ್ರಾಸಿನ ಎ.ವಿ.ಎಂ. ಸ್ಟುಡಿಯೋ ಹೆಸ್ರು ನೀವು ಕೇಳಿರ್ಬೇಕು. ಅದರ ಡೈರೆಕ್ಟರ್ ರಾಜನ್ ನಿಮಗೆ ಗೊತ್ತಿರಬಹುದು..."

"ಇಲ್ಲ" ಎಂದೆ ತುಸು ಸಂಕೋಚದಿಂದ.

"ರಾಜನ್ ಅವರು ಒಂದು ಸಿನಿಮಾ ತಯಾರಿಸಬೇಕೂಂತಿದ್ದಾರೆ. ಒಂದು ಒಳ್ಳೆಯ ಕನ್ನಡ ಕಾದಂಬರಿ ನೋಡ್ಕೊಂಡು ಬಾ ಅಂತ ನನ್ನ ಕಳ್ಸಿದ್ದಾರೆ. ನಾನು ಯಾವಾಗ್ಲೂ ನಿಮ್ಮ ಅಭಿಮಾನಿ. ನಿಮ್ಮನ್ನು ವಿಚಾರಿಸಿಕೊಂಡು ಹೋಗೋಣಾಂತ ಬಂದೆ."

"ಬೇರೆಲ್ಲ ಲೇಖಕ ಲೇಖಕಿಯರನ್ನು ಬಿಟ್ಟು ಈತ ನನ್ನಲ್ಲಿಗೆ ಬಂದುದಕ್ಕೆ ನನಗೆ ಹೆಮ್ಮೆ ಎನಿಸಿತು. ಹಾಗಾದರೆ ನಾನು ದೊಡ್ಡ ಲೇಖಕಿ" ಎಂದು ಮನಸ್ಸಿಗೆ ಖಾತರಿ ಮಾಡಿಕೊಂಡೆ.

"ರಾಜನ್ ಚಿತ್ರ ತಯಾರಿಸಿದರೆ ಮೂರು ಭಾಷೆಗಳಲ್ಲಿ ತಯಾರಿಸ್ತಾರೆ. ಲೇಖಕರಿಗೆ ಬಹಳ ಕಡಿಮೆ ಅಂದರೆ ಮೂವತ್ತು ಸಾವಿರ ರೂಪಾಯಿ

ಕೊಡೋದು ಅವರ ನೀತಿ. ಒಂದ್ವೇಳೆ ಕಾದಂಬರಿ ಅವರಿಗೆ ಇಷ್ಟವಾಗಿಬಿಟ್ರೆ ಇನ್ನೂ ಜಾಸ್ತಿ ಕೊಡಬಹುದು."

ಇಂಥ ಒಳ್ಳೆಯ ಅವಕಾಶ ಸಿಕ್ಕಿರುವಾಗ ಸುಮ್ಮನೆ ಬಿಡಬಾರದು. ನನ್ನ ಕಾದಂಬರಿಯೊಂದನ್ನು ಇವನ ತಲೆಗೆ ಕಟ್ಟಲೇ ಬೇಕು ಎಂದು ಯೋಚಿಸುತ್ತಾ, ನನ್ನ ಯಾವ ಕಾದಂಬರಿ ನಿಮಗಿಷ್ಟ? ಎಂದು ಕೇಳಿದೆ.

ರಾಘವೇಂದ್ರ ವಿನಯದ ನಗೆ ನಗುತ್ತಾ,

"ಸಿನಿಮಾ ಆಗೋದಕ್ಕೆ ಯಾವುದು ಯೋಗ್ಯ ಅನ್ನೋದನ್ನ ನೀವೇ ಹೇಳಿಬಿಟ್ರೆ ಉಪಕಾರವಾಗುತ್ತೆ" ಎಂದ.

ಹಾಗೆ ಹೇಳಿ ಲೇಖಕರ ವರ್ಚಸ್ಸು ಕಡಿಮೆ ಮಾಡಿ ಕೊಳ್ಳೋದು ಸರಿಯಲ್ಲ ಎಂಬಂಶ ನನ್ನ ಗಟ್ಟಿ ತಲೆಗೆ ಹೊಳೆಯಲಿಲ್ಲ. ನನ್ನ ಒಂದು ಕಾದಂಬರಿಯ ಕತೆ ಹೇಳತೊಡಗಿದೆ.

"ನೋಡಿ, ಇದೊಂದು ಪ್ರೇಮದ ಕಥೆ, ನಾಯಕ ನಾಯಕಿ ಬೇರೆ ಬೇರೆ ಜಾತಿಗೆ ಸೇರಿದೋರು. ಆಡುವ ಭಾಷೆಯೂ ಬೇರೆ ಬೇರೆ. ಹುಡುಗಿ ಬೆಂಗಳೂರಿನವಳು. ಹುಡುಗ ಮದ್ರಾಸಿನವನು..."

"ಸೊಗಸಾಯ್ತು ಬಿಡಿ, ಬೆಂಗಳೂರು, ಮದ್ರಾಸುಗಳಲ್ಲಿ ಶೂಟಿಂಗ್ ಮಾಡ್ಬಹುದು."

ಇವರ ಮದುವೆಗೆ ಸಹಜವಾಗೇ ಮನೆಯ ಹಿರಿಯರಿಂದ ಪ್ರತಿಭಟನೆ ಬರುತ್ತೆ. ಪ್ರೇಮಿಗಳು ಅವನ್ನೆಲ್ಲ ಎದುರಿಸಿ ಮದುವೆಯಾಗ್ತಾರೆ. ಈ ಕಾದಂಬರಿ ಪ್ರಕಟವಾದಾಗ ಭಾರೀ ಜನಪ್ರಿಯತೆ ಗಳಿಸಿತ್ತು.

ರಾಘವೇಂದ್ರನ ಮುಖ ಅರಳುವ ಬದಲು ನಿರಿಗೆಗಟ್ಟಿತು.ಅದನ್ನು ಮೇಲುಧ್ವನಿಯಲ್ಲಿ ಕೇಳಿದ.

"ಅದು ಸರಿ, ಕಾದಂಬರಿಯ ಕ್ಲೈಮಾಕ್ಸ್ ಏನು?"

ನಾನು ಬೆಪ್ಪಾಗಿ ಕೂತೆ, ಸಿನಿಮಾ ತಂತ್ರಗಳು ಲೇಖಕಿಗೆ ಹೇಗೆ ಗೊತ್ತಿರಬೇಕು?

"ನಾನು ಬರೆದಿರೋದೇ ಹೀಗೆ, ಬೇಕಾದ್ರೆ ತಗೊಳ್ಳಿ. ಇಲ್ದಿದ್ರೆ ಬಿಟ್ಬಿಡಿ."

"ಹೋಗ್ಲಿ ಬಿಡಿ. ಕ್ಲೈಮಾಕ್ಸ್ ನಾನೇ ಬರ್ಕೊತೀನಿ" ಎಂದ ರಾಘವೇಂದ್ರ.

ನನಗೆ ಸಿಟ್ಟು ಬಂತು. ನನ್ನ ಕಾದಂಬರಿಗೆ ಇವನು ಕ್ಲೈಮಾಕ್ಸ್ ಬರೆಯುವುದು ನನಗೇನೂ ಸರಿ ಕಾಣಲಿಲ್ಲ.

"ಹೋಗ್ಲಿ ಬಿಡಿ. ಬೇರೆ ಕಾದಂಬರಿ ಕತೆ ಹೇಳ್ತೀನಿ. ಇದು ವೈದ್ಯನೊಬ್ಬನ ಕತೆ. ಅವನು ಹೃದಯತಜ್ಞ, ಬಾಲ್ಯದಲ್ಲಿ ಪ್ರೀತಿಸಿದ ಹುಡುಗಿಯ ಕೈಬಿಟ್ಟು ಬೇರೆ ಶ್ರೀಮಂತ ಕನ್ಯೆಯನ್ನು ವಿವಾಹವಾಗಬೇಕಾಗುತ್ತೆ. ಆದರೆ ಮುಂದೆ ಅವನ ಬಾಲ್ಯದ ಗೆಳತಿ ಹೃದಯದ ತೊಂದರೆಯಿಂದ ಅವನ ಬಳಿಗೇ ಬಂದು ಆಪರೇಷನ್ ಮಾಡಿಸಿಕೊಳ್ಳುತ್ತಾಳೆ. ಅವರ ಪ್ರೇಮ ಮತ್ತೆ ಚಿಗುರುತ್ತೆ. ಹೆಂಡತಿಯಿಂದ ಬೇರ್ಪಟ್ಟ ಅವನು ಪ್ರೇಯಸಿಯ ಬಳಿ ಬಂದು 'ನಿನ್ನನ್ನೇ ವಿವಾಹವಾಗ್ತೀನಿ' ಎಂದಾಗ ಅವಳು ಸಂತೋಷ ತಡೀಲಾರದೆ ಸಾಯುತ್ತಾಳೆ..."

ರಾಘವೇಂದ್ರ ಮೇಲೆದ್ದು ಗಟ್ಟಿಯಾಗಿ ಹೇಳಿದ.

"ಕ್ಲೈಮಾಕ್ಸ್ ಸಿಕ್ಕಿತು ಬಿಡಿ. ಈ ಕಾದಂಬರಿ ಚಲನಚಿತ್ರ ಆದ್ರೆ ಇಡೀ ದಕ್ಷಿಣಭಾರತದಲ್ಲಿ ಜಯಭೇರಿ ಹೊಡೆಯುತ್ತೆ."

ಸಂಭ್ರಮದಿಂದ ನನ್ನ ಮುಖ ಊರಗಲವಾಯಿತು. ರಾಘವೇಂದ್ರನೆಂದ;

ಈ ಕಾದಂಬರೀನ ನಮಗೋಸ್ಕರ ಇಟ್ಬಿಡಿ. ಮುಂದಿನ ತಿಂಗಳು ರಾಜನ್ ಅವರನ್ನ ಕರ್ಕೊಂಡು ಬರ್ತೀನಿ. ಕಾಂಟ್ರಾಕ್ಟ್‌ಗೆ ಸಹಿ ಹಾಕಿದ ದಿನವೇ ಅವರು ಹಣವನ್ನೆಲ್ಲಾ ಕೊಟ್ಟುಬಿಡ್ತಾರೆ, ಅಂದಾಗೆ ಮುಂದಿನ ತಿಂಗಳು ಮೂರನೇ ತಾರೀಕು ನಿಮಗೆ ಬಿಡುವಾಗಿದೆ ತಾನೆ?

ಆತ ಕೇಳಬೇಕಾದ ಅಗತ್ಯವೇ ಇರಲಿಲ್ಲ. ನಾನಾಗಲೇ ಮನಸ್ಸಿನಲ್ಲೇ ಅಂದಿನ ಎಲ್ಲ ಕಾರ್ಯಕ್ರಮಗಳನ್ನು ರದ್ದುಪಡಿಸಿದ್ದೆ.

ರಾಘವೇಂದ್ರ 'ಆಶೀರ್ವಾದ ಮಾಡಿ ತಾಯಿ" ಎಂದು ನನಗೆ ಉದ್ದಂಡ ನಮಸ್ಕಾರ ಹಾಕಿದ. "ಮದ್ರಾಸಿಗೆ ನೀವು ಬಂದಾಗ ನಂಗೆ ತಿಳಿಸಬೇಕು. ನಮ್ಮ ಮನೆಗೆ ಕರ್ಕೊಂಡು ಹೋಗಿ ಸೊಗಸಾದ ಪಾಯಸ, ಬಿಸಿ ಬೇಳೆಭಾತ್ ಮಾಡಿ ಹಾಕ್ತೀನಿ" ಎಂದ.

ಅವನ ಹೃದಯವಂತಿಕೆಗೆ ನಾನು ಮಾರುಹೋದೆ. ಸಿನಿಮಾ ಮಂದಿಯಲ್ಲಿ ಸಾಧಾರಣವಾಗಿ ಇಂಥ ಪ್ರೀತಿ ವಿಶ್ವಾಸಗಳಿರುವುದಿಲ್ಲವಲ್ಲ.

“ಗುರು ರಾಘವೇಂದ್ರರ ಕೃಪೆಯಿಂದ ಇಂಥ ಒಳ್ಳೆ ಕಾದಂಬರಿ ನಂಗೆ ಸಿಕ್ತು. ಇವತ್ತು ರಾತ್ರಿ ಮಂತ್ರಾಲಯಕ್ಕೆ ಹೋಗಿ, ನಾಳೆ ಪೂಜೆ ಮಾಡಿಸ್ಕೊಂಡು ಮದ್ರಾಸಿಗೆ ಹೋಗ್ತೀನಿ”.

“ಹೋಗ್ಬನ್ನಿ, ನಿಮಗೆ ಒಳ್ಳೆಯದಾಗಲಿ” ಎಂದೆ ಖುಷಿಯಿಂದ.

ಮೆಟ್ಟಲು ಇಳಿಯುತ್ತಿದ್ದ ರಾಘವೇಂದ್ರ ಫಕ್ಕನೆ ನಿಂತು ಮೆಲ್ಲಗಿನ ಧ್ವನಿಯಲ್ಲಿ ಕೇಳಿದ.

“ಅಮ್ಮಾ, ಒಂದು ವಿಷ್ಯ ಕೇಳ್ಬೇಕೂಂತ. ಸಂಕೋಚವಾಗುತ್ತೆ, ನೋಡಿ ನಿಮ್ಮನೆಗೆ ಬರ್ತಾ ಬಸ್ಸಿನಲ್ಲಿ ನನ್ನ ಜೇಬಿನಲ್ಲಿದ್ದ ಪರ್ಸನ್ನು ಯಾರೋ ಹಾರಿಸಿಬಿಟ್ಟಿದ್ದಾರೆ. ಒಂದು ಮುನ್ನೂರು ರೂಪಾಯಿ ಕೊಟ್ಟಿದ್ರೆ ಉಪಕಾರವಾಗ್ತಿತ್ತು. ಮದ್ರಾಸ್ ತಲುಪಿದ ಕೂಡಲೇ ಎಂ.ಓ. ಕಳಿಸ್ತೀನಿ.”

ಅಯ್ಯೋ ಪಾಪವೇ ಅನಿಸಿತು. ಜೇಬುಗಳ್ಳರನ್ನು ಮನದಲ್ಲೇ ಶಪಿಸಿದೆ. ಮುಂದಿನ ತಿಂಗಳು ಮೂವತ್ತು ಸಾವಿರ ಕೈಗೆ ಬರುವುದರಲ್ಲಿರುವಾಗ, ಈಗ ಕೊಡುವ ಮುನ್ನೂರು ಯಾವ ಲೆಕ್ಕ ಅನಿಸಿತು. ಒಳ ಹೋಗಿ ಕಪಾಟು ತೆಗೆದಾಗ ಬರೀ ನೂರು ರೂಪಾಯಿ ಇತ್ತು ಅದನ್ನೇ ತಂದು ಕೊಟ್ಟೆ.

‘ಈ ಉಪಕಾರ ತೀರ್ಸೋಕೆ ಆಗಲ್ಲ,” ಎಂದು ಧೃಢವಾದ ಹೆಜ್ಜೆ ಹಾಕುತ್ತಾ ರಾಘವೇಂದ್ರ ನಡೆದ. ಗೇಟಿನ ಬಳಿ ನಿಂತು ಮತ್ತೆ ನಮಸ್ಕರಿಸಿ, “ಮುಂದಿನ ತಿಂಗಳು ಮೂರನೇ ತಾರೀಕು ಮರೀಬೇಡಿ” ಎಂದ.

ಅವನು ಹೊರಟು ಹೋದ. ನಾನು ಹಿಗ್ಗಿನಿಂದ ಮನೆಯೊಳಗೆ ಬಂದೆ. ಮೂವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಬಗೆ ಹೇಗೆ? ಎಂದು ಕಲ್ಪನಾ ವಿಹಾರ ಮಾಡತೊಡಗಿದೆ. ಆ ಹಿಗ್ಗಿನಲ್ಲಿ ದಿನ ಕಳೆದುದೇ ಗೊತ್ತಾಗಲಿಲ್ಲ.

ರಾಘವೇಂದ್ರ ಹೇಳಿದ ಮೂರನೇ ತಾರೀಕು ಕಳೆದು ಈಗ ಮೂರು ವರ್ಷಗಳೇ ಸಂದಿವೆ. ಮೂರರಿಂದ ಆರಂಭವಾಗುವ ಹಣಕ್ಕಾಗಿ ಕಾಯುವುದು ಎಂತಹ ಪೆಚ್ಚುತನ ಎನ್ನುವುದು ನನ್ನ ‘ದಡ್ಡ’ ತಲೆಗೆ ಇನ್ನೂ ಹೊಳೆದಿಲ್ಲ.

■

# 2. ಚಿಪ್ಕೋ ಚಳುವಳಿ

## (ಸ್ವತಂತ್ರ ವಿಶ್ವಕೋಶ, ವಿಕಿಪೀಡಿಯದಿಂದ ಆಯ್ದ ಭಾಗ)

**– ಸುಂದರಲಾಲ್ ಬಹುಗುಣ**

ಚಿಪ್ಕೋ ಚಳುವಳಿ ಅಥವಾ ಚಿಪ್ಪೋ ಆಂದೋಲನ ಎಂಬುದು ಮಹಾತ್ಮ ಗಾಂಧಿಯವರ ಮೂಲಮಂತ್ರಗಳಾದ ಸತ್ಯಾಗ್ರಹ ಮತ್ತು ಅಹಿಂಸೆಗಳ ಮೂಲಕ ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಮರ ಕಡಿಯುವುದರ ಬಗ್ಗೆ ಅಸಹಕಾರ ತೋರಿಸಿದ ಪ್ರಮುಖ ಚಳಿವಳಿಯಾಗಿದೆ. ಚಿಪ್ಕೋ ಚಳುವಳಿಯು ಮೊದಲಿಗೆ 1970ರಲ್ಲಿ ಉತ್ತರಖಂಡದ ಗರ್ವಾಲಹಿಮಾಲಯ ಹಾಗೂ ಉತ್ತರಪ್ರದೇಶದಲ್ಲಿ ಅತಿಯಾಗಿ ನಡೆಯುತ್ತಿದ್ದ ಅರಣ್ಯನಾಶದ ಬಗ್ಗೆ ಅರಿವು ಮೂಡಿಸುವುದರ ಮೂಲಕ ಆರಂಭವಾಯಿತು. ಮಾರ್ಚ್ 26 1974ರಲ್ಲಿ ಉತ್ತರಖಂಡದ ರಾಜ್ಯದ ಚಮೋಲಿ ಜಿಲ್ಲೆಯ ರೇನಿಹಳ್ಳಿ ಮತ್ತು ಹೇಮ ವಾಲ್ಪಂಟೆಯಲ್ಲಿ ಕೆಲವು ಮಹಿಳೆಯರು ಭಯಭೀತರಾಗಿ ತಮ್ಮ ಕಾಡಿನ ಸಾಂಪ್ರದಾಯಿಕ ಹಕ್ಕನ್ನು ವಾಪಸ್ಸು ಪಡೆಯುವ ಸಲುವಾಗಿ ಇವರು ಮರಕಡಿಯುವುದನ್ನು ವಿರೋಧಿಸಿ ಹೋರಾಟ ನಡೆಸಿದರು. ಈ ಘಟನೆಯನ್ನು ಈ ಚಳುವಳಿಯ ಪ್ರಮುಖ ಘಟನೆಯನ್ನು ಈ ಚಳುವಳಿಯ ಪ್ರಮುಖ ಘಟನೆ ಎನ್ನಬಹುದು. ಏಕೆಂದರೆ ಈ ಹೋರಾಟ ಇಂತಹ ನೂರಾರು ಘಟನೆಗಳಿಗೆ ಸ್ಫೂರ್ತಿಯಾಯಿತು ಮತ್ತು ಇದು ಪ್ರಖ್ಯಾತ ಉತ್ತರಖಂಡದಾದ್ಯಂತ ಹಬ್ಬಿತು. ನಂತರ 1980ರ ವೇಳೆಗೆ ಈ ಚಳುವಳಿ ಇಡೀ ಭಾರತದಾದ್ಯಂತ ವ್ಯಾಪಿಸಿತು ಮತ್ತು ಬಿಂದ್ಯಾ ಮತ್ತು ಪಶ್ಚಿಮ ಘಟ್ಟಗಳಲ್ಲಿ ಅತೀ ಹೇರಳವಾಗಿ ನಡೆಯುತ್ತಿದ್ದ ಅರಣ್ಯ ನಾಶಕ್ಕೆ ಪೂರ್ಣವಿರಾಮ ನೀಡಲು ಈ ಘಟನೆ ಸಹಾಯಕವಾಯಿತು. ಈಗ ಈ ಘಟನೆ ಗರ್ವಾಲದ ಚಿಪ್ಕೋ ಚಳುವಳಿಗೆ ಮುನ್ಸೂಚನೆ ಹಾಗೂ ಸ್ಫೂರ್ತಿಯ ಸೆಲೆಯಾಗಿ ಕಾಣುತ್ತಿದೆ. ಇದರ ಪ್ರಮುಖ ನಾಯಕರು ಸುಂದರ್ ಲಾಲ್ ಬಹುಗುಣ ಆಗಿದ್ದರು.

### ಇತಿಹಾಸ

ಚಿಪ್ಕೋ ಚಳುವಳಿಯ ಕಾಡಿನ ರಕ್ಷಣೆಗಾಗಿ ನಡೆದ ಹೋರಾಟ ಎನ್ನುವುದಕ್ಕಿಂತಲ್ಲೂ ಅಲ್ಲಿನ ಜನರ ಜೀವನೋಪಾಯದ ರಕ್ಷಣೆಗಾಗಿ ನಡೆದ ಹೋರಾಟ ಎಂಬುದು ಹೆಚ್ಚಿನ ಪರಿಸರವಾದಿಗಳ ಮಾಪನದಿಂದ ತಿಳಿದು ಬಂದಿದೆ. ಅಲ್ಲದೇ ಈ ಚಳುವಳಿ ಪ್ರಪಂಚದಾದ್ಯಂತ ಒಂದು ಅಹಿಂಸಾತ್ಮಕ ಚಳುವಳಿಯೆಂಬ ನಿದರ್ಶನಕ್ಕೆ ಪಾತ್ರವಾಯಿತು. ಯಾವುದೇ ಅಭಿವೃದ್ಧಿ

ಹೊಂದಿದ ರಾಷ್ಟ್ರಗಳಲ್ಲಿ ಈ ಪರಿಸರ ಚಳುವಳಿ ನಡೆಸುವುದು ಕಷ್ಟ ಎನ್ನುವ ಸಂದರ್ಭದಲ್ಲಿ ಇದು ಜನ್ಮತಾಳಿತು. ಈ ಅಹಿಂಸಾತ್ಮಕ ಚಳುವಳಿಯ ಯಶಸ್ಸು ಪರಿಸರವಾದಿಗಳ ಗಮನಕ್ಕೆ ಬಂದಾಗ ಅದರಿಂದ ಸ್ಫೂರ್ತಿಗೊಂಡ ಇವರು ಬಿರುಸಾಗಿ ಜಾಗುತ್ತಿದ್ದ ಅರಣ್ಯ ನಾಶವನ್ನು ತಡೆದು ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಪರಿಸರ ನಮ್ಮ ಜೀವನದಲ್ಲಿ ಎಷ್ಟು ಮುಖ್ಯ ಎಂಬುದನ್ನು ನಿರೂಪಿಸಿದರು. ಈ ಮೇಲಿನ ಎಲ್ಲಾ ಸಂಗತಿಗಳು ಭಾರತದ ನಾಗರಿಕ ಸಮಾಜವನ್ನು ಬಡಿದೆಬ್ಬಿಸಿದೆ. ಇದಾದ 25 ವರ್ಷಗಳ ಬಳಿಕ "ಇಂಡಿಯಾ ಟುಡೇ" ಚಿಪ್ಕೋ ಚಳುವಳಿಯ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ ಸುಮಾರು ನೂರಾರು ಜನ ಭಾರತವನ್ನು ಮಾದರಿಯಾಗಿಸಿದರೆಂದು ಪ್ರಕಟಿಸಿತ್ತು. ಆದರೆ ಇತ್ತೀಚೆಗೆ ಇದು ಪರಿಸರ ಸಮಾಜ ಎನ್ನುವುದಕ್ಕಿಂತಲೂ ಸ್ತ್ರೀ ಪರಿಸರವಾದ ಎಂದು ಚಾಲ್ತಿಯಲ್ಲಿದೆ. ಈ ಚಳುವಳಿಯ ಬೆನ್ನೆಲುಬು ಕೇವಲ ಹೆಂಗಸರು ಮಾತ್ರವೆ ಅಲ್ಲ. ಏಕೆಂದರೆ ಈ ಚಳುವಳಿಯ ಹೆಚ್ಚಿನ ನಾಯಕರು ಗಂಡಸರೇ ಆಗಿದ್ದಾರೆ. ಆದರೂ ಹೆಂಗಸರು ಇದರ ಮುಖ್ಯ ಮೂಲಾಧಾರಸ್ತಂಭ ಏಕೆಂದರೆ ಅತಿಯಾದ ಅರಣ್ಯನಾಶದಿಂದ ಅಡುಗೆಗೆ ಸೌದೆಯ ಅಭಾವ ಮತ್ತು ಜಾನುವಾರುಗಳಿಗೆ ಮೇವಿನ ಕೊರತೆ ಮತ್ತು ನೀರಾವರಿಗೆ ಹಾಗೂ ಕುಡಿಯುವ ನೀರಿನ ಕೊರತೆ, ಇಂತಹ ಸಮಸ್ಯೆಗಳಿಂದ ಪ್ರಭಾವಿತಗೊಂಡು ಈ ಚಳುವಳಿಯಲ್ಲಿ ಧೈರ್ಯವಾಗಿ ಮೊದಲು ದುಮ್ಮುಕಿದವರು ಹೆಂಗಸರು. ಹಾಗಾಗಿ ಹೆಂಗಸರು ಸಹಾ ಈ ಚಳುವಳಿಯ ಮೂಲಾಧರವೆಂದು ಹೇಳುವುದರಲ್ಲಿ ಯಾವುದೇ ತಪ್ಪಿಲ್ಲ. ವರ್ಷಗಳು ಉರುಳಿದಂತೆ ಚಿಪ್ಕೋ ಚಳುವಳಿಯ ಅಡಿಯಲ್ಲಿ ಗಿಡನೆಡುವ ಮರಬೆಳೆಸುವ ಕಾರ್ಯಗಳು ನಡೆದವು. ಚಿಪ್ಕೋ ಚಳುವಳಿಯು ವಕ್ತಾರರು ಕಾಡು ಬೆಳೆಸುವುದರಲ್ಲಿ ಮೊದಲಿಗರೆನ್ನಿಸಿದರು. 1987ರಲ್ಲಿ ಈ ಚಳುವಳಿಯ ಜೀವನಾಧಾರದ (Right Lively hood Award) ಹಕ್ಕು ಎಂಬ ಗೌರವಕ್ಕೆ ಪಾತ್ರವಾಯಿತು.

**ಉಗಮ (ಮೂಲ)**

* "ಮಾತು ಹಮ್ರು, ಪಾನಿ ಹಮ್ರು, ಹಮ್ರು ಹೈ ಛಾನ್ ಯಿ ಬೌನ್ ಬಿ... ಪಿತ್ರೋನ್

* "ನಾ ಲಗಾಯಿ ಚೊಉನ್, ಮುನಹಿ ತಾ ಚನ್ ಬಿ"

* "ಮಣ್ಣು ನಮಗಾಗಿ, ನೀರು ನಮಗಾಗಿ ನಾವು ಕಾಡಿಗಾಗಿ, ನಮ್ಮ ಪೂರ್ವಿಕರು ಇದನ್ನು ಬೆಳೆಸಿದರು. ಅದನ್ನು ಕಾಪಾಡುವುದು ನಮ್ಮ ಕರ್ತವ್ಯ"

(ಹಳೆಯ ಚಿಪ್ಕೋ ಹಾಡು (ಗರ್ವಾಲಿ ಭಾಷೆ).

## ಶ್ರಮಿಕ ವರ್ಗದ ಸಮಸ್ಯೆಗಳು

ಭಾರತದಲ್ಲಿ ವಿನಾಶಕ ರೀತಿಯಲ್ಲಿ ಹೆಚ್ಚುತ್ತಿದ್ದ ಅರಣ್ಯನಾಶ ಸೌದೆಗಾಗಿ ಕಟ್ಟಿಗೆಗಳನ್ನು ಮತ್ತು ಮೇವು ಸಂಗ್ರಹಿಸುತ್ತಿದ್ದ ಶ್ರಮಿಕ ವರ್ಗದ ಜನರಿಗೆ ಅಪಾಯ ತಂದೊಡ್ಡಿತು. ಅಷ್ಟೆ ಅಲ್ಲದೆ ಮಣ್ಣಿನ ಸವಕಳಿ ಮತ್ತು ಗುಡ್ಡ ಪ್ರದೇಶದಲ್ಲಿ ನೀರಿನ ಮೂಲಗಳು ಬತ್ತಿಹೋಗುವುದು ಮುಂತಾದ ಸಮಸ್ಯೆಗಳಿಗೆ ಇದು ಕಾರಣವಾಯಿತು. ಇದಾದ ತರುವಾಯ ಈ ಪ್ರದೇಶಗಳಲ್ಲಿನ ಜನರು ಮೇವಿನ ಅಭಾವದಿಂದಾದ ಜಾನುವಾರುಗಳನ್ನು ಸಾಕುವುದನ್ನೇ ಬಿಡಬೇಕಾಯಿತು. ಅರಣ್ಯ ರಕ್ಷಣೆಗೆಂದೇ ರೂಪಿಸಿದ ಕಾಯ್ದೆಗಳಾದ ಅಂದರೆ 1972ರಲ್ಲಿ ರೂಪುಗೊಂಡ ಭಾರತ ಅರಣ್ಯ ಕಾಯ್ದೆಯಿಂದ ಈ ಬಿಕ್ಕಟ್ಟು ಇನ್ನೂ ಅಧಿಕವಾಯಿತು. ಈ ಕಾಯ್ದೆಯ ಪ್ರತಿಫಲವಾಗಿ ಕಡಿಮೆ ಉಳುಮೆ ಭೂಮಿ ಹೊಂದಿದ್ದ ಹಾಗೂ ನೈಸರ್ಗಿಕ ಸಂಪತ್ತಿದ್ದರೂ ತುಂಬಾ ಬಡವರಾಗಿದ್ದ ಅಧಿಕ ಸಂಖ್ಯೆಯಲ್ಲಿದ್ದ ಜನರನ್ನು ಕಾಡಿನ ಪ್ರವೇಶ ಮಾಡುವುದನ್ನು ನಿರ್ಬಂಧಿಸಲಾಯಿತು. ಇದರ ಪರಿಣಾಮವಾಗಿ ಇಂತಹ ಕೆಳಮಟ್ಟದ ಆರ್ಥಿಕ ಪರಿಸ್ಥಿತಿ ಹೊಂದಿದ್ದ ಈ ಜನರು 1960ರಲ್ಲಿ ತಮ್ಮ ಜೀವನೋಪಾಯಕ್ಕೆ ಕೆಲಸಗಳನ್ನು ಹರಸಿ ಮೈದಾನ ಪ್ರದೇಶಗಳನ್ನು ಹುಡುಕಿಕೊಂಡು ಕಡಿಮೆ ಜನರಿರುವ ಪ್ರದೇಶಗಳಿಗೆ ಸ್ಥಳಾಂತರಗೊಂಡರು. ಕ್ರಮೇಣ ಅಲ್ಲಿಯ ಜನರು ತಮ್ಮ ಜೀವನಾಧಾರವಾಗಿದ್ದ ಕಾಡಿಂದ ತಮ್ಮನ್ನು ಕಸಿದುಕೊಂಡಿದ್ದರ ಈ ಪರಿಸರ ಬಿಕ್ಕಟ್ಟಿನಿಂದ ಜಾಗೃತಗೊಂಡರು. ಇದರ ಪರಿಣಾಮವಾಗಿ 1964ರಲ್ಲಿ ದಾಶೋಲಿ ಗ್ರಾಮ ಸ್ವರಾಜ್ಯ ಸಂಘ (DGSS) "ದಾಸೋಲಿ ಸೊಸೈಟಿ ಫಾರ್ ವಿಲೇಜ್ ಸೇಲ್ಫ್ ರೂಲ್' ಎಂಬ ಸಂಘವು ಗಾಂಧಿ ಸಮಾಜ ಸೇವಕರಾದ ಚಂಡೀಪ್ರಸಾದ್ (ಗೋಪೇಶ್ವರ್), ಜಯಪ್ರಕಾಶ ನಾರಾಯಣ್ ಮತ್ತು ಸರ್ವೋದಯ ಚಳುವಳಿಯಿಂದ ಸ್ಫೂರ್ತಿಗೊಂಡು ಗುಡಿ ಕೈಗಾರಿಕೆಯಲ್ಲಿ ಕಾಡಿನ ಸಂಪತ್ತನ್ನು ಬಳಸಬಹುದೆಂಬ ಗುರಿಯೊಂದಿಗೆ ಸ್ಥಾಪಿಸಿದರು. ಇದರ ಪ್ರಥಮ ಕಾರ್ಯವೆಂದರೆ ಗೋಪೇಶ್ವರದ ಸ್ಥಳೀಯರಿಗೆ ಉಳುಮೆ ಭೂಮಿ ಒದಗಿಸಿಕೊಟ್ಟಿದ್ದು. ನಂತರ 1980ರಲ್ಲಿ ದಾಸೋಲಿ ಗ್ರಾಮ ಸ್ವರಾಜ್ಯ ಸಂಘ (DGSS) ದಾಸೋಲಿ ಗ್ರಾಮ್ ಸ್ವರಾಜ್ ಮಂಡಲಿ (DGSM) ಎಂದು ಮರು ನಾಮಕರಣಗೊಂಡಿತು. ಇದಲ್ಲದೆ ಅವರು ಇನ್ನೊಂದು ವಿಷಮ ಪರಿಸ್ಥಿತಿಯನ್ನು ಎದುರಿಸುವ ಸಂದರ್ಭ ಒದಗಿತ್ತು. ಅದೇನೆಂದರೆ ವಸಾಹತು

ಕಾಲದಿಂದ ರೂಢಿಯಲ್ಲಿದ್ದ ಅರಣ್ಯ ನಿಯಮಗಳು ಮತ್ತು ಕಂಟ್ರಾಕ್ಟರ್ ಪದ್ಧತಿಗಳು ಈ ಅರಣ್ಯ ನಿಯಮದ ಪ್ರಕಾರ ಅಲ್ಲಿನ ಕಾಡನ್ನು ಭಾಗಗಳಾಗಿ ವಿಭಾಗಿಸಿ ದೊಡ್ಡ–ದೊಡ್ಡ ಕಂಟ್ರಾಕ್ಟರ್‌ಗಳಿಗೆ ಗುತ್ತಿಗೆ ನೀಡಲಾಗಿತ್ತು. ಆಗಾಗಿ ಮೈದಾನ ಪ್ರದೇಶಕಗಳಲ್ಲಿ ತುಂಬಾ ಕೆಳ ದರ್ಜೆಯ ಕೆಲಸಗಳಾದ ಬಂಡೆ ಒಡೆಯುವುದು, ಮನೆಗೆಲಸ, ಮುಂತಾದವುಗಳನ್ನು ಬಿಟ್ಟು ಕೌಶಲ್ಯವೊಂದಿದ್ದ ಕಾರ್ಮಿಕರು ಈ ದೊಡ್ಡ ಪ್ರದೇಶಗಳಲ್ಲಿ ಬಂದರು. ಮತ್ತೊಂದು ರೀತಿಯಲ್ಲಿ ಮೊದಲೇ ತಮ್ಮ ಜೀವನೋಪಾಯಕ್ಕಾಗಿ ಪರದಾಡುತ್ತಿದ್ದ ಗುಡ್ಡಗಾಡು ಜನರ ಜೊತೆಗೆ ಹೊರಗಿನ ಪ್ರದೇಶಗಳಿಂದ ಜನರು ಹರಿದು ಬಂದಿದ್ದು ಪರಿಸರ ಸಮನತೋಲನ ವಿಷಯಕ್ಕೆ ಕುಂದುತರುವ ಕೆಲಸವಾಗಿತ್ತು. ಹೀಗೆ ತೀವ್ರವಾಗಿ ಹೆಚ್ಚುತ್ತಿದ್ದ ಅರಣ್ಯನಾಶ ಪರಿಸರ ಅಸಮತೋಲನಕ್ಕೆ ಕಾರಣವಾಗಿರುತ್ತದೆಂಬ ಜಾಗೃತ ಭಾವನೆಯನ್ನು ಗರ್ವಾಲ ಜನತೆಯ ಮನದಲ್ಲಿ ಮೂಡಿಸಿತ್ತು. ಇದೇ ರೀತಿ ಮರಗಳನ್ನು ಕಡಿಯುತ್ತಿದ್ದರ ಪರಿಣಾಮವಾಗಿ ಜುಲೈ 1970ರಲ್ಲಿ ಅಲಕಾನಂದ ನದಿ ಪ್ರವಾಹವು ಬದ್ರಿನಾಥ ಬಳಿ ಇರುವ ಹನುಮನ ಚಟ್ಟಿಯಿಂದ ಹರಿದ್ವಾರದವರೆಗೆ ಸುಮಾರು 350 ಕಿ.ಮೀ. ಸೇರಿದಂತೆ ಹಲವು ಹಳ್ಳಿಗಳು ಸೇತುವೆ ರಸ್ತೆಗಳು ನಾಶವಾದವು. ಈ ಘಟನೆ ನಡೆದಿದ್ದರಿಂದ ಮತ್ತು ಹೆಚ್ಚುತ್ತಿದ್ದ ಯಾಂತ್ರಿಕ ಕಾರ್ಯಗಳಿಂದ ಈ ಪ್ರದೇಶಗಳಲ್ಲಿ ಭೂ ಕುಸಿತ ಸರ್ವೇ ಸಾಮಾನ್ಯವಾಯಿತು.

**ಸಂಘಟನೆ**

- ಹಳ್ಳಿಯ ಜನರು ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರು ಸ್ವತಃ ತಾವೇ ಚಿಕ್ಕ–ಚಿಕ್ಕ ಗುಂಪುಗಳಾಗಿ ತಮ್ಮನ್ನು ಸಂಘಟಿಸಿಕೊಂಡು ಅವರಲ್ಲಿ ಭಯ ಹುಟ್ಟಿಸಿದ ಅರ್ಥಿಕ ವ್ಯವಹಾರಕ್ಕಾಗಿ ಮರಗಳನ್ನು ಕಡಿದು ತಮ್ಮ ಜೀವನಾಧಾರಕ್ಕೆ ಕೊಡಲಿ ಪೆಟ್ಟು ನೀಡಿದ್ದ ಕಾರ್ಯಾಚರಣೆಯ ವಿರುದ್ಧ ತಿರುಗಿ ಬೀಳಲು ಸಿದ್ಧರಾದರು. ಇದರ ಪರಿಣಾಮವಾಗಿ 1971 ಅಕ್ಟೋಬರ್‌ರಂದು ಸಂಘದ ಜನರೆಲ್ಲಾ ಸೇರಿ ಅರಣ್ಯ ಇಲಾಖೆಯ ಈ ನಿಯಮಗಳ ವಿರುದ್ಧ ಗೋಪೇಶ್ವರದಲ್ಲಿ ಹೋರಾಟ ನಡೆಸಿದರು. ಇದಕ್ಕೆ ಸಂಬಂಧಿಸಿದಂತೆ ಬಹಳಷ್ಟು ಜಾಥಾ, ಸಮ್ಮೇಳನಗಳು 1972ರಲ್ಲಿ ನಡೆದವು. ಆದರೆ ಅವುಗಳು ಅಷ್ಟೊಂದು ಪರಿಣಾಮಕಾರಿಯಾಗಲಿಲ್ಲ.

- ಮೊದಲ ಹೋರಾಟ ನಡೆದ ಸಂದರ್ಭವೆಂದರೆ ಡಿ.ಜಿ.ಎಸ್.ಎಸ್. (DGSS) ಸಂಘ ಅರಣ್ಯ ಇಲಾಖೆಗೆ ತಮ್ಮ ಕೃಷಿ ಉಪಯೋಗಕ್ಕಾಗಿ

ಹತ್ತು ಒಣಗಿದ ಮರಗಳನ್ನು ವಾರ್ಷಿಕವಾಗಿ ನೀಡಲು ಮನವಿ ಮಾಡಿಕೊಂಡಿತ್ತು. ಆದರೆ ಅರಣ್ಯ ಇಲಾಖೆಯು ಇದನ್ನು ತಿರಸ್ಕರಿಸಿ ಆಟದ ಸಾಮಾಗ್ರಿ ತಯಾರಿಸುವ ಸೈಮನ್ ಕಂಪನಿಗೆ ಸುಮಾರು 300 ಮರಗಳನ್ನು ಟೆನ್ನಿಸ್ ಬ್ಯಾಟ್ ತಯಾರಿಕೆಗೆ ಗುತ್ತಿಗೆ ನೀಡಿತು (1973). ನಂತರ ಇದಾದ ಎರಡು ವಾರಗಳ ಬಳಿಕ ಲಂಬರ್ಮನ್‌ಗಳು ಗೋಪೇಶ್ವರಕ್ಕೆ ಬಂದರು. ಇವರನ್ನು ಎದುರಿಸುವ ಸಲುವಾಗಿ ಏಪ್ರಿಲ್ 24ರಂದು (1973) ನೂರಾರು ಹಳ್ಳಿ ಜನ ಮತ್ತು ಸಂಘದ ಸದಸ್ಯರು ಡ್ರಮ್‌ಗಳನ್ನು ಬಾರಿಸುತ್ತಾ ಘೋಷಣೆಗಳನ್ನು ಕೂಗುತ್ತಾ ಕಂಟ್ರಾಕ್ಟರ್ಸ್‌ಗಳನ್ನು, ಲಂಬರ್ಮನ್‌ಗಳನ್ನು ಎದುರಿಸಿ ಓಡಿಸಿದರು.

- ಆ ನಂತರ ಈ ಕಂಟ್ರಾಕ್ಟ್ ಅನ್ನು ತಕ್ಷಣವೇ ವಜಾ ಮಾಡಿ ಸರ್ಕಾರ ಸಂಘದ ಪರವಾಗಿ ತೀರ್ಪು ನೀಡಿತ್ತು ಈ ಘಟನೆಯ ಪ್ರತಿಫಲವಾಗಿ ಸಂಘದ ಜನರು ವಾರ್ಷಿಕವಾಗಿ ಮೂರು ಮರಗಳನ್ನು ತಮ್ಮ ಕೃಷಿ ಕಾರ್ಯಗಳಿಗೆ ಬಳಸಲು ಅನುಮತಿ ನೀಡಲಾಯಿತು ಮತ್ತು ವ್ಯವಹಾರಕ್ಕಾಗಿ ಮರಗಳನ್ನು ಮಾರುವ ಇಂತಹ ಅರಣ್ಯ ನಿಯಮಗಳ ಬಗ್ಗೆ ಹೆಚ್ಚು ನಿಗ ಇಡಲು ಆರಂಭಿಸಿತು. ಈ ಸಂಘ ಮರಗಳನ್ನು ಅಪ್ಪಿಕೊಳ್ಳುವುದು ಅಥವಾ ಚಿಪ್ಕೋ ಎಂಬ ಅಹಿಂಸಾತ್ಮಕ ಹೋರಾಟದ ಮೂಲಕ ಮರಗಳ ರಕ್ಷಣೆಗೆ ಪಣ ತೊಟ್ಟಿತ್ತು. ಆದರೆ ಮತ್ತೊಂದು ಅನ್ಯಾಯದ ಸಂಗತಿಯೆಂದರೆ ಈ ಹೋರಾಟಕ್ಕೆ ಕಾರಣವಾಗಿದ್ದ ಅದೇ ಕಂಪನಿಗೆ ಗೋಪೇಶ್ವರದಿಂದ ಸುಮಾರು 80 ಕಿ.ಮೀ. ದೂರದಲ್ಲಿರುವ ಘಟ ಎಂಬ ಕಾಡಿನಿಂದ ಬಹಳಷ್ಟು ಮರಗಳನ್ನು ಗುತ್ತಿಗೆಗೆ ನೀಡಲಾಗಿತ್ತು.
- ಗೋಪೇಶ್ವರದಲ್ಲಿ ನಡೆದ ವಿರೋಧದಿಂದ ಪ್ರೇರಣೆ ಪಡೆದಿದ್ದ ಇಲ್ಲಿನ ಜನರಿಂದ ಮತ್ತೇ ಅದೇ ರೀತಿಯ ವಿರೋಧವನ್ನು ಸ್ವಲ್ಪ ದಿನಗಳ ನಂತರ ಈ ಕಂಪನಿ ಎದುರಿಸಬೇಕಾಯಿತು. ಈ ಘಟನೆ ನಂತರ ಇದರಿಂದ ಜಾಗೃತಗೊಂಡ ಘಟ ಮತ್ತು ತಾರ್ಸಲಿ ಕಾಡಿಗೆ ಸಮೀಪವಿರುವ ಜನರು ಮತ್ತೇ ಕಂಟ್ರಾಕ್ಟರ್ಸ್ ಬರುವವರೆಗೆ ಅಂದರೆ, ಡಿಸೆಂಬರ್‌ವರೆಗೂ ಮರಗಳ ಮೇಲೆ ಗಮನವಿಟ್ಟು ಅವರಿಂದ ಮರಗಳನ್ನು ರಕ್ಷಿಸಿದರು. ಲಂಬರ್ಮನ್‌ಗಳು ಕಡಿದಿರುವ ಐದು ಮರಗಳನ್ನು ಬಿಟ್ಟು ಓಡಿಹೋದರು.

- ತರುವಾಯ ಒಂದು ಪ್ರಮುಖವಾದ ಘಟನೆ ಕೆಲವೇ ತಿಂಗಳ ನಂತರ ಜರುಗಿತ್ತು ಅದೇನೆಂದರೆ, ಸರ್ಕಾರ ಜನವರಿ 1974ರಂದು ರೇನಿ(ಣಿ)ಹಳ್ಳಿಯ ಬಳಿ ಇರುವ ಅಲಕಾನಂದ ನದಿಯ ದಂಡೆಯ ಮೇಲಿದ ಸುಮಾರು 2500 ಮರಗಳನ್ನು ಹರಾಜು ಮಾಡಿತು. ಆಗ ಭಟ್ ಎಂಬುವವರು ರೇನಿ(ಣಿ)ಯ ಜನರನ್ನು ಪ್ರೇರೇಪಿಸಿ ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಇದರ ವಿರುದ್ಧ ಹೋರಾಟ ನಡೆಸಲು ನಿರ್ಧರಿಸಿದರು. ಕೆಲವೇ ಕೆಲವು ವಾರಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಸಭೆಗಳು ಸಮ್ಮೇಳನಗಳು ರೇನಿ(ಣಿ) ಹಳ್ಳಿಯಲ್ಲಿ ನಡೆಯತೊಡಗಿದವು.

- ಮಾರ್ಚ್ 26, 1974 ರಂದು ಗುತ್ತಿಗೆದಾರರು ರೇಣೀ ಹಳ್ಳಿಗೆ ಮರ ಕಡಿಯಲು ಬಂದಾಗ ರಾಜ್ಯ ಸರ್ಕಾರ ಮತ್ತು ಗುತ್ತಿಗೆದಾರರ ಮನಸ್ಸನ್ನು ಬದಲಾಯಿಸಲು ಪರಿಹಾರವಾಗಿ ಪ್ರತಿಫಲ ಜಾಗವನ್ನು ಕೇಳಲು ಕಾರ್ಮಿಕರು ಮನೆಗೆ ಹಿಂತಿರುಗಬೇಕಾದರೆ ರೇನಿ ಹಳ್ಳಿಹವರು ಡಿ.ಜಿ.ಎಸ್.ಎಸ್. ಕಾರ್ಯಕರ್ತರು ಚಮೋಲಿ ಹಳ್ಳಿಯಲ್ಲಿ ಮರದ ದಿಮ್ಮಿಗಳನ್ನು ತುಂಬಿದ ಗಾಡಿಯ ಹತ್ತಿರ ಬಂದು ಮರಕಡಿಯುವವರ ವಿರುದ್ಧ ವಾಗ್ವಾದಕ್ಕಿಳಿದರು. ಆಗ ಅಲ್ಲಿನ ಸ್ಥಳೀಯ ಹುಡುಗಿ ಅವರನ್ನು ನೋಡಿ ರೇಣಿ ಹಳ್ಳಿಯ 'ಮಹಿಳಾ ಮಂಗಳ ದಳ'ದ ನಾಯಕಿಯಾದ ಗೌರಿ ದೇವಿಗೆ ವಿಷಯವನ್ನು ಮುಟ್ಟಿಸಿದಳು. ಆಗ ಗೌರಿ ದೇವಿ ಆ ಊರಿನ 27 ಜನ ಮಹಿಳೆಯರೊಂದಿಗೆ ಆ ಜಾಗಕ್ಕೆ ಬಂದು ಮರ ಕಡಿಯುವುದನ್ನು ವಿರೋಧಿಸಿದರು.

- ಯಾವಾಗ ಎಲ್ಲಾ ಮಾತು ಕಥೆಗಳು ವಿಫಲವಾದವೂ ಮತ್ತು ಮರ ಕಡಿಯುವವರು ಕಿರುಚಲು ಮತ್ತು ಮಹಿಳೆಯರನ್ನು ದುರುಪಯೋಗ ಪಡಿಸಿಕೊಳ್ಳಲು ಮತ್ತು ಬಂದೂಕಿನೊಂದಿಗೆ ಹೆದರಿಸಲು ಆರಂಭಿಸಿದಾಗ ಅವರು ಸಹಾಯಕ್ಕಾಗಿ ಹಾಗೂ ಮರ ಕಡಿಯುವುದನ್ನು ತಪ್ಪಿಸಲು ಮರಗಳನ್ನು ಅಪ್ಪಿಕೊಂಡರು. ಇದು ಹೀಗೆ ಬಹಳ ಘಂಟೆಗಳವರೆಗೆ ಮುಂದುವರೆಯಿತು. ಆ ಮಹಿಳೆಯರು ಇಡೀ ರಾತ್ರಿ ತಮ್ಮ ಮರಗಳನ್ನು ಮರ ಕಡಿಯದಂತೆ ಎಚ್ಚರಿಕೆಯಿಂದ ನೋಡಿಕೊಂಡರು. ಹಾಗಾಗಿ ಕೆಲವು ಗುತ್ತಿಗೆದಾರರು ತಮ್ಮ ಪಟ್ಟು ಸಡಿಲಿಸಿ ಹಳ್ಳಿಯನ್ನು ತೊರೆದರು.

- ಮರುದಿನ ಅವರು ಹಿಂತಿರುಗಿದಾಗ ಈ ಚಳಿವಳಿಯ ಸುದ್ದಿ ನೆರೆಹೊರೆಯ ಹಳ್ಳಿಗಳಾದ ಲಾತಾ, ಹೆನ್ವಾಲ್ಘಟಿ ಇನ್ನುಳಿದ ಹಳ್ಳಿಗಳಿಗೂ

ತಲುಪಿ ಇನ್ನು ಹೆಚ್ಚಿನ ಜನರು ಚಳುವಳಿಯಲ್ಲಿ ಭಾಗವಹಿಸಿದರು. ಕೊನೆಗೆ ನಾಲ್ಕೈದು ದಿನಗಳಲ್ಲಿ ಸಿಂಮಾಡ್ಸ್ ಕಂಪನಿಯ ಗುತ್ತಿಗೆದಾರರು ಹಳ್ಳಿಯನ್ನು ತೊರೆದರು.

**ಪರಿಣಾಮಗಳು**

- ಈ ಸುದ್ದಿ ಬಹುಬೇಗನೆ ರಾಜ್ಯದ ಮುಖ್ಯಮಂತ್ರಿಯಾದ ಹೇಮವಟಿ ನಂದನ್ ಬಹುಗುಣ ಅವರಿಗೆ ತಲುಪಿತು. ಅವರು ಈ ವಿಷಯಕ್ಕಾಗಿ ಒಂದು ಸಮಿತಿಯನ್ನು ಸಹ ರಚಿಸಿದರು. ಅದು ಹಳ್ಳಿಯವರಿಗೆ ಅನುಕೂಲಕರವಾದ ತೀರ್ಪನ್ನು ನೀಡಿತು. ಇದು ಈ ಪ್ರದೇಶ ಮತ್ತು ದೇಶದ ಎಲ್ಲಾ ಕಡೆ ಆರ್ಥಿಕ ಬೆಳವಣಿಗೆಯ ಇತಿಹಾಸದಲ್ಲಿ ಒಂದು ಮುಖ್ಯವಾದ ಅಂಶವಾಯಿತು.

- ಈ ಹೋರಾಟ ಬಹುಬೇಗನೆ ಎಲ್ಲಾ ಸ್ಥಳಗಳಿಗೂ ಹರಡಿತು ಮತ್ತು ಸ್ವಯಂಪ್ರೇರಿತವಾದಂತಹ ಅನೇಕ ಸ್ಥಳೀಯ ಸಮುದಾಯದವರು ಮತ್ತು ಮರದ ವ್ಯಾಪಾರಿಗಳಿಗೆ ಅನೇಕ ಸ್ಥಳಗಳಲ್ಲಿ ವಾಗ್ವಾದ ನಡೆಯಿತು. ಜೊತೆಗೆ ಮಹಿಳೆಯರು ತಮ್ಮ ಶಕ್ತಿಯನ್ನು ಪ್ರದರ್ಶಿಸಲು ಬೆಟ್ಟ-ಗುಡ್ಡಗಳಲ್ಲಿ ಹಿಂಸಾತ್ಮಕ ಕೃತ್ಯಗಳನ್ನು ಆರಂಭಿಸಿದರು. ಈ ಚಳುವಳಿಯು ತನ್ನ ನಾಯಕರ ನೇತೃತ್ವದಲ್ಲಿ ಬೃಹದಾಕಾರವನ್ನು ಪಡೆಯಿತು.

- ಚಿಪ್ಕೊ ಚಳುವಳಿಯ ಹೆಸರು ತನ್ನ ಚಟುವಟಿಕೆಯೊಂದಿಗೆ ಅಂಟಿಕೊಂಡಿತು. ಇತಿಹಾಸಕಾರರ ಪ್ರಕಾರ 'ಚಿಪ್ಕೊ' ಪದ ಮೊದಲು ಭಟ್ ಎನ್ನುವವರಿಂದ ಬಳಸಲ್ಪಟ್ಟಿತ್ತು. ಈ ಪದದ ಮೂಲ 'ಅಂಗಲ್ವಾಲ್ತಾ' ಆಗಿದ್ದು ಗರ್ವಾಲಿ ಭಾಷೆಯಲ್ಲಿದೆ. ಈ ಪದದ ಅರ್ಥ ಅಪ್ಪಿಕೋ ಅಥವಾ ತಬ್ಬಿಕೋ ಎಂದಾಗಿದೆ. ನಂತರ ಇದನ್ನು ಹಿಂದಿ ಭಾಷೆಗೆ ಎರವಲು ಪಡೆದುಕೊಳ್ಳಲಾಗಿದ್ದು ಚಿಪ್ಕೋ ಎಂಬ ಹೆಸರನ್ನು ಪಡೆಯಿತು. ಚಿಪ್ಕೋ 'ಎಂದರೆ ಹಿಂದಿಯಲ್ಲಿ 'ಕಡ್ಡಿ' ಎಂಬ ಅರ್ಥವನ್ನು ಕೊಡುತ್ತದೆ.

- ಅನಂತರದ ಐದು ವರ್ಷಗಳಲ್ಲಿ ಈ ಚಳುವಳಿ ದೇಶದ ಎಲ್ಲಾ ಜಿಲ್ಲೆಗಳಿಗೂ ತಲುಪಿತು. ಮತ್ತೆ ಹತ್ತು ವರ್ಷದೊಳಗಾಗಿ ಉತ್ತರಾಖಂಡದ ಹಿಮಾಲಯದವರೆಗೂ ಹಬ್ಬಿತು. ಈ ಚಳುವಳಿಯಿಂದಾಗಿ ದೇಶದ ಅತಿದೊಡ್ಡ ಸಮಸ್ಯೆಗಳಾದ ಪರಿಸರ ಮತ್ತು ಆರ್ಥಿಕ ಸಮಸ್ಯೆಗಳು ಪ್ರಚಲಿತ ಗೊಂಡವು. ರೇಣೀ ಹಳ್ಳಿಯವರ ಬೇಡಿಕೆ ಏನೆಂದರೆ ಮರ

ಕಡಿಯುವ ಅವಕಾಶವನ್ನು ಹೊರಗಿನವರಿಗೆ ನೀಡುವಂತಿರಲಿಲ್ಲ ಮತ್ತು ಅಲ್ಲಿನ ಸ್ಥಳೀಯರು ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ನೀರು, ಕಾಡಿನ ಮೇಲೆ ವಿಶೇಷ ಅಧಿಕಾರವನ್ನು ಹೊಂದಿರುವರು. ಅವರು ಬಯಸುವುದೆ ನೆಂದರೆ ಸರ್ಕಾರವು ಸಣ್ಣ ಕೈಗಾರಿಕೆಗಳಿಗೆ ಕಡಿಮೆ ದರದಲ್ಲಿ ಕಚ್ಚಾವಸ್ತುಗಳ್ಳನ್ನು ಪೂರೈಸಿದಾಗ ಯಾವುದೇ ಪ್ರಾಣಿ ಸಸ್ಯ ಸಂಕುಲಕ್ಕೆ ತೊಂದರೆ ಆಗದೆ ದೇಶದ ನಿಶ್ಚಿತ ಅಭಿವೃದ್ಧಿ ಸಾಧ್ಯವಾಗುತ್ತದೆ.

- ಈ ಚಳುವಳಿಯಿಂದಾಗಿ ಆರ್ಥಿಕ ವಿಷಯಗಳಾದ ಭೂ ರಹಿತ ಅರಣ್ಯ ಕಾರ್ಮಿಕರು ಮತ್ತು ಅವರಿಗೆ ನಿಶ್ಚಿತ ಸಂಬಳ ಕೊಡಬೇಕೆಂಬ ವಿಷಯಗಳು ಪ್ರಚಲಿತಗೊಂಡವು. ಒಟ್ಟಾರೆಯಾಗಿ ಚಿಪ್ಕೊ ಚಳುವಳಿಯು ಪರಿಸರದ ಅವನತಿಗೆ ಎಲ್ಲರು ಕಾರಣರಾಗಿದ್ದಾರೆ ಎಂಬುದನ್ನು ತೋರಿಸಿತು ಮತ್ತು ಅದು ಶ್ರೀಮಂತರ ಜೀವನದ ಚಟುವಟಿಕೆಯಾದರೆ ಬಡವರ ಜೀವದ ಪ್ರಶ್ನೆಯಾಗಿದೆ ಎಂಬುದನ್ನು ಚಿಪ್ಕೋ ಚಳುವಳಿಯು ಪರಿಶೀಲಿಸಿತು.

- ಅನೇಕ ಪಂಡಿತರು ಚಿಪ್ಕೋ ಚಳುವಳಿಯ ಪರಿಣಾಮಗಳನ್ನು ಅಧ್ಯಯನ ಮಾಡಿದರು. 1977 ರಲ್ಲಿ ಮತ್ತೊಂದು ಪ್ರದೇಶದಲ್ಲಿ ಮಹಿಳೆಯರು ಅಲ್ಲಿರುವ ಮರಗಳಿಗೆ ಪವಿತ್ರವಾದ ದಾರಗಳನ್ನು ಕಟ್ಟುವ ಮೂಲಕ ಅವುಗಳನ್ನು ಹಿಂದೂ ಸಂಪ್ರದಾಯಕ್ಕೆ ಸೇರಿಸಿದರು ಇದು ಅಣ್ಣ–ತಂಗಿ ಬಾಂಧವ್ಯವನ್ನು ತೋರಿಸುತ್ತದೆ.

- 'ಚಿಪ್ಕೋ ಚಳುವಳಿ'ಯಲ್ಲಿ ಮಹಿಳೆಯರ ಭಾಗವಹಿಸುವಿಕೆಯೆನ್ನುವುದು ಹೊಸಬಗೆಯ ಚಳುವಳಿಯಾಯಿತು. ಕಾಡಿನ ಗುತ್ತಿಗೆದಾರರು ಆ ಸ್ಥಳದ ಗಂಡಸರಿಗೆ ಪೂರೈಸುವ ಹಾಲ್ಕೊಹಾಲ್ ಪ್ರಮಾಣವನ್ನು ದುಪ್ಪಟ್ಟುಗೊಳಿಸಿದರು. ಆಗ ಮಹಿಳೆಯರು ಹಾಲ್ಕೋಹಾಲ್ ಹವ್ಯಾಸದ ವಿರುದ್ಧ ಚಳುವಳಿಯನ್ನು ನಡೆಸಿದರು ಮತ್ತು ಇನ್ನುಳಿದ ಸಾಮಾಜಿಕ ವಿಷಯುಗಳ ಮೇಲೆ ಬೆಳಕನ್ನು ಚೆಲ್ಲಲು ಚಳುವಳಿಯುನ್ನು ವಿಸ್ತಾರಗೊಳಿಸಿದರು.

- 1980ರಲ್ಲಿ ಪ್ರಧಾನ ಮಂತ್ರಿಯಾಗಿದ್ದ ಇಂದಿರಾಗಾಂಧಿಯವರು ಹಿಮಾಲಯದ ಸುತ್ತ–ಮುತ್ತಲ ಪ್ರದೇಶಗಳಲ್ಲಿ ಪುನಃ ಹಸಿರು

ಮರುಕಳಿಸುವವರೆಗೆ 15 ವರ್ಷಗಳ ಕಾಲ ಮರ ಕಡಿಯುವುದನ್ನು ನಿಷೇಧಿಸುವುದರೊಂದಿಗೆ ಚಿಪ್ಕೊ' ಚಳುವಳಿ ವಿಜಯಿಯನ್ನು ಪಡೆಯಿತು.

- ಈ ಚಳುವಳಿಯಾದ ಪ್ರಮುಖ ನಾಯಕರಾದ 'ಸುಂದರ್ ಲಾಲ್ ಬಹುಗುಣ್ ರವರು 1981–83 ರಲ್ಲಿ ಹಿಮಾಲಯದ ಪ್ರದೇಶಗಳಿಗೆ ಪಾದಯಾತ್ರೆಯನ್ನು ಕೈಗೊಂಡು ಈ ಚಳುವಳಿಯ ಸಂದೇಶವನ್ನು ಅಲ್ಲಿಗು ತಲುಪಿಸಿದರು. ಹಾಗಾಗಿ ಅಲ್ಲಿನ ಮಹಿಳೆಯರು ಸಹ ಚಳುವಳಿಗೆ ಸಹಕಾರವನ್ನು ನೀಡಿದರು ಮತ್ತು ಜೊತೆಗೆ ಅಲ್ಲಿನ ಸ್ಥಳೀಯರಿಗೆ ಕಡಿಮೆದರದಲ್ಲಿ ಮೇವನ್ನು ಉತ್ಪಾದಿಸಲು ವ್ಯವಸ್ಥೆಯನ್ನು ಮಾಡಿದರು. ಅವರು ಮೇವು ಸಂಗ್ರಹಣೆಗಾಗಿ ಭುಮಿಯ ಪಾಳಿಯ ಯೋಜನೆಗೆ ಸೇರಿಕೊಂಡರು ಮತ್ತು ಕಡಿಮೆ ಉತ್ಪಾದನೆ ಕೊಡುವ ಭೂಮಿಯಲ್ಲಿ ಮರ–ಗಿಡಗಳನ್ನು ನೆಡಲು ಸಹಾಯ ಮಾಡಿದರು. ಅವರು ಆಯ್ಕೆ ಮಾಡಿಕೊಂಡಂತಹ ಯಾವುದೇ ಜಾತಿಯ ಸಸ್ಯಗಳನ್ನು ಮತ್ತು ಬೆಳೆಸುವ ಸಂಸ್ಥೆಯನ್ನು ಹುಟ್ಟು ಹಾಕಿ ಬೆಳೆಸಿದರು.

**ಭಾಗವಹಿಸಿದ್ದರು**

1974ರಲ್ಲಿ ರೆಣೀಹಳ್ಳಿಯಲ್ಲಿ ನಡೆದ ಚಳುವಳಿಯಲ್ಲಿ ಭಾಗವಹಿಸಿದ್ದ ಎಲ್ಲಾ ಮಹಿಳೆಯರು ಜೆನ್ವಾಡಸನ್ನು ಬಿಟ್ಟು 30 ವರ್ಷಗಳ ನಂತರ ಹೊಸದಾಗಿ ಸೇರಿದರು. ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದುದು ಚಿಪ್ಕೋ ಚಳುವಳಿಯ ಪ್ರಮುಖ ಲಕ್ಷಣವಾಗಿದೆ.

- ಆಗ್ರೆರಿಯನ್ ಎಕಾನಮಿ ಎನ್ನುವುದು ಉತ್ತರಾಖಂಡದ ಬೆನ್ನುಮೂಳೆ ಇದ್ದ ಹಾಗೆ ಮತ್ತು ಅಲ್ಲಿನ ಮಹಿಳೆಯರ ಮೇಲೆ ಪರಿಸರದ ಅವನತಿ ಮತ್ತು ಮರ ಕಡಿಯುವುದು ಅಗಾಧವಾದ ಪರಿಣಾಮವನ್ನು ಬೀರಿದ್ದರಿಂದ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು ಎಂದು ಹೇಳಲಾಗಿದೆ. ಇದು ಎಷ್ಟರಮಟ್ಟಿಗೆ ಚಳುವಳಿಯಲ್ಲಿ ಭಾಗವಹಿಸಿದವರ ಮೇಲೆ ಪರಿನಾಮ ಬೀರಿತು ಎನ್ನುವುದು ಇಂದಿಗೂ ಸಹ ವಾದ–ವಿವಾದಲ್ಲಿದೆ.

- ಆದಾಗ್ಯೂ, ಚಳುವಳಿಯಲ್ಲಿ ಮಹಿಳೆಯರು ಮತ್ತು ಪುರುಷರಿಬ್ಬರೂ ಪರಿಗಣಿಸಬಲ್ಲ ಪಾತ್ರವನ್ನು ನಿರ್ವಹಿಸಿದರು. ಅದರಲ್ಲಿ ಪ್ರಮುಖರೆಂದರೆ–

ಗೌರಿದೇವಿ, ಸುದೇಶದೇವಿ, ಬಚ್ಚಿದೇವಿ, ಚಂಡಿ ಪ್ರಸಾದ್ ಭಟ್, ಸುಂದರ್ಲಾಲ್ ಬಹುಗುಣ, ಗೋವಿಂದಸಿಂಗ್ ರಾವತ್, ಧೂಮ್ ಸಿಂಗ್ ನೇಗಿ ಮತ್ತು ಚಿಪ್ಕೋಚಳುವಳಿಯ ಕವಿಯಾದ ಘನಶಾಮ್ ರಾವೊರಿ, ಅವರು ಅನೇಕ ಪರಿಸರ ಗೀತೆಗಳನ್ನು ರಚಿಸುವ ಮೂಲಕ ಹಿಮಾಲಯ ಜನರಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸಿದರು. ಇದನ್ನು ಹೊರತುಪಡಿಸಿ 1982ರಲ್ಲಿ ಚಂಡಿ ಪ್ರಸಾದ್ ಭಟರು 'ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿ'ಯನ್ನು ಮತ್ತು 2009ರಲ್ಲಿ ಸುಂದರ್‌ಲಾಲ್ ಬಹುಗುಣದವರು 'ಪದ್ಮವಿಭೂಷಣ' ಪ್ರಶಸ್ತಿಯನ್ನು ಪಡೆದರು.

**ನಂತರದ ಪರಿಣಾಮಗಳು**

- 1980ರಲ್ಲಿ ತೆಹ್ರಿ ಜಿಲ್ಲೆಯಲ್ಲಿ ಚಿಪ್ಕೋಚಳುವಳಿಯ ಕಾರ್ಯಕರ್ತರು 'ಡನ್ನೂಲಿ'ಯಲ್ಲಿರುವ ಸುಣ್ಣದಕಲ್ಲು ಗಣಿಯನ್ನು ರಕ್ಷಿಸಿದರು. ಈ ಚಳುವಳಿ ಡೆಹ್ರಾಡೂನ್ ಜಿಲ್ಲೆಯವರೆಗೂ ಹಬ್ಬಿತು. ಅದು ಈಗಾಗಲೆ ವನಸ್ಪತಿ ಮತ್ತು ಪ್ರಾಣಿ ಸಂಕುಲದ ನಾಶದಿಂದಾಗಿ ಕಾಡಿನ ಅವನತಿ ಉಂಟಾಗಿತ್ತು.

- ಚಿಪ್ಕೋ ಚಳುವಳಿಯಿಂದಾಗಿ ಕೆಲವೊಂದು ವರ್ಷಗಳ ನಂತರ ಅಲ್ಲಿ ಕಲ್ಲುಗಣಿಗಾರಿಕೆ ನಿಂತು ಹೋಯಿತು.

- 1980ರಲ್ಲಿ ಚಿಪ್ಕೋ ಚಳುವಳಿಯ ಕಾರ್ಯಕರ್ತರಾದ ಸುಂದರ್ ಲಾಲ್ ಬಹುಗುಣರವರು 'ತೆಹ್ರಿ' ಡ್ಯಾಮ್ ಕಟ್ಟುವುದನ್ನು ವಿರೋಧಿಸಿ 'ಭಗೀರಥಿ' ನದಿಯನ್ನು ಕಾಪಾಡಿದರು. ಇದಾದ ನಂತರ ಸಸ್ಯಗಳ ಮಡಿಗಳ್ಳನ್ನು ಕಾಪಾಡಲು 'ಬೀಚ್ ಬಚಾವೊ' ಆಂದೋಲನವನ್ನು ಆರಂಭಿಸಿದರು. ಅದು ಇಂದಿಗೂ ಮುಂದುವರಿಯುತ್ತಿದೆ.

- ಇದಾದ ನಂತರ ಯು.ಎನ್.ಇ.ಪಿ. ಪ್ರಕಟಿಸಿದಂತೆ ಚಿಪ್ಕೊ ಚಳುವಳಿಯ ಕಾರ್ಯಕರ್ತರು ಸಾಮಾಜಿಕ–ಆರ್ಥಿಕ ಬದಲಾವಣೆ ತರುವಲ್ಲಿ ಮತ್ತು ಕಾಡಿನ ಭೂಮಿಯನ್ನು ನಗರ ಕೇಂದ್ರಿತ ವಸ್ತುಗಳನ್ನು ಉತ್ಪಾದಿಸಲು ಹಂಬಲಿಸುವ ಅಧಿಕಾರಶಾಹಿ ಕೈಗಳಿಂದ ತಮ್ಮ ಕಾಡಿನ ಸಂಪನ್ಮೂಲಗಳ ಮೇಲೆ ಅಧಿಕಾರ ಸಾಧಿಸುವಲ್ಲಿ ವಿಜಯರಾದರು ಎಂದು ಹೇಳಿದೆ.

- ಈ ಚಳುವಳಿಯ ಸಾಮಾಜಿಕ–ಪರಿಸರಾತ್ಮಕ ಚಳುವಳಿಯಾಗಿದ್ದು ಇನ್ನುಳಿದ ಕಾಡಿನ ಪ್ರದೇಶಗಳದ ಹಿಮಾಚಲ ಪ್ರದೇಶ, ರಾಜಸ್ತಾನ, ಬಿಹಾರದಲ್ಲಿ ಹೆಸರಾಗಿದೆ.

- ಪಶ್ಚಿಮದ ಕಣಿವೆ ಮತ್ತು ವಿಂಧ್ಯ ಪರ್ವತಗಳಲ್ಲಿ ನಡೆದ ಮರ ಕಡಿಯುವುದನ್ನು ವಿರೋಧಿಸಿ ಕರ್ನಾಟಕದಲ್ಲಿ ನಡೆದ 'ಅಪ್ಪಿಕೋ ಚಳುವಳಿಗೆ' (1983) ಸ್ಫೂರ್ತಿಯಾಗಿದೆ. ಇದು ಕುಮ್ವಾನ್ ಸ್ಥಳ ಅಪ್ಪಿಕೋ ಚಳುವಳಿಯ ಮೂಲವಾಗಿದ್ದು ಇದು 2000ನೇ ಇಸವಿಯಲ್ಲಿ ಯಶಸ್ವಿಯನ್ನು ಪಡೆಯಿತು.

- ಇತ್ತೀಚಿನ ದಿನಗಳಲ್ಲಿ ಈ ಚಳುವಳಿಯು ಕೇವಲ ಸ್ಫೂರ್ತಿಯನ್ನು ನೀಡದೆ ಜೊತೆಗೆ ಕಾರ್ಯರೂಪದ ಯೋಜನೆಗಳಾದ ನೀರಿನ ನಿರ್ವಹಣೆ, ಇಂಧನ ರಕ್ಷಣೆ, ಅರಣ್ಯೀಕರಣ ಮತ್ತು ಇವುಗಳ ಮರುಬಳಕೆ ಯೋಜನೆಗಳಿಗೆ ಸ್ಫೂರ್ತಿಯನ್ನು ನೀಡಿದೆ. ಇದರ ಜೊತೆಗೆ ಪಂಡಿತರಿಗೆ ಹಿಮಾಲಯ ಮತ್ತು ಭಾರತದ ಪರಿಸರದ ಅವನತಿ ಮತ್ತು ರಕ್ಷಣೆಯ ವಿಧಾನಗಳನ್ನು ಅಧ್ಯಯನ ಮಾಡಲು ಪ್ರೋತ್ಸಾಹವನ್ನು ನೀಡಿದೆ.

- ಮಾರ್ಚ್ 26, 2004ರಂದು ರೇಣಿ, ಲಾತಾ ಮತ್ತು ಉಳಿದ ಹಳ್ಳಿಗಳಾದ ನಿತಿ ಕಣಿವೆಯಲ್ಲಿ ಚಿಪ್ಕೋ ಚಳುವಳಿಯ 30ನೇ ವರ್ಷದ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಅಲ್ಲಿ ಚಿಪ್ಕೋ ಚಳುವಳಿಯಲ್ಲಿ ಭಾಗವಹಿಸಿದ್ದವರೆಲ್ಲಾ ಒಟ್ಟುಗೂಡಿದರು.

- ಈ ಚಳುವಳಿಯ ಸಮಾರಂಭ ಲಾತಾ ಹಳ್ಳಿಯಲ್ಲಿ ಆರಂಭವಾಯಿತು. ಅದು ಚಿಪ್ಕೋ ಚಳುವಳಿಯ ನಾಯಕಿಯಾದ ಗೌರಿದೇವಿಯವರ ಊರಾಗಿತ್ತು ಮತ್ತು ಚಿಪ್ಕೋ ಚಳುವಳಿಯ ನಾಯಕರಾದ ಗೋವಿಂದ್ ಸಿಂಗ್ ರಾವತ್ನ ಹೆಂಡತಿಯಾದ ಪುಷ್ಪದೇವಿ, ಹೆನ್ವಾಲ್ ಘಟಿಯ ಚಿಪ್ಕೋ ನಾಯಕರಾದ ಧೂಮ್ ಸಿಂಗ್ ನೇಗಿ, ತೆಹರಿ ಗರ್ಹ್ವಾಲ್ ಮುಂತಾದವರು ಭಾಗವಹಿಸಿದ್ದರು. ಈ ಮೆರವಣಿಗೆ 1974, ಮಾರ್ಚಿ 24ರಲ್ಲಿ ಚಿಪ್ಕೋ ಘಟನೆ ನಡೆದಿದ್ದ ರೇಣಿ ಹಳ್ಳಿಯ ಹತ್ತಿರ ಮುಂದುವರೆಯಿತು. ಇದು ದೇಶದಲ್ಲಿ ಈಗಿನ ಪರಿಸ್ಥಿತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಆರಂಭದ ಗುರುತಾಗಿದೆ.

■

# 3. ಗರುಡಗಂಬದ ದಾಸಯ್ಯ

**– ಗೊರೂರು ರಾಮಸ್ವಾಮಿ ಐಯ್ಯಂಗಾರ್**

ನಮ್ಮ ಊರಿನ ಹೊಲಗೇರಿಯ ಆದಿ ಕರ್ಣಾಟಕರು ಬಹಳ ದಿವಸಗಳಿಂದ ಭಜನೆಗೆ ಬೇಕಾಗುವ ಗರುಡಗಂಬ ಒಂದನ್ನು ತರಿಸಿಕೊಡಿ ಅಂತಾ ಹೇಳ್ತಾ ಇದ್ರು. ನಾನೂ ಆಗ್ಲಿ ಆಗ್ಲಿ ಅಂತಾ ಹೇಳ್ತಾ ಒಂದೂವರೆ ವರುಷ ತಳ್ಳಿದೆ. ಆವತ್ತು ಮಧ್ಯಾಹ್ನ ಬೆಂಗಳೂರಿಗೆ ಹೋಗಿದ್ದಾಗ. ನನ್ನ ಸ್ನೇಹಿತ ಶಂಕರಪ್ಪ "ಒಂದು ಗರುಡಗಂಬ, ಮಲ್ಲೇಶ್ವರದಲ್ಲಿ ಮದ್ಯಪಾನ ನಿರೋಧದ ಮೇಲೆ ಉಪನ್ಯಾಸ ಮಾಡುವ ಸಾಧುವಿನ ಬಳಿ ಇದೆ. ಆ ಸಾಧುವಿಗೂ ನನಗೂ ಬಹಳ ಸ್ನೇಹ. ಈ ದಿವಸ ಅವನು ಬಿನ್ನೀ ಮಿಲ್ಲಿನ ಬಳಿ ಹೆಂಡ ಸಾರಾಯಿ ಕುಡಿಯುವುದು ಪಾಪ ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುತ್ತಾನೆ. ಅವನಿಗೆ ಅಫೀಮನ್ನು ಕುಡಿಯದಿದ್ದರೆ ಉಪನ್ಯಾಸಕ್ಕೆ ಸ್ಫೂರ್ತಿಯೇ ಬರುವುದಿಲ್ಲವಂತೆ. ಆದರೆ ಅಫೀಮಿಗೆ ಅವನ ಕೈಯಲ್ಲಿ ಒಂದು ಕಾಸೂ ಇಲ್ಲ. ಗರುಡಗಂಬವನ್ನು ಕೊಟ್ಟುಬಿಡುತ್ತಾನಂತೆ, ಅದನ್ನು ನೀನು ಕೊಂಡುಕೋ" ಎಂದನು. ನಾನು ನಿರುತ್ಸಾಹದಿಂದ "ಹೋಗಯ್ಯ ಆ ಗರುಡಗಂಬ ಕೊಂಡುಕೊಂಡು ನಾನು ತಿರುಪಕ್ಕೆ ತಾನೇ ಹೋಗಬೇಕು?" ಎಂದೆ. ಶಂಕರಪ್ಪ "ನಿಮ್ಮ ಆದಿಕರ್ಣಾಟಕರಿಗೆ ಉಪಯೋಗವಾಗುತ್ತೆ. ಕಡಿಮೆ ಬೆಲೆಗೆ ಕೊಟ್ಟು ಬಿಡುತ್ತಾನೆ, ತೆಗೆದುಕೋ" ಎಂದು ಬಲಾತ್ಕರಿಸಿ 2ರೂ. ಬೆಲೆಬಾಳುವ ಗರುಡಗಂಬವನ್ನು 10 ಆಣೆಗೆ ನನಗೆ ಕೊಡಿಸಿದನು. ಸಾಧುವು ಆ ದುಡ್ಡಿಗೆ ಅಫೀಮನ್ನು ಸೇವಿಸಿ ತನ್ನ ಉಪನ್ಯಾಸಕ್ಕೆ ಬಿನ್ನಿ ಮಿಲ್ಲಿನ ಕಡೆಗೆ ಹೊರಟು ಹೋದನು.

ಗರುಡಗಂಬ 10 ಆಣೆಗೆ ಸಿಕ್ಕಿದುದರಿಂದ ನನಗೆ ಸಂತೋಷವೇ ಆಯಿತು. ಹಿಂದೆ ಒಂದೆರಡು ಸಾರಿ ಒಂದೂವರೆ ರೂಪಾಯಿಗೆ ಕೇಳಿದ್ದರೂ ಅದು ಸಿಕ್ಕಿರಲಿಲ್ಲ. ನಮ್ಮ ಆದಿಕರ್ಣಾಟಕರಿಗೆ ಪರಮ ಸಂತೋಷವುಂಟಾಗುವುದೆಂಬ ಹುರುಪಿನಿಂದ, ನಾನು ಮೂರು ಗಂಟೆಯ ರೈಲಿಗೆ ಗರುಡಗಂಬವನ್ನು ಕೈಯಲ್ಲಿ ಹಿಡಿದು ಕೊಂಡು ಮಲ್ಲೇಶ್ವರದಿಂದ ಹೊರಟೆ. ನಾನು ಕೃಷ್ಣ ಬಜಾರಿನ ಮುಂದೆ ಬಂದಾಗ ಎಲ್ಲರೂ ನನ್ನ ಕಡೆಯೇ ನೋಡುತ್ತಿರುವಂತೆ ತೋರಿತು. "ಇವರು ನನ್ನನ್ನೇ ಕುರಿತು ನೋಡುವಷ್ಟು ನಾನೇನು ಸುಂದರನಲ್ಲವಲ್ಲಾ"

ಎಂದುಕೊಂಡು. ಇನ್ನೂ ನಾಲ್ಕು ಹೆಜ್ಜೆ ಮುಂದಕ್ಕೆ ಹಾಕಿದೆ. ಆಗ ತಟ್ಟನೆ ಹೊಳೆಯಿತು. ನಾನು ಗರುಡಗಂಬವನ್ನು ಕೈಲ್ಲಿ ಹಿಡಿದುಕೊಂಡು ಹೋಗುತ್ತಿದ್ದುದನ್ನು ಜನರುಕಂಡು "ಇವನಿಗೆ ಜೋಳಿಗೆ, ಜಾಗಟೆ ಇಲ್ಲ. ಆದರೂ ಇವನು ದಾಸಯ್ಯನೇ ಸಂದೇಹವಿಲ್ಲ" ಎಂದು ಯೋಚಿಸಿದ್ದರು. ನನ್ನ ವೇಷವೇನೋ ಸ್ವಲ್ಪಮಟ್ಟಿಗೆ ಜಾಗಟೆ ಜೋಳಿಗೆಯ ಗುರುವಿಗೆ ಸಮಾನವಾಗಿಯೇ ಇದ್ದಿತು. ಮಾಸಿದ ಒಂದು ಬಿಳಿಯ ಖಾದಿ ದಟ್ಟಿ, ಮಿತಿಮೀರಿ ಬೆಳೆದ ದೇಹಕ್ಕೆ, ಬಿಗಿಯಾಗಿ ಮೇಲಕ್ಕಾಗಿದ್ದ ಒಂದು ಅಂಗಿ. ಅದರ ಮೇಲೆ ಹೊದೆದುಕೊಂಡಿದ್ದ ಕೊಳೆಯಾದ ಅಂಗವಸ್ತ್ರ. ಹೆಗಲ ಮೇಲೆ ನೇತಾಡುತ್ತಿದ್ದ ಅದರ ತುದಿಯಲ್ಲಿ ಕಟ್ಟಿದ್ದ ಸವತೆಕಾಯಿಯ ಗಂಟು. ವೈದಿಕರಾದ ನಮ್ಮ ತಂದೆಯವರು ಬೆಂಗಳೂರಿಗೆ ಬರುವರೆಂದು ವದಂತಿ ಇದ್ದುದರಿಂದ ಮುಖಕ್ಷೌರಮಾಡಿಸದೆ ಬೆಳೆಸಿದ್ದ, ಚೂಪಾದ, ಅರದಂತಿದ್ದ ಕರಿಯ ಗಡ್ಡ. ಇವು ಆಗಿನ ನನ್ನ ವೇಷದ ಕೆಲವು ವೈಚಿತ್ರಗಳು. ಇದೇ ವೇಷದಲ್ಲಿ ಹೋಟೇಲಿನಲ್ಲಿ ಕುಳಿತಿದ್ದ ನನ್ನನ್ನು ನೋಡಿ ಹಿಂದೆ ಒಬ್ಬನು.... "ಸುಮ್ಮನೆ ಕುಕ್ಕರಬಡಿದಿರೋಕೆ ನಿನಗೆ ಸಂಬಳಾ ಕೊಡೋದು. ಹೋಗಿ ಬೇಗ ದೋಸೆ ತೆಗೆದುಕೊಂಡು ಬಾ" ಎಂದಿದ್ದನು. ನಾನು ದಾಸಯ್ಯನೆಂಬುದು ಜನರ ಮನಸ್ಸಿಗೆ ತಿಳಿಯಿತೆಂದು ನನಗೆ ಹೊಳೆದ ಕೂಡಲೇ, ನನಗೆ ಉಂಟಾದ ಅನುಮಾನ ಹೇಳತೀರದು. ಭೂಮಿಯು ಅಂದು ನನ್ನನ್ನು ಅಲ್ಲೇ ನುಂಗಿಕೊಂಡಿದ್ದರೆ ನನಗೇನೂ ದುಃಖ ಉಂಟಾಗುತ್ತಿರಲಿಲ್ಲ.

ನಾನು ಏನು ಮಾಡಬೇಕೆಂದು ತೋರದೆ ಎರಡು ನಿಮಿಷ ಅಲ್ಲೇ ಸುಮ್ಮನೆ ನಿಂತುಬಿಟ್ಟೆ. ಆ ಎರಡು ನಿಮಿಷಗಳಲ್ಲಿ ನೂರಾರು ಜನ ನನ್ನ ಎದುರಿಗೆ ಹೋದರು. ಅವರೆಲ್ಲರಿಗೂ ನನ್ನ ಗರುಡಗಂಬದಮೇಲೆ ದೃಷ್ಟಿಯಿದ್ದಿತೇ ಹೊರತು ಮತ್ತಾವುದರಮೇಲೂ ಇರಲಿಲ್ಲ. ಅವರು ನನ್ನ ಕಡೆಯೇ ನೋಡಿಕೊಂಡು ಹಾಸ್ಯ ಮಾಡುತ್ತಾ ಮಾತನಾಡುತ್ತಿರುವಂತೆ ತೋರಿತು. ಹಾಳಾದ್ದನ್ನು ಬಟ್ಟೆಯಲ್ಲಾದರೂ ಸುತ್ತಿಕೊಳ್ಳೋಣ ಎಂದರೆ ಅದು ಎಣ್ಣೆಮಯವಾಗಿದ್ದುದರಿಂದ ಅದಕ್ಕೂ ಅವಕಾಶವಿರಲಿಲ್ಲ. ಹಾಗೂ ಹೀಗೂ ಮಲ್ಲೇಶ್ವರದ ಸಂಪಿಗೆ ರಸ್ತೆಯ ಗಲ್ಲಿಯಲ್ಲಿ ಹಾದು ನನ್ನ ಸ್ನೇಹಿತನ ಕೊಠಡಿಗೆ ಹೋಗಿ ಅದನ್ನು ಇಟ್ಟು, ಸದ್ಯ ಬದುಕಿಕೊಂಡನೆಂದು ನಿಟ್ಟುಸಿರು ಬಿಟ್ಟೆ.

ಆ ಸ್ನೇಹಿತನ ಕೊಠಡಿಗೆ ಎಷ್ಟೋ ಜನರು ಬಂದರು. ಅವರಿಗೆಲ್ಲ ಅದರ ಮೇಲೆ ಕಣ್ಣು. ಎಲ್ಲರೂ ಹಾಸ್ಯಮಾಡುವವರೇ. ಒಬ್ಬನಂತೂ ನನಗೂ ಆ ಗರುಡ ಗಂಬಕ್ಕೂ ಸಂಬಂಧವಿಲ್ಲವೆಂದುಕೊಂಡು... "ಹಾಳಾದ ದಾಸಯ್ಯ ಯಾರಯ್ಯಾ ನಿನಗೆ ಗಂಟುಬಿದ್ದೋನು! ಒಳ್ಳೆಯ ಸ್ನೇಹಿತರನ್ನೇ ಸಂಪಾದಿಸಿದ್ದೀಯೇ! ದಾಸಯ್ಯಗಳು, ಭಿಕ್ಷುಕರು, ಬುಡಬುಡಕೆಯವರು, ಗೋಪಾಳದವರು ಇವರೇ ನಿನ್ನ ಸ್ನೇಹಿತರು, ನಿನ್ನ ಯೋಗ್ಯತೆಗೆ ಬೆಂಕಿ ಹಾಕಿತು" ಎಂದನು. ನನ್ನ ಸ್ನೇಹಿತ ಗಲ್ಲಿನ ಶಿಕ್ಷೆಗೆ ಗುರಿಯಾದ ನಿರಪರಾಧಿಯ ಮುಖದಂತೆ ಮುಖವನ್ನು ಮಾಡಿಕೊಂಡು ನನ್ನ ಕಡೆ ನೋಡಿದನು. ನಾನು ಮಂಕನಂತೆ ಸುಮ್ಮನಿದ್ದು ಬಿಟ್ಟೆ.

ಗರುಡಗಂಬದ ಮೇಲೆ ಕೆಲವು ಕಾಗದಗಳನ್ನಾದರೂ ಮುಚ್ಚೋಣವೆಂದರೆ ಜನ ಆ ಕೊಠಡಿ ಬಿಟ್ಟು ಹೊರಕ್ಕೆ ಹೊರಡಲೇ ಇಲ್ಲ. ಅವರೆದುರಿಗೆ ಮುಚ್ಚಿದರೆ "ನಾನೇ" ಎಂದು ಅವರಿಗೆ ಪೂರ್ತಾ ಗೊತ್ತಾಗಿ ಬಿಡುವುದಲ್ಲ ಎಂಬ ಭಯದಿಂದ ನಾನು ಮುಚ್ಚಲೇ ಇಲ್ಲ. ಆ ಜಾಗವನ್ನು ಬಿಟ್ಟು ಹೊರಕ್ಕೆ ಹೊರಡುವುದಕ್ಕೆ ಕೂಡ ನನಗೆ ಬುದ್ಧಿ ಹೊಳೆಯಲಿಲ್ಲ. ಭಯಂಕರವಾದ ಆಪಾದನೆಗಳಿಗೆ ಗುರಿಯಾದವನು ಹೇಗೆ ನಿರುತ್ಸಾಹದಿಂದ ಬಂದುದನ್ನೆಲ್ಲಾ ಸಹಿಸಲು ಸಿದ್ಧನಾಗಿರುವನೋ, ನಾನು ಆ ರೀತಿ ಬಂದ ಅನ್ಯಾಯವನ್ನೆಲ್ಲಾ ಸಹಿಸಲು ಸಿದ್ಧನಾಗಿ ಕುಳಿತುಬಿಟ್ಟೆ.

ರಾತ್ರಿ ಹತ್ತು ಘಂಟೆ ರೈಲಿಗೆ ನಾನು ಹೊರಡಬೇಕಾಗಿದ್ದಿತು. ಆ ಹೊತ್ತಿಗಾದರೂ ಬಂದಿದ್ದವರು ನನ್ನ ಸ್ನೇಹಿತನ ಕೊಠಡಿಯನ್ನು ಬಿಟ್ಟು ಹೊರಡಬಹುದೆಂದು ನಿರೀಕ್ಷಿಸುತ್ತಿದ್ದೆ. ಒಂಭತ್ತೂವರೆ ಘಂಟೆಯವರೆಗೆ ಕಾದರೂ ಆ ಪಾಪಿಗಳು ಆ ಕೊಠಡಿಯನ್ನು ಬಿಟ್ಟು ಹೊರಕ್ಕೆ ಹೊರಡಲಿಲ್ಲ. ನಾನು ವಿಧಿಯಿಲ್ಲದೆ ಅವರ ಎದುರಿಗೇ ತಿರುಪೆ ಕಂಬವನ್ನು ಹೊತ್ತುಕೊಂಡು ರೈಲ್ವೇ ಸ್ಟೇಷನ್ನಿಗೆ ಬಂದೆನು.

ನಾನು ಕುಳಿತ ಗಾಡಿಯಲ್ಲಿ ಒಬ್ಬ ದೊಡ್ಡ ಮನುಷ್ಯನು ಕುಳಿತಿದ್ದನು. ನಾನು ಬೆಂಚಿನ ಕೆಳಗೆ ಇಟ್ಟ ಗರುಡಗಂಬದ ಕಡೆಯೇ ಅವನು ನೋಡುತ್ತಿದ್ದನು. ಇಂಗ್ಲಿಷಿನಲ್ಲಿ ಮಾತನಾಡಲು ಪ್ರಾರಂಭಿಸಿದೆ. ಆದರೂ ಅವನು ನನ್ನ ವಿಷಯದಲ್ಲಿ ಅಸಮಾಧಾನದಿಂದಲೇ ಮುಖವನ್ನು ಗಂಟುಹಾಕಿಕೊಂಡಿದ್ದನು.

ಆ ಹಾಳಾದ ಗರುಡಗಂಬವನ್ನು ತಲೆಕೆಳಕಾಗಿ ಹಿಡಿದುಕೊಂಡು ನಮ್ಮೂರ ಸ್ಟೇಷನ್ನಿನಲ್ಲಿ ಇಳಿದು, ಆದಿಕರ್ಣಾಟಕರ ಭಜನೆ ಮಂದಿರದ ಕಡೆಗೆ ಕತ್ತಲೆಯಲ್ಲಿ ಓಡುತ್ತಿದ್ದೆ. ಸ್ಟೇಷನ್ ಮಾಸ್ಟರು.... "ಅದ್ಯಾರೋ ದಾಸಯ್ಯ ಟಿಕಿಟಿಲ್ಲದೆ ಆ ಕಡೆಯಿಂದ ಓಡ್ತಿರೋನು" ಎಂದು ಕೂಗಿದನು. ನನ್ನ ಹೊಟ್ಟೆಯಲ್ಲಿ ಅಡಗಿದ್ದ ಸಿಟ್ಟೆಲ್ಲವೂ ಹೊರಗೆ ಬಂದು "ನಿಮ್ಮಪ್ಪ ದಾಸಯ್ಯ" ಎಂದು ಟಿಕೆಟ್ಟನ್ನು ಎಸೆದು ದೆವ್ವ ಹಿಡಿಯಲ್ಪಟ್ಟವನಂತೆ ಮನೆಗೆ ಓಡಿ ಹೋದೆನು.

■

# 4. ಜೀವನದಿ

– ಡಾ. ಪದ್ಮಿನಿ ನಾಗರಾಜು

'ಅಮ್ಮ ನನ್ನ ಮಗನ ಮೇಲೆ ನಿಮ್ಮ ಮಗನ ಕಡೆ ರೆಡ್ಡಿಯವರು ಪೋಲಿಸ್ ಕಂಪ್ಲೆಂಟ್ ಕೊಟ್ಟಿದ್ದಾರಂತೆ, ನೀವೇ ದಾರಿ ತೋರಿಸಬೇಕು' ಲತೀಫ, ಪದ್ದಮ್ಮನ ಹತ್ತಿರ ಸಮಸ್ಯೆ ಬಗೆಹರಿಸುವಂತೆ ದೈನ್ಯನಾಗಿ ಕೇಳುತ್ತಿದ್ದ. 'ನೋಡು ಲತೀಫಾ...ನನ್ನ ಮಗ ಈಗ ನನ್ನ ಮಡಿಲಿನ ಕೂಸೇನಲ್ಲಾ. ನನ್ನೇ ಸರಿಯಾಗಿ ನೋಡಿಕೊಳ್ಳಲ್ಲಾ ಇನ್ನು ನನ್ನ ಮಾತನ್ನ ಕೇಳ್ತಾನಾ? ಆದ್ರೂ...ನೋಡು ನಿನ್ನ ಮಗ ಏನ್ ಮಾಡಿದ್ದಾನೆ ಅಂತ ನಿನಗೂ ಗೊತ್ತು. ಅಂತದ್ರಲ್ಲಿ...' 'ಅವನ ಮೈಯಲ್ಲಿ ಸೈತಾನ ಹೊಕ್ಕಿದ್ದ ಅಂತ ಕಾಣುತ್ತೆ. ನನ್ನ ಮಾತೇ ಕೇಳಲ್ಲ. ಅವನದೇ ಏನೇನೋ ಮಾತಾಡ್ತನೆ. ನೀವು, ನಾವು ಆ ಕಾಲಕ್ಕೆ ಹೇಗಿದ್ವಿ ಈಗಿನವಕ್ಕೆ ಏನಾಗಿದೆ?' ಲತೀಫನ ಮಾತಿಗೆ ಪದ್ದಮ್ಮ ಅಂದಿನ ಆ ದಿನಗಳ ದಾರಿಗೆ ಹೊರಳಿದಳು.

ಲತೀಫ ಈ ಊರಿಗೆ ಬಂದದ್ದೇ ಒಂದು ಕತೆ. ಮಾಯಸಂದ್ರದಲ್ಲಿ ಆ ಕಾಲಕ್ಕೆ ಪ್ಲೇಗು ಬಂದು ನೂರಾರು ಜನ ಇಲಿಗಳಂತೆ ಉದುರಿ ಹೋಗಿ ಸಾವಿಗೂ ಕಣ್ಣೀರು ಸುರಿಸುವವರು ಯಾರಾದರು ಉಳಿಯುವರೋ ಇಲ್ಲೋ ಎನ್ನುವ ಕಾಲಕ್ಕೆ ಊರಿನ ಮುಖ್ಯಸ್ಥರು ಬೇರೆ ಜಾಗಕ್ಕೆ ಹೋಗುವ ನಿರ್ಧಾರ ಮಾಡಿದ್ದರು. ತಮ್ಮ ಮನೆಗಳನ್ನು ತೊರೆದು ಬದುಕಿದರೆ ಸಾಕೆಂದು ಜೀವ ಕೈಯಲ್ಲಿಟ್ಟು ಪ್ಲೇಗು ಅಂಟಿದವರನ್ನು ನಿರ್ಧಯವಾಗಿ ಊರಲ್ಲೇ ಬಿಟ್ಟು ತಿಂಗಳುಗಟ್ಟಲೆ ಹೊಸ ಜಾಗದಲ್ಲಿ ಗುಡ್ಲುಗಳನ್ನು ಹಾಕಿ ಪ್ಲೇಗು ಇಲ್ಲಿಗೂ ಒಕ್ಕರಿಸಿದರೇನು ಎಂಬ ಭಯದಲ್ಲೇ ರಾತ್ರಿ ಹಗಲು ಕಳೆದರು. ದಿನಗಳೆದಂತೆ ಕಾಯಿಲೆ ಹಿಂದೆ ಸರಿದು ಬದುಕುವ ಆಸೆ ಕಣ್ಣ ಮುಂದಾದಾಗ ತಾವು ಗುಡ್ಲು ಹಾಕಿದ್ದ ಜಾಗದಲ್ಲೇ ಮನೆಕಟ್ಟುವ ನಿರ್ಧಾರ ಮಾಡಿದರು. ಊರಿನ ಹೆಸರ ಬಗ್ಗೆಯೂ ಯಾರೂ ತಲೆಕೆಡಿಸಿಕೊಳ್ಳದಂತೆ ಹಳೆ ಮಾಯಸಂದ್ರವೇ ಮುಂದೆ ಹೊಸ ಮಾಯಸಂದ್ರವಾಗಿ ನಂತರ ಮಾಯಸಂದ್ರವಾಗಿ ಜನರ ಬಾಯಲ್ಲಿ ಉಳಿಯಿತು. ಸುತ್ತಮುತ್ತ ಬೇಕಾದಷ್ಟು ಮಾಯಸಂದ್ರಗಳಾದ ಮೇಲೆ ಈ ಊರನ್ನು ಜಡೆ ಮಾಯಸಂದ್ರ ಅಂತ ಕರೆಯಲು ಶುರು ಮಾಡಿದರು. ಜಡೆಮುನಿ ಆಶೀರ್ವಾದ ಎಂಬ ಕಥೆ ಬೇರೆ ತಗುಲಿಕೊಂಡಿತು.

ಇಂತಹ ಜಡೆ ಮಾಯಸಂದ್ರಕ್ಕೆ ಬಂದು ಬದುಕು ಪ್ರಾರಂಭಿಸಿದವರಲ್ಲಿ ಎಲ್ಲಾ ಜಾತಿಯವರು ಇದ್ದರು. ಮುಸ್ಲಿಂ ಕುಟುಂಬ ಒಂದೆರೆಡು ಹಳೆಯೂರಲ್ಲಿ ನೆಲೆಸಿದ್ದವರು ಹೊಸ ಊರಲ್ಲಿ ಬದುಕು ಕಟ್ಟಿದ್ದರು. ನಂತರದಲ್ಲಿ ಬೇರೆ ಊರಿಂದ ಬಂದವರೂ ಸೇರಿ ಮಾಯಸಂದ್ರಕ್ಕೊಂದು ಕಳೆ ಬಂದಿತ್ತು. ಊರ ಕಾಯುವ ಕೊಲ್ಲಾಪುರದಮ್ಮ, ಜೈನರ ಬಸದಿ, ಹಿಂದೂಗಳ ದೇವಸ್ಥಾನ, ಹೀಗೆ ತಲೆಯೆತ್ತಿ ನಿಂತು ಊರೊಂದಿಗೆ ಜನರೂ ಬೆಳೆದರು.

ಒಂದೊಂದು ಬೀದಿಗಳೂ ಅವರದೇ ಜಾತಿಯವರ ಗುರುತಾಗಿ ಕರೆದುಕೊಳ್ಳಲಾರಂಭಿಸಿದ್ದವು. ಅಗ್ರಹಾರ, ಜೈನರ ಬೀದಿ, ಹೊಲೆಯರ ಹಟ್ಟಿ, ತುರುಕರ ಬೀದಿ ಹೀಗೆ. ಕೃಷಿ, ವ್ಯಾಪಾರವೇ ಮುಖ್ಯವಾಗಿದ್ದ ಊರಲ್ಲಿ ಪದ್ದಮ್ಮನ ಅಪ್ಪ ಧರ್ಮಣ್ಣ ತನ್ನ ಅಪ್ಪ ಅಮ್ಮನೊಂದಿಗೆ ನೆಲೆ ನಿಂತಿದ್ದ. ಜೈನರ ಬೀದಿಯಲ್ಲಿದ್ದ ಧರ್ಮಣ್ಣ ಅಡಕೆ ವ್ಯಾಪಾರವನ್ನು ಸಂತೆಗಳಲ್ಲಿ ಮಾಡುತ್ತಾ ಕೈತುಂಬಾ ಸಂಪಾದಿಸುತ್ತಿದ್ದ. ಅಪ್ಪ ಅಮ್ಮ ತೋರಿಸಿದ ಸಂಬಂಧದ ಹುಡುಗಿ ಜ್ವಾಲಳನ್ನು ಮದುವೆಯಾಗಿದ್ದ. ಚಿಕ್ಕ ವಯಸ್ಸಿನ ಜ್ವಾಲ ಹಾಸನದ ಹತ್ತಿರದ ದೇವೇಹಳ್ಳಿಯಿಂದ ಮಾಯಸಂದ್ರಕ್ಕೆ ಗಾಡಿಯಲ್ಲಿ ಬಹು ಕನಸು ಹೊತ್ತು ಬಂದಿದ್ದಳು. ಆತ್ತೆ–ಮಾವನ ಸೇವೆ, ಅಡುಗೆಯಲ್ಲಿನ ಅಚ್ಚುಕಟ್ಟುತನದಿಂದ ಬೇಗ ಎಲ್ಲರ ಮನಸ್ಸು ಗೆದ್ದಳು. ಧರ್ಮಣ್ಣ ತಾನಾಯಿತು ಅಡಕೆ ವ್ಯವಹಾರ, ಹೊಲ ಗದ್ದೆ ಎಂದು ನೆಮ್ಮದಿಯಿಂದ ಇದ್ದ.

ಒಂದು ದಿನ ಶುಕ್ರವಾರದ ಸಂತೆಗೆ ಎಡೆಯೂರಿಗೆ ಹೋಗಿದ್ದ ಧರ್ಮಣ್ಣ ಬರುವಾಗ ಎಂಟತ್ತು ವರ್ಷದ ಪುಟ್ಟ ಹುಡುಗನನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದ. 'ಅವ್ವಾ...ಇವನು ಲತೀಫ ಅಂತ. ನಾಳೆಯಿಂದ ನಮ್ಮನೆಯಲ್ಲೇ ಇರ್ತಾನೆ. ಯಾರು ಇಲ್ಲದ ಅನಾಥ. ಸಂತೆಲಿ ಅದು ಇದು ಕೆಲಸ ಮಾಡೋನು, ಇವತ್ತು ಅದೇನೋ ದುಡ್ಡು ಕದ್ದ ಅಂತ ಆ ಬೋಳಿಮಗ ಕಾಂತ ಬಾಯಿಗೆ ಬಂದಂಗೆ ಈ ಹುಡ್ಗನ್ನ ಬೈಯ್ತಿದ್ದ, ನಾಲ್ಕೇಟೂ ಬಿದ್ದವೆ ಅನ್ನು. ನಾನು ಮಧ್ಯ ಹೋಗಿಲಿಲ್ಲ ಅಂದ್ರೆ ಇವನು ಬೀದಿ ನಾಯಿ ಪಾಡಾಯ್ತಿದ್ದ. ಅದ್ಕೆ ಕರಕೊಂಡು ಬಂದೆ'. 'ಅಲ್ಲಾ ಕಣ್ಲಾ...ಕಾಂತಂಗೆ, ನಿಂಗೆ ಅಡಕೆ ವ್ಯವಹಾರದಾಗೆ ಈಗಾಗಲ್ಲೇ ಮನಸ್ಸು ಮುರದದೇ....ಅಂತಾದ್ರಲ್ಲಿ ಇದು ಬೇಕಾ?' ಅಂತ ಅವ್ವ ರಾಗ ತೆಗೆದದ್ದನ್ನು ನೋಡಿ ಧರ್ಮಣ್ಣನ ಅಪ್ಪನೂ 'ಹೇ...ಯಾವ್ದೋ ಬೇರೆ ಜಾತಿಯವನಿಗಾಗಿ ನಮ್ಮವರನ್ನು ಎದುರು

ಹಾಕ್ಕತಾರೆನಲ್ಲಾ? ನಿಂಗೆ ಬುದ್ದಿ ಅದಾ? ದುಡ್ಡು ಕದ್ದ ಅಂತ ಅವನು ಹೇಳ್ದ ಅಂತ ಬೇರೆ ಅಂತಿ ಅಂತದ್ರಲ್ಲಿ ಕಳ್ಳನ್ನ ಮನೆಯಲ್ಲೆ ಇಟ್ಟಗಂಡು....ಗೊತ್ತಿದ್ದೂ ಗೊತ್ತಿದ್ದೂ ಹಾವು ಸಾಕೋ ವ್ಯವಹಾರ ಅಲ್ವಾ? ತೆಗಿ ತೆಗಿ ಅವನು ಈ ಮನೆಲಿ ಇರದು ಬೇಡ' ಅಂತ ಕಡ್ಡಿ ಮುರಿದಂಗೆ ಲೋಕಣ್ಣ ಮಾತಾಡಿದ. ಇದನ್ನೆಲ್ಲಾ ಅಲ್ಲೇ ನಿಂತು ನೋಡುತ್ತಿದ್ದ ಲತೀಫನಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ನಾನು ಕಳ್ಳ ಅಲ್ಲ ಅಂತ ಎದೆ ಬಗೆದು ಹೇಂಗೆ ತೋರ್ಸೋದು ಅನ್ನುವ ಆತಂಕ ಒಂದು ಕಡೆಯಾದರೆ ತನ್ನ ಮುಂದಿನ ಬದುಕೇನು ಎಂಬ ಇಬ್ಬದಿಯಲ್ಲಿ ಸಿಲುಕಿ ಮಾತನಾಡುವವರ ಕಡೆಗೊಮ್ಮೆ ದೈನ್ಯದಿಂದ ನೋಡುತ್ತಿದ್ದ. 'ನಾನು ಸಂತೆಲಿ ಈ ಹುಡ್ಗನ್ನ ಬಹಳ ದಿನದಿಂದ ನೋಡಿದ್ದಿನಿ. ಅವನನ್ನ ಕಾಂತನ ವಿರೋಧ ಕಟ್ಟುಕೊಂಡು ಕರಕೊಂಡು ಬಂದಿದ್ದೀನಿ, ಈಗ ಅವನನ್ನು ಕಳುಹಿಸುವ ಮಾತೇ ಇಲ್ಲ ಅದೇನ್ ಮಾಡ್ತಿರೋ ನಾ ಕಾಣೆ ಅವನು ಇಲ್ಲಿ ಇರ್ತಾನೆ ಅಷ್ಟೆ' ಎಂದು ಧರ್ಮಣ್ಣ ಧೃಡವಾಗಿ ಮಾತಾಡಿದಾಗ ಲತೀಫನಿಗೆ ಜನ್ನತ್ತಿನ ಸಮೀಪಕ್ಕೆ ಬಂದಂತೆ ಆಸೆಯ ಕಿರಣವೊಂದು ಮೂಡಿತು. 'ಇರಲಿ ಬಿಡಿ ಮಾವ...ನಾವು ತಿನ್ನುವ ತುತ್ತಲ್ಲಿ ಅವನಿಗೂ ಒಂದು ತುತ್ತು ಕೊಡಲು ಯಾಕಿಷ್ಟು ಮಾತು' ಅಂತ ಅಲ್ಲಿಯವರಗೆ ಸುಮ್ಮನಿದ್ದ ಜ್ವಾಲ ಮಾತನಾಡಿದ್ದಳು. 'ನಿಂಗೆ ಇದೆಲ್ಲಾ ತಿಳಿಯಲ್ಲ ಸುಮ್ನಿರು. ಯಾವುದೋ ಜಾತಿಯವನನ್ನು ಮನೆಗೆ ಕರೆದುಕೊಂಡು ಬಂದ್ರೆ ಊರಲ್ಲಿ ಸುಮ್ನೆ ಇರ್ತಾರಾ? "ಸುಮ್ನಿರಲಾರದೆ ಇರುವೆ ಬಿಟ್ಟಕಂಡ್ರು" ಅಂತಾರಲ್ಲಾ ಅಂತದ್ದು ಬೇಕಾ?' ಲತೀಫನಿಗೆ ನಿಂತು ನಿಂತು ಕಾಲು ಜೋಮಿಡಲಾರಂಭಿಸಿತ್ತು. ಯಾರೂ ಕುಳಿತುಕೋ ಅನ್ನದೆ ಕುಳಿತುಕೊಳ್ಳುವುದಾದರೂ ಹೇಗೆ ಎಂಬ ಸಂಕಟ ಒಂದು ಕಡೆಯಾದರೆ ಮೈಮೇಲಿನ ಏಟುಗಳಿಂದ ನೋವು ಇಮ್ಮಡಿಯಾಗುತ್ತಿತ್ತು. ಬೆಳಗ್ಗೆ ತಿಂದಿದ್ದ ಎರಡು ತಟ್ಟೆ ಇಡ್ಲಿಗಳು ಯಾವಾಗಲೋ ಪಾತಾಳ ಸೇರಿ ಕಣ್ಣು ಕತ್ತಲಾಗಲಾರಂಭಿಸಿತ್ತು. 'ಬಂದಾಗಲಿಂದ ಮಾತಾಡ್ತನೇ ಇದ್ದೀರಿ, ಮಾತು ಆಮೇಲಾಗಲಿ ಮೊದಲು ಊಟ ಮಾಡುವಿರಂತೆ ಎದ್ದೇಳಿ' ಎಂದು ಲತೀಫನ ಮನದಿಂಗಿತವನ್ನು ಅರಿತವಳಂತೆ ಜ್ವಾಲ ಹೇಳುತ್ತಿದ್ದಂತೆ ಧರ್ಮಣ್ಣ 'ಹೇ ಲತೀಫ...ಹಿತ್ತಿಲ ಬಾಗಿಲಿಂದ ಬಾ ಹೋಗು' ಎಂದು ಅವನಿಗೆ ಬಾಗಿಲು ತೋರಿಸಿದ. ಲೋಕಣ್ಣ ' ನಿಂಗೆನಾದ್ರೂ ಬುದ್ದಿ ಅದೆನಲ್ಲಾ? ಯಾವ್ದು ಇತ್ಯಾರ್ಥ ಆಗ್ದೆ ಮನೆಯೊಳಗೆ ಹೆಂಗಲಾ ಸೇರಿಸ್ತಿ?' ಅನ್ನುವುದರೊಳಗಾಗಿ ಲತೀಫ ಹಿಂದಿನ ಬಾಗಿಲಿಗೆ ಬಂದಾಗಿತ್ತು.

ಹಾಗೇ ಧರ್ಮಣ್ಣನ ಮನೆಗೆ ಬಂದು ಸೇರಿದ ಲತೀಫ ಮನೆಯವನೇ ಆದದ್ದೊಂದು ಕತೆ. ಮೊದ ಮೊದಲು ವಿರೋಧಿಸಿದ ಧರ್ಮಣ್ಣನ ಅಪ್ಪ ಅಮ್ಮನೇ ಮುಂದೆ ಎಲ್ಲಾ ಕೆಲಸಕ್ಕೂ ಲತೀಫನನ್ನೇ ಆಶ್ರಯಿಸಲಾರಂಭಿಸಿದರು. ಜ್ವಾಲ ತನ್ನ ಹೊಟ್ಟೆಯಲ್ಲಿ ಹುಟ್ಟಿದ ತಮ್ಮನಂತೆ ಲತೀಫನನ್ನು ಯಾವುದೇ ಭೇದ ಭಾವವಿಲ್ಲದೆ ನೋಡಿಕೊಳ್ಳುತ್ತಿದ್ದಳು.

ಅಪ್ಪ–ಅಮ್ಮನನ್ನು ಪ್ಲೇಗಿನ ಮಾರಿ ಬಲಿ ತೆಗೆದುಕೊಂಡ ಮೇಲೆ ಲತೀಫ ತುಮಕೂರಿನ ಬಸ್‌ಸ್ಟಾಂಡಿನಲ್ಲಿ ಕೂಲಿ ನಾಲಿ ಮಾಡುತ್ತಿದ್ದ. ಅವನನ್ನು ಎಡೆಯೂರು ಸಂತೆಗೆ ಕರೆದು ತಂದಿದ್ದು ಸೊಪ್ಪು ಮಾರುವ ಟೆಂಪೋದವನು. ಲೋಡು ತುಂಬಿ ಲತೀಫನಿಗೆ 'ಎಡೆಯೂರು ಸಂತೇಲಿ ಇಳಿಸ್ಕೊಟ್ಟು ಹೋಗುವಂತೆ ಬಾರ್ಲಾ' ಎಂದು ಡ್ರೈವರ್ ಮಣಿ ಹೇಳಿದಾಗ ಲತೀಫ ಟೆಂಪೋ ಹತ್ತಿದ್ದ. ಎಡೆಯೂರು ಸಂತೆಲಿ ಸೊಪ್ಪು ಇಳಿಸಿದ ಲತೀಫ ಮೊದಲ ಸಲ ಸಂತೆಯನ್ನೆಲ್ಲಾ ಸುತ್ತು ಹಾಕಿ ಬಂದಿದ್ದ. ಬೆಣ್ಣೆ ಮಾರುವ ಹೆಂಗಸರು, ಊದಿನಕಟ್ಟು, ಕುಂಕುಮ ಹರಿಶಿನದ ಅಂಗಡಿ, ಬೆಂಡು ಬತ್ತಾಸು ಪುರಿ ಒಂದು ಕಡೆ, ಸಿಲವಾರ ಪಾತ್ರೆಗಳು, ಮಚ್ಚು ಕುಡಗೋಲಿನ ಮಾರಾಟ, ಬಳೆ, ರಿಬ್ಬನ್ನು, ಬೊಂಡ ಬಜ್ಜಿ, ಕೊಬ್ಬರಿ, ತರಕಾರಿ, ಅಡಕೆ, ವೀಳ್ಯದೆಲೆ, ಗಿಣಿಶಾಸ್ತ್ರ ಹೇಳುವವರು, ನಶ್ಯ ಮಾರಾಟ, ಹಸುಗಳಿಗೆ ಲಾಳ ಹೊಡೆಯುವವರು, ಮರದ ಬುಟ್ಟಿ, ಹುಣಸೆಹಣ್ಣು ಕಾಳು ಕಡ್ಡಿ ಮಾರಾಟ, ಬಟ್ಟೆ ತಾನುಗಳನ್ನು ಮಾರುವವರು, ಜೊಂಯ್ ಎಂದು ಮುತ್ತುತ್ತಿದ್ದ ನೊಣಗಳನ್ನು ಓಡಿಸಿ ಓಡಿಸಿ ಸುಸ್ತಾಗುತ್ತಿದ್ದ ಮಿಠಾಯಿ ಅಂಗಡಿ ನೋಡಿದ ಕೂಡಲೇ ಲತೀಫನ ಕಾಲುಗಳು ಫೆವಿಕಾಲಿಗೆ ಅಂಟುವಂತೆ ನಿಂತು ಮುಂದೆ ಹೋಗುವುದಿಲ್ಲ ಎಂಬಂತೆ ಹಠ ಮಾಡಲಾರಂಭಿಸಿದವು. ಜೇಬಲ್ಲಿ ಒಂದು ಬಿಡಿ ಕಾಸಿಲ್ಲದಿದ್ದರೂ ಲತೀಫನ ನಾಲಿಗೆಯಿಂದ ಮಾತ್ರ ಪಸೆ ಹರಿಯಲಾರಂಭಿಸಿತು. ಜೊಲ್ಲನ್ನು ಯಾರೋ ತೊಟ್ಟು ಬಿಟ್ಟಿದ್ದ ಶರ್ಟಿನ ಜೋತಾಡುವ ತೋಳಲ್ಲಿ ಒರೆಸಿಕೊಳ್ಳಲಾರಂಭಿಸಿದ. ಮಿಠಾಯಿ ಅಂಗಡಿಯಲ್ಲಿ ಡಬ್ಬಿಯಿಂದ ಜೋಡಿಸಿಡುತ್ತಿದ್ದ ಮೈಸೂರು ಪಾಕು, ಜಿಲೇಬಿ, ಬೂಂದಿಕಾಳು, ಕಾರಸೇವೆ ಎಲ್ಲವನ್ನು ಒಂದು ಕೈಯಲ್ಲಿ ಜೋಡಿಸುತ್ತಾ ಮತ್ತೊಂದು ಕೈಯಲ್ಲಿ ನೊಣಗಳನ್ನು ಓಡಿಸಲು ಕಷ್ಟಪಡುತ್ತಿದ್ದ ಮೈಲಾರನಿಗೆ ಲತೀಫ ಕಾಣಿಸಿದ. ಕೈಸನ್ನೆಯಲ್ಲೇ ಬಾ ಅಂತ ಕರೆದ. ಲತೀಫನಿಗೆ ರೊಟ್ಟಿ ಜಾರಿ ತಟ್ಟೆಗೆ ಬಿದ್ದಂಗೆ ಆಯ್ತು. 'ಯಾವುರೂ?'ಎಂದ ತುಮಕೂರು ಹೇಳಬೇಕೋ ತುರುವಿನಹಳ್ಳಿಯೋ ಎಂದು

ಲೆಕ್ಕಾಚಾರ ಹಾಕುತ್ತಿದ್ದಾಗಲೇ ನಾಲಿಗೆ 'ತುಮಕೂರು' ಎಂದಾಗಿತ್ತು. 'ಹೆಸರು?' ಲ...ಎಂದು ಹೇಳುವಷ್ಟರಲ್ಲಿಯೇ ಅಂಗಡಿಗೆ ಬಂದ ಗಿರಾಕಿ ಅರ್ಧ ಕೆಜಿ ಮೈಸೂರು ಪಾಕು ಎನ್ನುತ್ತಿದ್ದಂತೆ ಮೈಲಾರ ಹೆಸರನ್ನು ಪಕ್ಕಕ್ಕೆ ಸರಿಸಿ 'ಅಂಗಡಿ ಒಳಕ್ಕೆ ಬಾ' ಎಂದು ಹೇಳಿ 'ಈ ಬಟ್ಟೆ ತಗೋ ನೊಣ ಓಡಿಸು' ಎಂದು ಒಂದು ಸಣ್ಣ ಕೋಲಿಗೆ ಕೊಳಕಾದ ಬಟ್ಟೆ ಕಟ್ಟಿದ್ದನ್ನು ಕೊಟ್ಟು ಮೈಸೂರು ಪಾಕನ್ನು ತೂಕ ಮಾಡಲಾರಂಭಿಸಿದ. 'ಹಾಕಣ್ಣ...ಅದೇನು ಎಲ್ಲಾ ತೆಗಿತಿ' ಎಂದ ಗಿರಾಕಿಗೆ 'ಅಣ್ಣಾ...ಎಣ್ಣೆ, ಸಕ್ಕರೆ ರೇಟು ಎಷ್ಟಾಗದೆ ಗೊತ್ತಾ?' ಎಂದ ಮೈಲಾರನ ಮಾತನ್ನು ಕೇಳಿಸಿದರೂ ಕೇಳಸದವನಂತೆ ಅಲ್ಲೆ ಇದ್ದ ಮುರಿದ ಮೈಸೂರುಪಾಕಿನ ಪೀಸನ್ನು ರುಚಿ ನೋಡುವವನಂತೆ ಗಿರಾಕಿ ಬಾಯಿಗೆ ಹಾಕಿಕೊಂಡಿದ್ದ. ನೊಣ ಹೊಡೆಯಲು ಕುಳಿತ ಲತೀಫನಿಗೆ ತನ್ನ ಶರ್ಟಿನ ಜುಂಗಿಗೆ ಕಟಿಬಾಯಿಂದ ಬೀಳುವ ಎಂಜಲನ್ನು ಸಂಭಾಳಿಸುವುದು ಒಂದು ಸವಾಲಾದರೆ, ನೊಣ ಓಡಿಸುವುದು ಮತ್ತೊಂದು ಸವಾಲಾಗಿತ್ತು. ಗಿರಾಕಿಗಳಿಂದ ತುಂಬಿದ್ದ ಅಂಗಡಿಯಲ್ಲಿ ಮೈಲಾರನಿಗೆ ಲತೀಫನ ಹೆಸರು ಕೇಳುವ ಪ್ರಮೇಯವೇ ಬರಲಿಲ್ಲ. ಇತ್ತೀಚಿನ ದಿನಗಳಲ್ಲಿ ಗಿರಾಕಿಗಳು ಕಡಿಮೆಯಾಗುತ್ತಿದ್ದಾರೆ ಎಂದು ಗೊಣಗಿಕೊಳ್ಳುತ್ತಿದ್ದವನಿಗೆ ಇವತ್ತು ಸಿಕ್ಕಾಪಟ್ಟೆ ಗಿರಾಕಿಗಳು ಅಂಗಡಿಗೆ ಬರುತ್ತಿದ್ದದ್ದು ನೋಡಿ ಎಲ್ಲಾ ಈ ಹುಡುಗನ ಕಾಲ್ಗುಣವಿರಬೇಕು ಎಂದುಕೊಂಡ. ನೊಣ ಓಡಿಸಿ ಸುಸ್ತಾದ ಲತೀಫನಿಗೆ 'ಹೇ ಬಿಡು ಒಂದೇ ಸಮನೇ ಕೈ ನೋಯ್ತದೆ...ಆ ಕವರ್ ಕೊಡು, ಆ ಡಬ್ಬಿಲಿರೋ ಜಿಲೇಬಿ ಜೋಡಿಸು' ಎಂದು ಮೈಲಾರ ಬೇರೆ ಕೆಲಸ ಹೇಳಲಾರಂಭಿಸಿದ. ಜೋಡಿಸುತ್ತಲೇ ಮುರಿದ ಒಂದೆರೆಡು ಜಿಲೇಬಿ ಕಡ್ಡಿಗಳನ್ನು ಬಾಯೊಳಕ್ಕೆ ಮೈಲಾರನಿಗೆ ಕಾಣದಂತೆ ಹಾಕಿಕೊಂಡ ಲತೀಫ ಪರಮ ಸುಖವೆಂಬಂತೆ ಕಣ್ಣುಮುಚ್ಚಿ ಮೆಲ್ಲಗೆ ಮೆದ್ದಲಾರಂಭಿಸಿದ್ದ. 'ಅದ್ಯಾಕ್ಲ ಮುರಿದಿರವಾ ಬಾಯಿಗೆ ಹಾಕಂಡು ಹಂಗ್ ತಿನ್ತಿ. ಆಮೇಲೆ ಒಂದೆರೆಡು ಕೊಟ್ಟೆನೂ, ಹೋಗಿ ಉಂಡು ಬಾ' ಎಂದು ಅಂಗೈ ಮೇಲೆ ದುಡ್ಡು ಮಡಗಿದ್ದ.

ಹೀಗೆ "ಮಹದೇಶ್ವರ ಸ್ವೀಟ್ ಸ್ಟಾಲ್"ಗೆ ಸೇರಿದ ಲತೀಫ ಮರುದಿನ ಮೈಲಾರ ಕೇಳಿದಾಗ ತನ್ನ ಹೆಸರು ಹೇಳಿದ್ದ. ಒಂದು ನಿಮಿಷ ಏನು ಹೇಳಬೇಕೆಂದು ತೋಚದೆ 'ತುರುಕರ ಹುಡುಗನಾ' ಎಂಬ ಉದ್ಗಾರವನ್ನು ಉಗುಳು ನುಂಗುವಂತೆ ನುಂಗಿ ಅಂಗಡಿ ಒಳಕ್ಕೆ ಬಿಟ್ಟುಕೊಳ್ಳುವುದೋ ಬೇಡವೋ ಎನ್ನುವ ಜಿಜ್ಞಾಸೆಯಲ್ಲಿರುವಾಗಲೇ, ಲತೀಫ ಕೋಲಿಡಿದು ನೊಣ ಓಡಿಸುತ್ತಿದ್ದ! ಮೈಲಾರ, ಮಾದೇಶ್ವರ ಸ್ವಾಮಿ ಮಾಡ್ದಂಗೆ ಆಗ್ಲಿ ಅಂತೇಳಿ ಅಂಗಡಿ ಹೊಕ್ಕ.

ಅ ವಾರವೂ ದಿವಿನಾದ ವ್ಯಾಪಾರ. ಯಾರದ್ರೂ 'ಏನಣ್ಣ ಹೊಸ ಹುಡ್ಗನ್ನ ಸೇರಿಸಿಕೊಂಡಿ?' ಅಂತದ್ರೆ ಹೂಂ ಎಂದಷ್ಟೇ ಹೇಳಿ ಸುಮ್ಮನಾಗುತ್ತಿದ್ದ. ಸಿಹಿ ತಗಳ್ಳಕ್ಕೆ ಬಂದ ಗಂಡಸರಿಗಿಂತ, ಹೆಂಗಸರು 'ಯಾವ ಊರಿಂದು ಈ ಹುಡ್ಗ? ಏನ್ಲ ಹೆಸರು? ಅಪ್ಪ ಅಮ್ಮ ಎಲ್ಲಿ? ಇಸ್ಕೂಲಿಗೆ ಹೋಯ್ತಿಯಾ?' ಎಂದೆಲ್ಲಾ ಕೇಳಿದಾಗ ಮೈಲಾರನೇ 'ಹೇ ಅಕ್ಕೋ...ನಮ್ಮವನೇ ಹುಡ್ಗ, ಯಾರು ದಿಕ್ಕಿಲ್ಲ..ನಿಂಗೆ ಈ ಸಲ ಹೊಸದು ಕಡ್ಲೆಯುಂಡೆ ಮಾಡಿವ್ನಿ ತಿಂದು ನೋಡು' ಎಂದು ಒಂದು ಚೂರು ಉಂಡೆ ಮುರಿದು ಅವರ ಬಾಯಿಗೆ ಹಾಕಿ ಮುಂದೆ ಪ್ರಶ್ನೆ ಕೇಳದಂತೆ ಬಾಯಿ ಮುಚ್ಚಿಸುತ್ತಿದ್ದ. ಇದು ಗೊತ್ತಾದ ಮೇಲೆ ಲತೀಫ ಎಲ್ಲೂ ತನ್ನ ಹೆಸರು ಹೇಳದೆ ಮೈಲಾರನಲ್ಲಿ ನೊಣ ಓಡಿಸಿ ಹೊಟ್ಟೆ ಬಟ್ಟೆ ನೋಡಿಕೊಂಡಿದ್ದ.

ಆ ಶುಕ್ರವಾರ ಅದೇನು ಗ್ರಚಾರ ಕೆಟ್ಟಿತ್ತೋ, ಮೈಲಾರ ಸಂಜೆ ಸ್ವಲ್ಪ ಗಿರಾಕಿ ಕಡಿಮೆಯಾದ ಮೇಲೆ ಲತೀಫನಿಗೆ 'ಮಗಾ ಅಡಕೆ ಒಂದು ಪಾವು, ವೀಳ್ಯೆದೆಲೆ ಒಂದು ಕಟ್ಟು ತಗೊಂಡು ಬಾ' ಎಂದು ಕಳಿಸಿದ್ದ. ಇದು ಪ್ರತಿವಾರದ ಮಾಮೂಲಿ ಕತೆಯಾಗಿತ್ತು. ಅಡಕೆ ಸಾಲಲ್ಲಿ ಮೊದಲಿಗೆ ಕೂರುತ್ತಿದ್ದವನೇ ಧರ್ಮಣ್ಣ ಅವನ ಬಾಯಿ ಜೋರು ಗಿರಾಕಿಗಳನ್ನು ಸೆಳೆಯಲು 'ಹೇ ಸುಂದರಮ್ಮ ಬಾ ಇಲ್ಲಿ...ಎಂತ ನುಣ್ಣನೇ ಅಡ್ಕೆ ನೋಡು. ನೀ ಬಾಯ್ಗೆ ಹಾಕ್ಕಂಡ್ರೆ ಹಂಗೆ ಕರಗೋತದೆ. ನಿನ್ನ ಸೋಬನ್ನದಾಗೂ ಇಂತ ಅಡ್ಕೆ ತಿಂದಿರಕಿಲ್ಲ..' ಹೀಗೆ ಗಿರಾಕಿಗಳನ್ನು ಮಾತಲ್ಲೇ ಮರುಳು ಮಾಡಿ ಅತೀ ಹೆಚ್ಚು ಅಡಕೆ ವ್ಯಾಪಾರ ಮಾಡುತ್ತಿದ್ದ ಧರ್ಮಣ್ಣನ ಸುತ್ತ ಹತ್ತಾರು ಹೆಂಗಸರು ತಮ್ಮ ಸೆರಗಿನ ಒಂದು ಕಡೆ ಪಾವು, ಅಚ್ಚೇರು ಅಂತ ಅಡಕೆಯನ್ನು ಸುರಿಸಿಕೊಂಡು ಗಂಟಾಕಿಕೊಳ್ಳುತ್ತಿದ್ದರು. ಇಲ್ಲವೇ ಬುಟ್ಟಿಯಿಂದ ಬಟ್ಟೆ ತೆಗೆದು ಇದಕ್ಕೆ ಹಾಕು ಎನ್ನುತ್ತಿದ್ದರು. 'ನಿನ್ನ ಸವತಿನೂ ಇಂತದ್ದೇ ಬಟ್ಟೆ ತಂದಿದ್ಲು' ಅಂತ ಅಂತಿದ್ದಂಗೆ 'ಆ ಮಿಂಡಾಗತಿ ಮಾತೇಕೆ?' ಎನ್ನುತ್ತಲೇ 'ಅವಳೆಷ್ಟು ಅಡ್ಕೆ ತಗೊಂಡೊದ್ಲು' ಎಂದು ಕುತೂಹಲದ ಮೂಟೆ ಬಿಚ್ಚುತ್ತಿದ್ದರು. 'ಹೇ ಅವಳು ಒಂದು ಸೇರು ಹಾಕಿಸಿಕೊಂಡ್ಲು' ಎನ್ನುತ್ತಿದ್ದಂತೆ 'ಬೇಡ್ವಾ ಬರೋ ಗಿರಾಕಿಗೆಲ್ಲಾ ಬಾಯ್ಗೆ ತಂಬೂಲ ಇಕ್ಕೆ ಒಳಕ್ಕೆ ಕರಕಂತಳೆ. ನನ್ನತ್ತಾವ ಇಲ್ಲದ್ದು ಅವಳತ್ತವಾ ಏನೈತೆ ಅಂತ ಹೋದಾನೋ ನನ್ನ ಗಂಡ' ಎಂದು ಸೊರ್ ಸೊರ್ ಎನ್ನುತ್ತಾ ಸೆರಗಿನಲ್ಲಿ ಮೂಗು ಸೀಟುಕೊಳ್ಳುತ್ತಿದ್ದವಳನ್ನು ಪಕ್ಕದವಳು ಸಮಾಧಾನಿಸುತ್ತಿದ್ದಳು. ಧರ್ಮಣ್ಣನ ಮಾತಿನ ಮೋಡಿಗೆ ಅಡ್ಕೆ ಖಾಲಿಯಾಗುವುದರೊಂದಿಗೆ ಗಿರಾಕಿಗಳಾಗಿ ಬರುವ ಹೆಣ್ಣುಗಳ ಅಂತರಂಗದ ನೋವು ಕರಗುತ್ತಿತ್ತು. ಇದೆಲ್ಲಾ

ಪಕ್ಕದಲ್ಲಿ ರಾಶಿ ಹಾಕಿಕೊಂಡು ಗಿರಾಕಿಗಾಗಿ ದಾರಿ ಕಾಯುತ್ತಿದ್ದವರಿಗೆ ನಿರಾಶೆಯಾಗುತ್ತಿತ್ತು. ಧರ್ಮಣ್ಣನ ಪಕ್ಕದಲ್ಲೆ ಅಂಗಡಿ ಇಟ್ಟಿದ್ದ ಕಾಂತನಿಗೂ ಅಲ್ಲೊಂದು ಇಲ್ಲೊಂದು ಗಿರಾಕಿಗಳ ಮುಖ ನೋಡುತ್ತಿದ್ದವನಿಗೆ ಅಂದು ದಿನಕ್ಕಿಂತ ಜಾಸ್ತಿಯೇ ಗಿರಾಕಿಗಳು ಸಂಜೆ ಮುಕ್ಕಿದ್ದರು. ಅದಕ್ಕೆ ಕಾರಣ ಧರ್ಮಣ್ಣನ ಬಳಿ ಇದ್ದ ಅಡಕೆ ಖಾಲಿಯಾಗಿದ್ದು. ಖಾಲಿ ಚೀಲಗಳನ್ನೆಲ್ಲಾ ಮೂಟೆ ಕಟ್ಟುತ್ತಿದ್ದ ಧರ್ಮಣ್ಣ. ಅದೇ ಸಮಯಕ್ಕೆ ಲತೀಫ ಅಡಕೆ ತರಲು ಧರ್ಮಣ್ಣನ ಬಳಿ ಬಂದ. 'ಹೇ ಎಲ್ಲಾ ಮುಗಿದ ಮೇಲೆ ಬಂದಲ್ಲಾ? ಮೊದಲೇ ಎತ್ತಿಟ್ಟವೂ ಖಾಲಿ ಇವತ್ತು. ಪಕ್ಕದಲ್ಲಿ ಅವನ ಅಂಗಡಿಲಿ ತಗೋ. ಅವನಿಗೂ ಒಂದಿನ ಲಾಟ್ರಿ ಹೊಡಿಲಿ' ಎಂದ ಅವನ ಮಾತಿಗೆ ನಗುತ್ತಾ ಲತೀಫ, ಕಾಂತಣ್ಣನ ಅಂಗಡಿಗೆ ಹೋಗಿ 'ಒಂದು ಪಾವು ಅಡಕೆ' ಎಂದ. ಬೇರೆ ಗಿರಾಕಿಗೆ ಅಳತೆ ಮಾಡಿ ಹಾಕುತ್ತಿದ್ದ ಕಾಂತ ಲತೀಫನ ಕೈಯಿಂದ ಮೊದಲೇ ಹಣ ತೆಗೆದುಕೊಂಡ. ಎಲ್ಲಾ ಗಿರಾಕಿಗಳನ್ನು ಕಳುಹಿಸಿ ಇವನನ್ನು ವಿಚಾರಿಸಿಕೊಂಡ. ಒಂದು ಪಾವು ಅಳತೆ ಮಾಡಿ ಬಟ್ಟೆ ಬ್ಯಾಗಿಗೆ ಸುರಿದು ಹಣ ಕೇಳಿದ. ಆಗಲೇ ಎರಡು ರೂಪಾಯಿ ಕೊಟ್ಟೆ ಎಂದ ಲತೀಫ. ಸುಳ್ಳು ಹೇಳ್ತಿ ಎಂದು ಧರ್ಮಣ್ಣನ ಮೇಲಿದ್ದ ಕೋಪವನ್ನು ಲತೀಫನ ಮೇಲೆ ಹಾಕಿದ. ಧರ್ಮಣ್ಣ ನಾನೇ ನೋಡಿದೆ ಅವನು ಕೊಟ್ಟಿದ್ದು ಎಂದು ನ್ಯಾಯ ಹೇಳಲು ಬಂದಾಗ ವೃತ್ತಿದ್ವೇಷ ಭುಗಿಲೆದ್ದು ಜಗಳ ಎಲ್ಲಿಗೆಲ್ಲಿಗೋ ಹೋಗಿ ಲತೀಫ, ಧರ್ಮಣ್ಣನ ಮನೆ ಸೇರುವಂತಾಯಿತು.,

ಧರ್ಮಣ್ಣ ಕದಬಳ್ಳಿ, ಬೆಳ್ಳೂರು, ಜಡೆಯ, ಎಡೆಯೂರು ಸಂತೆಗೆಲ್ಲಾ ಅಡಕೆ ಹೊತ್ತು ಹೋಗುತ್ತಿದ್ದ. ಲತೀಫ ಅವನ ಹಿಂದೆ ಹೋಗಿ ಅಡಕೆ ಮೂಟೆ ಇಳಿಸುವ, ಜೋಡಿಸುವ ಮಾರುವ ಕೆಲಸಗಳನ್ನೆಲ್ಲಾ ಮಾಡಿಕೊಡುತ್ತಿದ್ದ. ಸಂತೆಗಳು ಇಲ್ಲದಾಗ ಶಿವಮೊಗ್ಗದಿಂದ ತಂದ ಅಡಕೆಯನ್ನು ಸೈಜುಗಳ ಪ್ರಕಾರ ಬೇರೆ ಮಾಡುವ, ಗೋಟಡಕೆಗೆ ಬಣ್ಣ ಕಟ್ಟುವ ಕೆಲಸ ಇರುತ್ತಿತ್ತು. ಇವೆಲ್ಲದರ ಜೊತೆ ಹೊಲ, ತೋಟ ಎಂದೂ ಲತೀಫ ನೆರವಿಗೆ ನಿಲ್ಲುತ್ತಿದ್ದ. ನಿಯತ್ತು ಎಂದರೆ ಲತೀಫ ಎನ್ನುವ ಮಾತು ಮಾಯಸಂದ್ರದಲ್ಲೆಲ್ಲಾ ಹರಡಿತ್ತು. ಲತೀಫ ಬಂದ ಹೊಸತರಲ್ಲಿ ಮೂರು ನಾಲ್ಕು ಕುಟುಂಬ ಮಾತ್ರ ಇದ್ದ ಅವನ ಜಾತಿಯವರು ಕೆಲವೇ ವರ್ಷಗಳಲ್ಲಿ ಎಲ್ಲೆಲ್ಲಿಂದಲೋ ಬಂದು ಸೇರಿ ಐವತ್ತು ಅರವತ್ತು ಮನೆಗಳಾಗಿದ್ದವು. ಅದೆಲ್ಲಿಂದಲೋ ಬಂದಿದ್ದ ಕೆಲ ಮುಖಂಡರು ಮಸೀದಿ ಕಟ್ಟುವ ಮಾತನಾಡಿದ್ದರು. ಲತೀಫ ಕೂಡ ಆ ಸಭೆಗೆ ಹೋಗಿದ್ದ. ಹಣ ಕೂಡಿ ಹಾಕಿ ಕೆಲವೇ ತಿಂಗಳಲ್ಲಿ ಮಸೀದಿ ಎದ್ದು

ನಿಂತಿತ್ತು. ಮೌಲ್ವಿಯೊಬ್ಬ ಬಂದು ದಿನ ಬೆಳಗಿನ ಜಾವ ಐದಕ್ಕೆ ಮತ್ತು ಸಂಜೆ ಐದಕ್ಕೆ "ಅಲ್ಲಾವು ಅಕ್ಬರ್" ಎಂದು ನಮಾಜು ಪ್ರಾರಂಭಿಸಿದ. ಮೊದಲು ಮಸೀದಿಯೊಳಗೆ ಇದ್ದ ನಮಾಜು, ಮೈಕ್ ಮೂಲಕ ಊರಿಗೆಲ್ಲಾ ಕೇಳುವಂತಾಯಿತು. ಮೊದ ಮೊದಲು ಕಿರಿಕಿರಿಯಾಗುತ್ತೆ ಎನ್ನುತ್ತಿದ್ದವರು ನಂತರ ಹೊಂದಿಕೊಂಡು 'ಅಲ್ಲಾ ಕೂಗಿದ ಎದ್ದೇಳು' ಎಂದು ಗಡಿಯಾರ ನೋಡದೆ ಏಳಲಾರಂಭಿಸಿದರು. ಸಂಜೆ 'ಅಲ್ಲಾ ಕೂಗಿದ ಇನ್ನೇನು ಟೆಂಟ್‌ನಲ್ಲಿ ಪಿಕ್ಚರ್ ಶುರು ಆಗುತ್ತೆ' ಎಂದು ಗಡಿಬಿಡಿಯಲ್ಲಿ ತಯಾರಾಗುತ್ತಿದ್ದರು. ಜೈನರ ಮನೆಗಳಲ್ಲಿ 'ಆಗಲೇ ನಮಾಜು ಶುರು ಆಯ್ತು, ವಾಸದ ಟೈಮಾಯ್ತು' ಎಂದು ರಾತ್ರಿ ಏನು ತಿನ್ನದವರು ಗಡಿಬಿಡಿಯಲ್ಲಿ ಊಟಕ್ಕೆ ಕೂರುತ್ತಿದ್ದರು. ಹೀಗೆ ಜೀವನಾಡಿಯಾಗಿ ನಮಾಜ್ ಕೇವಲ ಮುಸ್ಲಿಂರಗಿಲ್ಲದೆ ಊರವರಿಗೆಲ್ಲಾ ಒಂದಲ್ಲಾ ಒಂದು ರೀತಿ ಜೊತೆಯಾಗಿತ್ತು. ಮೊದಲೆಲ್ಲಾ ನಮಾಜ್ ಎಂದರೆ ಏನೆಂದು ತಿಳಿಯದಿದ್ದ ಲತೀಫ ಒಂದೆರೆಡು ಸಭೆಗೆ ಹೋಗಿ ಬಂದ ಮೇಲೆ ಮುಸಲ್ಮಾನನಾಗಿ ಹುಟ್ಟಿದ ಮೇಲೆ ದಿನಕ್ಕೆ ಐದು ಬಾರಿ ಮೆಕ್ಕಾ ಕಡೆ ತಿರುಗಿ ನಮಾಜ್ ಮಾಡದಿದ್ದರೆ, ಜುಮ್ಮ ದಿನವೂ ಮಾಡದಿದ್ದರೆ ಆಗುವ ಪರಿಣಾಮಗಳನ್ನು ಕೇಳಿ ಬಂದು ದಿನಾ ಬೆಳಿಗ್ಗೆ ಮತ್ತು ಸಂಜೆ ನಮಾಜು ಮಾಡುವುದನ್ನು ಪ್ರಾರಂಭಿಸಿದ್ದ.

ಕಾಲಚಕ್ರ ಹತ್ತಾರು ವರ್ಷ ತಿರುಗಿ, ಧರ್ಮಣ್ಣನ ಅಪ್ಪ-ಅಮ್ಮ ದಿವಂಗತರಾಗಿದ್ದರು. ಧರ್ಮಣ್ಣನಿಗೂ ಎರಡು ಗಂಡು ಮಕ್ಕಳು ಒಂದು ಹೆಣ್ಣು ಮಗುವಾಗಿ ಕುಟುಂಬ ವಿಸ್ತರಿಸಿತ್ತು. ಪುಟ್ಟ ಗಂಡು ಮಕ್ಕಳು ಗಾಡಿಚಕ್ರಕ್ಕೆ ಸಿಕ್ಕು ಸತ್ತ ಮೇಲಂತೂ ಧರ್ಮಣ್ಣ ಕಂಗಾಲಾಗಿದ್ದ. ಜ್ವಾಲ್ನಮ್ಮಳ ನೋವು ನೂರ್ಮಡಿಯಾಗಿತ್ತು. ದಿಕ್ಕು ತೋಚದ ಮನೆಯವರನ್ನು ಲತೀಫನೇ ಸಮಾಧಾನಿಸುತ್ತಿದ್ದ. ಪುಟ್ಟ ಮಗು ಪದ್ಮ ಹಾಲುಗಲ್ಲದ ಕೂಸು. ಪದ್ಮಳ ಪೂರ್ಣ ಜವಾಬ್ಧಾರಿ ತನ್ನದೆಂಬಂತೆ ಲತೀಫ ಆರೈಕೆ ಮಾಡುತ್ತಿದ್ದ. ಧರ್ಮಣ್ಣನಂತೂ ಮನೆತನದ ಹೆಸರು ಹೇಳುವ ಗಂಡು ಇಲ್ಲವೆಂದು ನೊಂದು ಮಾಡುವ ವ್ಯಾಪಾರವನ್ನು ಬದಿಗೊತ್ತಿ ಅನ್ಯಮನಸ್ಕನಾಗಿ ಕುಳಿತಿರುತ್ತಿದ್ದ. ಅಂತಹ ಸಮಯದಲ್ಲೇ ಧರ್ಮಣ್ಣನಿಗೆ ಜಯಮ್ಮ ಜೊತೆಯಾದದ್ದು.

ಗಂಡನನ್ನು ಬಿಟ್ಟು ತವರು ಸೇರಿದ್ದ ನಾಯಕಸಾನಿ ಜಯಮ್ಮ ನೊಂದ ಧರ್ಮಣ್ಣನಿಗೆ ಅದೇನು ಮೋಡಿ ಮಾಡಿದಳೋ ಧರ್ಮಣ್ಣ ಮನೆ ಬಿಟ್ಟು

ಅಲ್ಲಿಯೇ ಇರಲಾರಂಭಿಸಿದ. ಇದೆಲ್ಲಾ ಅರ್ಥವಾಗದ ಜ್ವಾಲ್ನಮ್ಮ ಇಂದಲ್ಲ ನಾಳೆ ಬಂದೆ ಬರುತ್ತಾನೆ ಎಂದು ದಾರಿ ಕಾದವಳನದನು ಸುಳ್ಳಾಗಿಸಿ ಧರ್ಮಣ್ಣ ಆ ಮನೆಯಲ್ಲಿಯೇ ಉಳಿದ. ಎಲ್ಲೋ ಖುಷಿಯಾಗಿದ್ದರೆ ಸಾಕು ಎಂದು ಈಕೆ ಸಮಾಧಾನಗೊಂಡರೂ ಲತೀಫನಿಗೆ ಮಾತ್ರ ಇದು ಸಹಿಸಲಾರದ ಅಪರಾಧವಾಗಿ ಕಂಡಿತು. 'ಧರ್ಮಣ್ಣನಂಗೆ, ಅಕ್ಕನೂ ಮಕ್ಕಳನ್ನು ಕಳಕೊಂಡು ನೊಂದಿಲ್ಲವಾ. ಅದಕ್ಕೆ ಅಕ್ಕ ಮನೆ ತೊರೆದು ತವರಿಗೆ ಸೇರಿದಳಾ? ಮಗಳ ಮುಖ ನೋಡಿಯಾದರೂ ಬರಬೇಕಲ್ವಾ?' ಎಂದೆಲ್ಲಾ ಯೋಚಿಸಿ ಊರ ಹಿರಿಯರಿಗೆ ಬುದ್ಧಿ ಹೇಳುವಂತೆ ಕೇಳಿಕೊಂಡ. 'ಸುಮ್ನಿರು ಅವನ ಬಾಯಿಗೆ ಯಾರು ಬಾಯಿ ಕೊಟ್ಟಾರು' ಎಂದು ಅವರೆಲ್ಲಾ ದೂರ ಉಳಿದರು. ಕೆಲವೇ ವರ್ಷಗಳಲ್ಲಿ ಬೆಳೆದ ಬೆಳೆ, ವ್ಯಾಪಾರ, ವ್ಯವಹಾರ ಆ ಮನೆ ಸೇರಿತು. ಜಯಮ್ಮನ ಮುಷ್ಠಿಯೊಳಗೆ ಧರ್ಮಣ್ಣ ಬಂಧಿಯಾದ. ಒಂದೆರೆಡು ಮಕ್ಕಳನ್ನೂ ಅವಳಿಗೆ ದಯಪಾಲಿಸಿದ. ಮನೆ ಕಡೆ ತಲೆಯೇ ಹಾಕದೇ ಇದ್ದಾಗ ಮನೆ ನಡೆಯುವುದಾದರೂ ಹೇಗೆ? ಲತೀಫನೇ ಆ ಮನೆಗೂ ಈ ಮನೆಗೂ ಸೇತುವೆಯಾಗಿ ನಿಂತು ಒಂದಿಷ್ಟು ಹಣ ವಸೂಲಿ ಮಾಡಿ ತರುತ್ತಿದ್ದ. ಚೆನ್ನಾಗಿ ನಡೆಯುತ್ತಿದ್ದ ಅಡಕೆ ವ್ಯಾಪಾರ ನಿಂತು ಹೋದ ಮೇಲೆ ಲತೀಫನಿಗೂ ಕೆಲಸವಿಲ್ಲದಂತಾಯಿತು. ಕೆಲವು ವರ್ಷ ಹೀಗೆ ತಲೆಕೆಟ್ಟು ಕುಳಿತಿದ್ದ ಜ್ವಾಲ್ನಮ್ಮ ಒಂದು ದಿನ, 'ಲತೀಫಾ ಪುರಿಭಟ್ಟಿ ಹಾಕುವ...ಪ್ರತಿಸಲ ತಿನ್ನಕ್ಕೂ ಅವನತ್ರ ಕೈಚಾಚುವ ಜನ್ಮ ಇಲ್ಲಿಗೇ ಮುಗಿಲಿ. ಭಟ್ಟಿ ಸಾಮಾನು ವಾರದಲ್ಲಿ ತಂದು ಶುರು ಮಾಡೋಣ' ಎಂದು ನಿರ್ಧಾರದ ದನಿಯಲ್ಲಿ ಹೇಳಿದಳು. 'ಆ ಭಟ್ಟಿ ವ್ಯವಹಾರ ನಿಮಗೆ ಗೊತ್ತೇನವ್ವಾ?' ಸಂಶಯದಲ್ಲೇ ಕೇಳಿದ್ದ ಲತೀಫ. 'ನಮ್ಮಪ್ಪ ಪುರಿ ಹುರಿದು ಸಂತೆ, ಜಾತ್ರೆಯಲ್ಲಿ ಮಾರತಿದ್ರು. ನೋಡಿದ್ದೀನಿ ಕಲಿಯುವುದೇನು ಕಷ್ಟ ಇಲ್ಲ ಬಿಡು. ಜೀವನಕ್ಕಿಂತ ದೊಡ್ಡ ಪಾಠ ಬೇಕಾ? ನೀನೇ ನೋಡ್ತಿದ್ದೀಯಲ್ಲಾ ನಮ್ಮ ಬದುಕು ಅದ್ಯಾವಳೋ ದೊರೆಸಾನಿ ಮರ್ಜಿಗೆ ಬೀಳುತ್ತೆ ಅಂತ ನೀನಾದ್ರೂ ಅಂದುಕೊಂಡಿದ್ದ? ಅಥವಾ ನಾನದ್ರೂ ಕನಸು ಕಂಡಿದ್ನಾ?' ಎಂದವಳೆ ಕೆಲವೇ ದಿನಗಳಲ್ಲಿ ಮನೆ ಹಿಂದಿನ ಹಿತ್ತಲಲ್ಲಿ ಪುರಿಭಟ್ಟಿಗೆ ಬೇಕಾದ ಸಿದ್ಧತೆ ಎಲ್ಲಾ ಮಾಡಿದಳು. ಬೆಳ್ಳೂರಿನಿಂದ ಪುರಿ ಉರಿಯುವ ರಾಮಣ್ಣನೂ ಸಿಕ್ಕ ಮೇಲೆ ಜ್ವಾಲ್ನಮ್ಮನಿಗೆ ಮನೆ ಸಂಭಾವಳಿಸುವುದು ಕಷ್ಟವೇನಾಗಲಿಲ್ಲ. ಭಟ್ಟಿಗೆ ಬೇಕಾಗುವ ಮೂಲ ಬಂಡಾವಳವನ್ನು ಬೆಳ್ಳೂರಿನ ಜೀವೇಂದ್ರಯ್ಯನವರ ಬಂಗಾರದ ಅಂಗಡಿಯಲ್ಲಿ ಮೂರು ಎಳೆ ಅವಲಕ್ಕಿ ಸರವನ್ನು ಮಾರಿ ಕೂಡಿಸಿದ್ದಳು. ಇದೆಲ್ಲಾ ನೋಡಿದ್ದ ಲತೀಫ 'ಅವ್ವಾ ಧರ್ಮಣ್ಣನಿಗೆ

ಗೊತ್ತಾದ್ರೆ...'ಅಂತ ರಾಗ ತೆಗೆದಿದ್ದ. 'ಆ ದೊರೆಸಾನಿಗೆ ಮನೆ ಕೊಡಿಸಿದ..ಹೊಲ ಬರೆದ..ಮಕ್ಕಳು ಕೊಟ್ಟ. ನಾನು ಏನಾದ್ರೂ ಯಾವುರ ದಾಸಯ್ಯ...ಯಾಕ್ ಹಿಂಗ್ ಮಾಡಿದೆ ಅಂತ ಕೇಳಿದ್ನಾ? ಈಗ ನನ್ನ ತಂಟೆಗೆ ಬಂದ್ರೆ ಅಷ್ಟೆ' ಎಂದು ಗಂಡನ ಮೇಲಿನ ಕೋಪವನ್ನು ಗಂಟಲಿನಲ್ಲಿ ಹೊರ ಹಾಕಿದಳು. ಅದಕ್ಕೆ ಲತೀಫ 'ನೀವು ಸ್ವಲ್ಪ ಜೋರಾಗಿ ಅವತ್ತೆ ಕೂಗಾಡಿದ್ರೆ ಹಿಂಗ ಆಗ್ತಿರಲಿಲ್ಲ ಬಿಡಿ. ಜುಬಾನ್ ಮಾಡಬೇಕಿತ್ತು...ಈ ಮನೆಗೆ ಇಂತ ಗತಿ ಬರ್ತೀರಲಿಲ್ಲ' ಎಂದ. ' "ಓಡಿ ಹೋಗೋ ಬಡ್ಡಿ ಹಾಲಿಗೆ ಹೆಪ್ಪಿಟ್ಟಾಳೆ?" ಅವನೊಬ್ಬನೆ ನೋಡು ಮಕ್ಕಳು ಕಳಕಂಡವನು. ನಂಗೆ ದುಃಖ ಇರಲಿಲ್ವಾ? ಅವನು ಹೋದಂಗೆ ನಾನೂ ಯಾರ ತಕನಾದ್ರೂ ಹೋಗಬಹುದಿತ್ತಲ್ವಾ? ಗಂಡ್ಸು ಮಾಡಿದ್ರೆ ಸರಿ ಅದೇ ಹೆಂಗ್ಸು ಮಾಡಿದ್ರೆ ತಿಕ ಬಡಕೊಂಡು ನಗಲ್ವಾ ಈ ಜನ. ಯಾರಿಗೆ ಹೆದರದಿದ್ರೂ ಆತ್ಮ ಅಂತ ಐತಲ್ಲಾ ಅದಕ್ಕಾದ್ರೂ ಹೆದರಬೇಕಲ್ವಾ?' ಮೈಮೇಲೆ ದೇವಿ ಬಂದ್ಹಂಗೆ ಜ್ವಾಲ್ನಮ್ಮ ಮಾತನಾಡುತ್ತಿದ್ದರೆ ಲತೀಫ ಕಣ್ಣುಬಾಯಿ ಬಿಟ್ಟು ನೋಡುತ್ತಿದ್ದ.

ಲತೀಫ ಎಲ್ಲಾ ಸಂತೆಗಳಿಗೂ ಹೋಗಿ ಪುರಿಯನ್ನು ಮಾರಿಕೊಂಡು ಬಂದು ನಿಷ್ಠೆಯಿಂದ ಹಣವನ್ನು ಕೈಗಿಡುತ್ತಿದ್ದ. ಮನೆಯ ಹತ್ತಿರವೇ ಬಂದು ಕೊಂಡೊಯ್ಯುವ ಗಿರಾಕಿಗಳು ಹೆಚ್ಚಿ ಜ್ವಾಲ್ನಮ್ಮ, ಧರ್ಮಣ್ಣನ ಮುಂದೆ ತಲೆಯೆತ್ತಿ ನಿಲ್ಲುವಂತಾದಳು. ದೊರೆಸಾನಿಯ ಬಿಸಿ ಕಡಿಮೆಯಾದ ಮೇಲೆ ಧರ್ಮಣ್ಣ ಮತ್ತೆ ಜ್ವಾಲ್ನಮ್ಮಳ ಬಳಿಗೆ ಬರಲಾರಂಭಿಸಿದ. ಗಂಡನನ್ನು ಬೈಯುತ್ತಿದ್ದವಳು ಅವನು ಮನೆಗೆ ಬರುತ್ತಲೇ ಅವನಿಗಿಷ್ಟದ ಅಡುಗೆ ಮಾಡಿ ಬಡಿಸುತ್ತಿದ್ದಳು. ಆಗೆಲ್ಲಾ ಲತೀಫ 'ಅಕ್ಕೋ...ನಿಮ್ಮದು ದಿಲ್‌ದು ಸಮಾಚಾರ ಏನು ಅಂತಲೇ ಗೊತ್ತಾಗಲ್ಲ ಬಿಡು' ಎಂದು ಜುಡಾಯಿಸುತ್ತಿದ್ದ. ಅದು ಅವಳಿಗೆ ಇಷ್ಟವೂ ಆಗುತ್ತಿತ್ತು. ' "ತಾಳಿದವನು ಬಾಳಿಯಾನು" ಅಂತ ಮಾತು ಕೇಳಿಲ್ಲವಾ? "ಇಟ್ಟಕೊಂಡವಳು ಇರೋತನಕ ಕಟ್ಟಕೊಂಡವಳು ಕೊನೆತನಕ" ' ಎಂದು ಸಮಾಧಾನಿಸುತ್ತಿದ್ದಳು. ಇಷ್ಟೆಲ್ಲಾ ಆಗುವಾಗ ಲತೀಫನ ವಯಸ್ಸೂ ಬೆಳೆದಿತ್ತು. ಧರ್ಮಣ್ಣ ಇಲ್ಲದ ಮೇಲೆ ಹೆಂಗಸರೇ ಇರುವ ಮನೆಯಲ್ಲಿರುವುದು ಸರಿಯಲ್ಲಾ ಎಂದು ಲತೀಫನಿಗೆ ಅನ್ನಿಸಿತ್ತು. ಅದು ಜ್ವಾಲ್ನಮ್ಮಳಿಗೂ ಅನ್ನಿಸಿ ಅವನು ಬೇರೆ ಮನೆ ಮಾಡುವೆ ಎಂದಾಗ ನಿರಾಕರಿಸದೆ ಬೇರೆ ಕಳಿಸಿದ್ದಳು. ಮುಸ್ಲಿಂರೇ ಇರುವ ಓಣಿಯಲ್ಲಿ ಮನೆ ಮಾಡಿಕೊಂಡು ಅದೇ ಊರಿನ ಅವರದೇ ಜಾತಿಯ ಫಾತಿಮಾ ಅವನ ಬೀವಿಯಾಗಿಯೂ ಬಂದು, ಬದುಕು ಆರಕ್ಕೆ

ಏರದೆ ಮೂರಕ್ಕೆ ಇಳಿಯದೆ ಸಾಗಿತ್ತು. ಪದ್ದಮ್ಮಳನ್ನು ಸಂಬಂಧಿಕರಲ್ಲೆ ಮದುವೆ ಮಾಡಿಕೊಟ್ಟು ಧರ್ಮಣ್ಣ ಸತ್ತ ನಂತರ ಜ್ವಾಲ್ನಮ್ಮ ನೆಮ್ಮದಿಯಾಗಿ ಮೈಸೂರಿನಲ್ಲಿ ಮಗಳೊಟ್ಟಿಗಿದ್ದಳು.

ಮಾಯಸಂದ್ರದ ಕೆರೆಗೆ ಹಳೆನೀರು ಹೋಗಿ ಹೊಸ ನೀರು ಬರುವಂತೆ ಪದ್ಮಮ್ಮನಿಗೂ ಇಬ್ಬರು ಗಂಡು ಮಕ್ಕಳು, ಬೆಳೆದು ಇಂಜೀನಿಯರ್ ಆಗಿ ಬೆಂಗಳೂರು ಸೇರಿದ್ದರು. ಲತೀಫನಿಗೂ ನಾಲ್ಕು ಜನ ಮಕ್ಕಳು. ಮೂರು ಹೆಣ್ಣು ಒಂದು ಗಂಡು. ಹೆಣ್ಣು ಮಕ್ಕಳನ್ನು ಮದುವೆ ಮಾಡಿದ್ದ. ಗಂಡು ಮಗ ಎಲೆಕ್ಟ್ರಿಕ್ ಕಂಟ್ರ್ಯಾಕ್ಟರ್ ಆಗಿ ಬೆಳೆದು ಬೇರೆ ಊರುಗಳಲ್ಲಿಯೂ ಕೆಲಸ ಮಾಡಿಸುತ್ತಿದ್ದ. ಹದಿನೈದು ದಿನಗಳಿಗೊಮ್ಮೆ ಪದ್ದಮ್ಮಳ ಜೊತೆ ಜ್ವಾಲ್ನಮ್ಮ ಮಾಯಸಂದ್ರಕ್ಕೆ ಬಂದು ತನ್ನ ಮನೆಯಲ್ಲಿದ್ದು ಊರವರನ್ನು, ಲತೀಫನನ್ನು ಮಾತಾಡಿಸಿ ಹೋದರೆ ಅವಳಿಗದೆಂತದ್ದೋ ನೆಮ್ಮದಿ. ಇತ್ತೀಚೆಗೆ ಮಾಯಸಂದ್ರವೂ ಬದಲಾಗುತ್ತಿತ್ತು. ಲತೀಫನೂ ಅದನ್ನು ಹೇಳುತ್ತಿದ್ದ. 'ಅವ್ವಾ...ಊರಲ್ಲಿ ಒಂದೆರೆಡು ಸಲ ಹೊಡೆದಾಟ ಆಯ್ತು, ನಮಾಜ್ ಮಾಡ್ತರೆ ಅಂತ ಗುಡಿಲಿ ಇತ್ತೀಚೆಗೆ ಜೋರಾಗಿ ದೇವರ ಹಾಡು ಹಾಕುವುದು ಶುರುವಾಗಿದೆ. "ಭಗವದ್ ಸಂಘ" ಅಂತ ಅವರು ಶುರು ಮಾಡಿದ್ರೆ ಇವರು "ಅಬ್ಬಾಸ್‌ಖಾನ್ ಸಂಘ" ಅಂತ ಮಾಡಿಕೊಂಡಿದ್ದಾರೆ. ಒಂದಲ್ಲ ಒಂದು ಕಾರಣಕ್ಕೆ ಇವರನ್ನು ಅವರು, ಅವರನ್ನ ಇವರು ಕೆಣಕುವುದು, ಹೊಡೆದಾಟ ನಡಿತಾನೇ ಇದೆ' ಎಂದು ನಿಟ್ಟುಸಿರುಬಿಟ್ಟ. ಲತೀಫನು ಈಗ ಗಡ್ಡಬಿಟ್ಟು ತಲೆಗೊಂದು ಟೋಪಿ ಧರಿಸುತ್ತಿದ್ದ. ಅದನ್ನು ಸೂಕ್ಷ್ಮವಾಗಿ ಗಮನಿಸಿದ್ದ ಪದ್ದಮ್ಮ 'ನೀನೂ ಬದಲಾಗಿದ್ದೀಯಾ ಬಿಡು' ಎಂದಳು. 'ಲತೀಫನ ಹೊರನೋಟ ಹೀಗಿದ್ರೂ, ನಾನು ಅದೇ ಹಳೆ ಲತೀಫ ಪದ್ದಮ್ಮ' ಎಂದು ಎದ್ದ.

ಪದ್ದಮ್ಮಳ ಮಗ ಬೆಂಗಳೂರಿನಲ್ಲಿ ಆರ್ಕಿಟೆಕ್ಟ್ ಆಗಿದ್ದು ಮನೆಗಳಿಗೆ ಪ್ಲಾನ್ ಹಾಕಿ ಕಟ್ಟಿಸಿಕೊಡುವುದನ್ನು ಮಾಡುತ್ತಿದ್ದ. 'ಎಲೆಕ್ಟ್ರಿಕ್ ಕೆಲಸ ಮಾಡಿಸಲು ನಮ್ಮ ಲತೀಫನ ಮಗನನ್ನೇ ಕರೆಸಿ ನೋಡು' ಎಂದು ಜ್ವಾಲ್ನಮ್ಮ ಮೊಮ್ಮಗನಿಗೆ ಹೇಳಿದ್ದಳು. ಅಜ್ಜಿ ಜೊತೆ ಹಳೆಯ ಕತೆಯನ್ನೆಲ್ಲಾ ಕೇಳಿದ್ದ ಪ್ರಸಾದನಿಗೆ ಅದು ಕತೆ ಎನಿಸಿತ್ತೇ ವಿನಹ ಅವರಿಗಿರುವ ಬಾಂಧವ್ಯದ ಬೆಸುಗೆಯ ಬಿಸಿ ತಟ್ಟುವಂತಿರಲಿಲ್ಲ. 'ಅಜ್ಜಿ...ಗೊತ್ತಿರುವವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು ಸರಿಯಲ್ಲ. ಅನ್ನೋ ಹಾಗಿಲ್ಲ ಬಿಡೋ ಹಾಗಿಲ್ಲ. ಅವರಿಗೂ ನನಗೂ ಬಿಸಿತುಪ್ಪ

ಆಗುತ್ತೆ. ಸಂಬಂಧಗಳು ವ್ಯವಹಾರ ಆಗದಿದ್ದರೆ ಒಳ್ಳೆಯದು' ಎಂದು ಗುಂಡು ಹೊಡೆದಂತೆ ಮಾತನಾಡಿದ್ದ. ಮೈಸೂರಿಗೆ ಬಂದಾಗಲೆಲ್ಲಾ ಅಜ್ಜಿ, ಅಮ್ಮ ಒಂದೇ ವರಾತೆ ತೆಗೆದು ಹುಡುಗ ಬೇರೆ ಜಾತಿಯಾದ್ರೂ ನಮ್ಮ ಮನೆ ಮಗ ಲತೀಫ. ನಮ್ಮ ಸಂಬಂಧದಂತೆ ಮಕ್ಕಳು, ಮೊಮ್ಮಕ್ಕಳ ಕಾಲಕ್ಕೂ ಅದು ಮುಂದುವರೆಯಬೇಕು ಎಂದು ಹೇಳುವುದು ಕೇಳಿ ಕೇಳಿ ನೋಡೇ ಬಿಡುವ ಎಂದು ಫೋನ್ ಮಾಡಿ ಲತೀಫನ ಮಗ ಜಬ್ಬಾರನನ್ನು ಕೆಲಸಕ್ಕೆ ಕರೆಸಿ ಎಲೆಕ್ಟ್ರಿಕ್ ಕೆಲಸವನ್ನು ವಹಿಸಿಕೊಟ್ಟಿದ್ದ. ಆದರೆ ಈ ಕತೆ ಹೀಗಾಗುತ್ತೆ ಎಂದು ಯಾರಿಗೆ ಗೊತ್ತಿತ್ತು?

ಹಾಗಿದ್ದಾದರೂ ಏನು? ಜಬ್ಬಾರನಿಗೆ ಪ್ರಸಾದ್ ವಹಿಸಿಕೊಟ್ಟಿದ್ದು ಪ್ರಸಿದ್ಧ ವಕೀಲರಾಗಿದ್ದ ರೆಡ್ಡಿ ಕುಟುಂಬದವರು ಕಟ್ಟಿಸುತ್ತಿದ್ದ ಮನೆಗೆ ಎಲೆಕ್ಟ್ರಿಕ್ ಕೆಲಸ ಮಾಡಲು. 'ಇವರು ನನ್ನ ಬಹು ಮುಖ್ಯ ಕ್ಲೇಂಟ್, ಕೆಲಸ ಸರಿ ಮಾಡಬೇಕು' ಎಂದು ಪ್ರಸಾದ್ ಹೇಳಿದ್ದ. ಜಬ್ಬಾರನೂ ಹತ್ತೆಂಟು ಮನೆಗಳಿಗೆ ಈಗಾಗಲೇ ಅವನೊಂದಿಗೆ ಕೆಲಸ ಮಾಡಿ ನಂಬಿಕೆ ಉಳಿಸಿಕೊಂಡಿದ್ದ. ಅದೊಂದು ದಿನ ಬೆಳಗಿನ ಜಾವ ರೆಡ್ಡಿ ಫೋನ್ ಮಾಡಿ ತನ್ನ ಮಗಳನ್ನು ಜಬ್ಬಾರ ಹಾರಿಸಿಕೊಂಡು ಹೋಗಿದ್ದಾನೆ ಎಂದು ಕೂಗಾಡಿದಾಗಲೇ ಪ್ರಸಾದನಿಗೆ ವಿಷಯ ತಿಳಿದದ್ದು. ಮರ್ಯಾದೆಗೆ ಅಂಜಿ ಅವರವರೆ ಎಲ್ಲಾ ಕಡೆ ಹುಡುಕಿ, ಸಿಗದೆ ಇದ್ದಾಗ ಲತೀಫನನ್ನು ಕರೆಸಿ ಬೆದರಿಸಿದ್ದರು. ಜಬ್ಬಾರ ಹಾಗೂ ರೆಡ್ಡಿ ಮಗಳು ಸೌಮ್ಯರ ಫೋನ್ ಸ್ವಿಚ್ಡ್ ಆಫ್ ಆಗಿ ಅವರಿಬ್ಬರು ಸಿಗದೆ ರೆಡ್ಡಿ ಕೊನೆಗೆ ಪೋಲಿಸ್ ಕಂಪ್ಲಂಟ್ ಕೊಟ್ಟಿದ್ದ. ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದ ಹುಡುಗರನ್ನು ಈ ವಿಚಾರವಾಗಿ ಕೇಳಿದರೆ ಅವರು ತಮಗೇನು ತಿಳಿಯದು ಎಂದು ನುಣಚಿಕೊಂಡರು. ಪ್ರಸಾದ ಮೈಸೂರಿಗೆ ಬಂದು ಅಜ್ಜಿ, ಅಮ್ಮನಿಗೆ 'ನಿಮ್ಮ ಮಾತು ಕೇಳಿ ಅವನನ್ನು ಕೆಲಸಕ್ಕೆ ಸೇರಿಸಿಕೊಂಡೆ ನೋಡಿ ನನ್ನ ರೆಪುಟೇಶನ್ನೇ ಹಾಳಾಯ್ತು. ಲತೀಫ ನಿಮ್ಮವನಿದ್ದಿರಬಹುದು ಅವನ ಮಗನಿಗೆ ಅಂತಹ ನಿಷ್ಠೆ ಎಲ್ಲಿ ಬರಬೇಕು? ರೆಡ್ಡಿ ಪೋಲಿಸ್ ಕಂಪ್ಲೇಟ್ ಕೊಟ್ಟಿದ್ರೂ ತನ್ನ ಹುಡುಗರನ್ನು ಬಿಟ್ಟಿದ್ದಾನೆ. ಅವರ ಕೈಗೆ ಏನಾದ್ರೂ ಸಿಕ್ಕಿದ್ರೆ ಜಬ್ಬಾರನ ಕತೆ ಮುಗಿತು ಅಂತಲೇ' ಎಂದು ಪ್ರಸಾದ ಕೂಗಾಡಿದ. ಪದ್ದಮ್ಮಳಿಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ. ಪ್ರಸಾದ ಬೆಂಗಳೂರಿಗೆ ಮರಳಿ ಹೋದ ಮೇಲೆ ಪದ್ದಮ್ಮಳ ಬಳಿ ಲತೀಫ ಓಡಿ ಬಂದಿದ್ದ. ತನ್ನ ಮಗನನ್ನು ಉಳಿಸಿಕೊಡುವಂತೆ ದೈನ್ಯನಾಗಿ ಬೇಡಿದ್ದ. 'ಅವ್ವಾ..ಅವ್ವಾ..' ಲತೀಫನ ದನಿಗೆ ಹಳೆಯ ಕಥಾಸರಣಿಯಿಂದ ಪದ್ದಮ್ಮ

ಹೊರಬಂದಳು. ಲತೀಫನಿಗೆ 'ದೇವರಿದ್ದಾನೆ ಏನೂ ಆಗಲ್ಲ, ಧೈರ್ಯ ತಂದುಕೋ' ಎಂದು ತನ್ನಲ್ಲಿದ್ದ ಭಯವನ್ನು ಅವನಿಗೆ ಕಾಣಿಸದಂತೆ ತನಗೆ ತೋಚಿದ್ದು ಹೇಳಿ ಸಮಾಧಾನಿಸಿ ಊರಿಗೆ ಕಳಿಸಿದಳು.

ರೆಡ್ಡಿ ಕೋರ್ಟಿನಲ್ಲಿ ಹೈಬಿಯಸ್ ಕಾರ್ಪಸ್ ಕೇಸು ದಾಖಲಿಸಿದ. ತನ್ನ ಮಗಳನ್ನು ಮುಸ್ಲಿಂ ಆಗಿ ಮತಾಂತರ ಮಾಡುತ್ತಾರೆ. ಅವಳನ್ನು "ಲವ್ ಜಿಹಾದ್" ಹೆಸರಿನಲ್ಲಿ ಮದುವೆಯಾಗುವ ಸಂಚು ಹೂಡಿಯೇ ಇದೆಲ್ಲಾ ನಡೆದಿದೆ ಎಂದು ಹೇಳಿಕೆ ಕೊಟ್ಟ. ಪೋಲಿಸರು ಅಂತು ಸಾಹಸ ಮಾಡಿ ರೆಡ್ಡಿಯ ಮಗಳು ಸೌಮ್ಯಳನ್ನು ಕೋರ್ಟಿನ ಕಟಕಟೆಯಲ್ಲಿ ನಿಲ್ಲಿಸಿದರು. ಜಬ್ಬಾರನಿಗಾಗಿ ಲತೀಫ, ಪ್ರಸಾದನ ಕಣ್ಣುಗಳು ಹುಡುಕಾಡಿದವು. ನ್ಯಾಯಧೀಶರು 'ಏನಮ್ಮ, ನಿನಗೆ ಹದಿನೆಂಟು ವರ್ಷವಾಗಿದೆ. ನೀನು ನಿನ್ನ ಮನಸ್ಸಿನಂತೆ ಮದುವೆಯಾಗುವುದಕ್ಕೆ ಸ್ವತಂತ್ರಳಿದ್ದೀಯ. ಜಬ್ಬಾರನೊಂದಿಗೆ ನೀನು ಓಡಿ ಹೋಗಿದ್ದೀಯಾ ಎಂದು ನಿನ್ನ ತಂದೆ ಕೇಸು ಹಾಕಿದ್ದಾರೆ. ಇದಕ್ಕೆ ನಿನ್ನ ಅಭಿಪ್ರಾಯವೇನು?' ಎಂದು ಪ್ರಶ್ನಿಸಿದರು. ಸೂಜಿ ಬಿದ್ದರೂ ಕೇಳುವಷ್ಟು ಕೋರ್ಟು ನಿಶಬ್ಧವಾಗಿತ್ತು. ಭಗವದ್ ಸಂಘ, ಅಬ್ಬಾಸಖಾನ್ ಸಂಘದ ಹುಡುಗರು ಸೌಮ್ಯಳ ಮಾತಿಗಾಗಿ ಕುತೂಹಲದ ಹೂಟೆಗಳಾಗಿದ್ದರು. ಸೌಮ್ಯ ಕೈಮುಗಿದು 'ನಾನು ಓಡಿ ಹೋಗಿದ್ದು ನಿಜ. ಮದುವೆಯಾಗಿರುವುದೂ ನಿಜ, ಲವ್ ಮಾಡಿದ್ದೂಹೌದು,ಜಿಹಾದ್ ಇದ್ದದ್ದು ನಮ್ಮ ಸೋದರ ಮಾವನಿಗೂ ನಮ್ಮಪ್ಪನಿಗೂ...ಸೋದರ ಮಾವನ ಮಗನನ್ನು ಚಿಕ್ಕಂದಿನಿಂದಲೇ ಪ್ರೀತಿಸುತ್ತಿದ್ದೆ. ಆದರೆ ಅಪ್ಪ ವೃತ್ತಿ ವೈಷಮ್ಯದಿಂದ ನಾವಿಬ್ಬರು ಮದುವೆಯಾಗುವುದನ್ನು ವಿರೋಧಿಸುತ್ತಿದ್ದರು. ಬೀದಿಯಲ್ಲಿ ಹೋಗೋ ದಾಸಯ್ಯನಿಗೆ ಬೇಕಾದ್ರೂ ಕೊಟ್ಟೇನೂ ಅವನಿಗಲ್ಲ ಅಂತ ಅಪ್ಪ ಯಾವಾಗಲೂ ಹೇಳುತ್ತಿದ್ರು. ಬೇರೆ ಮದುವೆಯ ತಯಾರಿಯೂ ಮನೆಯಲ್ಲಿ ಶುರುವಾಗಿದ್ದರಿಂದ ಜಬ್ಬಾರನನ್ನು ಸಹಾಯಕ್ಕೆ ಕೇಳಿದೆ. ಅವನು ನನ್ನ ಮತ್ತು ಶೇಖರನನ್ನು ಸೇರಿಸಲು ಸಹಾಯ ಮಾಡಿದ ಅಷ್ಟೇ. ಎಂದ ಮಾತಿಗೆ ರೆಡ್ಡಿ ಕುಟುಂಬ ಸ್ತಬ್ಧವಾಯಿತು. ಕೋರ್ಟಿಗೆ ಕಾಲಿಟ್ಟ ಜಬ್ಬಾರ, ಶೇಖರ ಕೂಡ ಸೌಮ್ಯಳ ಮಾತನ್ನು ಬೆಂಬಲಿಸುತ್ತಿದ್ದಂತೆ ಭಗವದ್ ಸಂಘ, ಅಬ್ಬಾಸಖಾನ್ ಸಂಘದ ಹುಡುಗರು ಕಾರಿನಲ್ಲಿಟ್ಟಿದ್ದ ಲಾಂಗ್‌ಗೆ ರಕ್ತದ ರುಚಿ ತೋರಿಸಲಾಗಲಿಲ್ಲ ಎಂಬ ಸಂಕಟ, ನಿರಾಶೆಯಿಂದ ಕೋರ್ಟಿನಿಂದ ಹೊರ ಹೊರಟರು.

■

# 4ನೇ ಸೆಮಿಸ್ಟರ್ ಬಿ.ಬಿ.ಎ (ಎನ್.ಇ.ಪಿ 2022–23)

## ಪದವಿ ಪರೀಕ್ಷೆಯ ಮಾದರಿ ಪ್ರಶ್ನೆ ಪತ್ರಿಕೆ

### ಕನ್ನಡ ಭಾಷಾ ಪತ್ಯ

### ನಿರ್ವಹಣಾ ಸೌರಭ–4 (Fresher Scheme)

**ಸಮಯ : 2.30 ಗಂಟೆ** | **ಗರಿಷ್ಠ ಅಂಕಗಳು : 60**

**I. ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (5x2=10)**

1. ಕುಂಜವನದ ಕುರಿತು ಬಾದಶಹ ಮತ್ತು ರಾಮರಾಜನ ಪತ್ರ ವ್ಯವಹಾರ.
2. ಪ್ರಭಾತ್ ಪಟ್ನಾಯಕ್ ಗುರುತಿಸುವ ನವ–ಉದಾರಿಕರಣದ ನೀತಿ.
3. ಜಿ.ಎಸ್.ಎಸ್ ಅವರ ಐಕ್ಯಗಾನದ ಆಶಯ.
4. ಅಂಬೇಡ್ಕರ್ ಅವರು ಲಂಡನ್ನಿಂದ ಭಾರತಕ್ಕೆ ಹಿಂದಿರುಗಿದಾಗ ದೊರೆತ ಭವ್ಯ ಸ್ವಾಗತ.
5. ಸೀತಮ್ಮ ಮತ್ತು ರಂಗಮ್ಮರ ಸ್ನೇಹ
6. ಗೋಲ್ಗೊಥಾ ಶಿಖರದಲ್ಲಿ ಯೇಸುವನ್ನು ಶಿಲುಬೆಗೇರಿಸಿದ ಪರಿ
7. ಚಿಪ್ಕೋ ಚಳುವಳಿಯಲ್ಲಿ ಭಾಗವಹಿಸಿದವರುಗಳು
8. ಏಳೆಂಟು ವರ್ಷದ ಲತೀಫನನ್ನು ಕರೆದುಕೊಂಡು ಬಂದು ಧರ್ಮಣ್ಣ ತಮ್ಮ ಮನೆಗೆ ಇಟ್ಟುಕೊಳ್ಳುವ ಕಾರಣ ತಿಳಿಸಿ.

**II. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (4x5=20)**

1. ವಿಜಯನಗರದ ವಿನಾಶಕ್ಕೆ ಕಾರಣವಾದ ಒಳಸಂಚುಗಳನ್ನು ವಿಶ್ಲೇಷಿಸಿ.
2. ಲೋಕ ನಾಯಕರ ಮಧ್ಯದಲ್ಲಿ ಅಂಬೇಡ್ಕರ್ ಅವರು ಮಾಡಿದ ಅಸ್ಕಲಿತ ಭಾಷಣದ ಪರಿಣಾಮಗಳನ್ನು ವಿವರಿಸಿ.
3. ನಲ್ಲಿಯಲ್ಲಿ ನೀರು ಬಂತು ಕಥೆಯ ಹಿನ್ನೆಲೆಯಲ್ಲಿ ರಂಗಮ್ಮ ಮತ್ತು ಸೀತಮ್ಮರ ಮನಸ್ತಾಪಗಳನ್ನು ವಿಮರ್ಶಿಸಿ.
4. ಚಿಪ್ಕೋ ಚಳುವಳಿಯ ಕಾರಣ ಪರಿಣಾಮಗಳನ್ನು ವಿಶ್ಲೇಷಿಸಿ.

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು ಪುಟಗಳಷ್ಟು ಉತ್ತರಿಸಿ. (2x10=20)**

1. ಅಶ್ವತ್ಥಾಮನಿಗೆ ಬಾಲವಧೆಯ ಪಾಪ ದೊರೆಕೊಂಡುದರ ಹಿನ್ನೆಲೆಯನ್ನು ವಿಶ್ಲೇಷಿಸಿ.

2. ದೇಶ ವಿಭಜನೆಯ ಕಾಲಮಾನದಲ್ಲಿ ನಿರಾಶ್ರಿತರಾದ ಹೆಣ್ಣು ಮಕ್ಕಳ ದುಸ್ಥಿತಿಯನ್ನು ವಿವರಿಸಿ.
3. ಚಂದ್ರಹಾಸನ ಅಭ್ಯುದಯವನ್ನು ಪರಿಚಯಿಸಿ.
4. ಕ್ಲೈಮ್ಯಾಕ್ಸ್ ಶೀರ್ಷಿಕೆಯ ಔಚಿತ್ಯವನ್ನು ಕಥೆಯ ಹಿನ್ನೆಲೆಯಲ್ಲಿ ತಿಳಿಸಿ.

**VI. ಯಾವುದಾದರೂ ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (2x5=10)**

1. ಯೋಧ ಮತ್ತು ಹೆಂಗಸು ಕವಿತೆಯ ಸಾಂಸ್ಕೃತಿಕ ಸ್ವರೂಪ.
2. ಜಲಿಯನ್ ವಾಲಾಬಾಗ್ ಅತ್ಯಾಕಾಂಡದ ಕುರಿತು ಭಗತ್‌ಸಿಂಗನ ಆಲೋಚನೆಗಳು.
3. ಸಕಲ ಜೀವ ದಯಾಪರ ದಸರಯ್ಯ
4. ಗರುಡುಗಂಬಯ್ಯ ದಾಸಯ್ಯನನ್ನು ಪರಿಚಯಿಸಿ

* * *

**ಸಂಪಾದಕರು**

**ಡಾ. ಭಾಗ್ಯಲಕ್ಷ್ಮಿ ಎಸ್.**
ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು,
ನರಸಿಂಹರಾಜ ಕಾಲೋನಿ,
ಬಸವನಗುಡಿ, ಬೆಂಗಳೂರು – 560019

**ಪ್ರೊ. ಆರ್. ವಸಂತಕುಮಾರ್**
ಮುಖ್ಯಸ್ಥರು, ಕನ್ನಡ ವಿಭಾಗ
ಜೈನ್ ಕಾಲೇಜು, ವಿ.ವಿ.ಪುರಂ, ಬೆಂಗಳೂರು–560 021

**ಡಾ. ಪೂರ್ಣಿಮ ಎಸ್.**
ಮುಖ್ಯಸ್ಥರು, ಕನ್ನಡ ವಿಭಾಗ
ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್
# 40 ಗರ್ಲ್ಸ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು–560 020